# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಶುಕ್ರ ಸಂಜೀವಿನೀ

ಕವಿ

## ಶ್ರೀಧರ ಡಿ. ಎಸ್.

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ನವೆಂಬರ್ ೩೦, ೨೦೧೯

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com Blog: www.yakshaprasangakosha.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ  ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ  ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



ಪ್ರೊ. ಎಂ. ಎ. ಹೆಗಡೆ
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



ಎಸ್. ಎಚ್. ಶಿವರುದ್ರಪ್ಪ
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ವಿವಿಧ ಪುರಾಣಗಳು

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಉಡುಪಿ ಯಕ್ಷಗಾನ ಕೇಂದ್ರ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೪೬೭

| | |
|---|---|
| ಸಂಧಿ - 1. ಭೃಗುಶಾಪ | : ಪದ್ಯ 001 - 116 |
| ಸಂಧಿ - 2. ಶುಕ್ರೋದ್ಭವ | : ಪದ್ಯ 117 - 180 |
| ಸಂಧಿ – 3. ದೈತ್ಯೋದ್ಧಾರ | : ಪದ್ಯ 181 - 257 |
| ಸಂಧಿ – 4. ಸಂಜೀವಿನೀಸಿದ್ಧಿ | : ಪದ್ಯ 258 - 301 |
| ಸಂಧಿ – 5. ಹರಿಚಾರ್ವಾಕ | : ಪದ್ಯ 302 - 365 |
| ಸಂಧಿ – 6. ಮೃತಸಂಜೀವಿನೀ | : ಪದ್ಯ 366 - 467 |

**ಪಾತ್ರಗಳು:**

| | | |
|---|---|---|
| ಸಂಧಿ - 1. ಭೃಗುಶಾಪ - | ಇಂದ್ರ | ತಮಾಸುರ |
| | ಬೃಹಸ್ಪತಿ | ಉದ್ಧತಾಸುರ |
| | ಅಗ್ನಿ | ರುಧಿರಾಕ್ಷ |
| | ಯಮ | ಕುಂಭೋದರ |
| | ವಾಯು | ಖ್ಯಾತಿ |
| | ದೇವದೂತ | ಮಹಾವಿಷ್ಣು |
| | ವಟುಗಳು | ಭೃಗುಋಷಿ |
| ಸಂಧಿ - 2. ಶುಕ್ರೋದ್ಭವ - | ಉಶನ | ಈಶ್ವರ |
| | ತಮಾಸುರ | ಪಾರ್ವತಿ |
| | ಕುಬೇರ | ರಾಕ್ಷಸರು |
| ಸಂಧಿ – 3. ದೈತ್ಯೋದ್ಧಾರ - | ಪ್ರಹ್ಲಾದ | ಇಂದ್ರ |
| | ನಾರದ | ದೇವದೂತ |
| | ಶುಕ್ರಾಚಾರ್ಯ | ಮಾರುತ |
| | ಸಂಹ್ಲಾದ | ವರುಣ |
| | ಅನುಹ್ಲಾದ | ಯಮ |
| | ಶಿಬಿ | ಅಗ್ನಿ |
| | ಭಾಷ್ಕಳ | |
| ಸಂಧಿ – 4. ಸಂಜೀವಿನೀಸಿದ್ಧಿ - | ಶುಕ್ರಾಚಾರ್ಯ | ಜಯಂತಿ |
| | ಇಂದ್ರ | ಈಶ್ವರ |
| | ಬೃಹಸ್ಪತಿ | |

| | | |
|---|---|---|
| ಸಂಧಿ – 5. ಹರಿಚಾರ್ವಾಕ - | ಇಂದ್ರ | ವೃಷಪರ್ವ |
| | ಮಹಾವಿಷ್ಣು | ಶರಭ |
| | ಮಾಯಾಮೋಹನ | ಶುಕ್ರಾಚಾರ್ಯ |
| | ಬೃಶುಂಡಿ | ಜಯಂತಿ |
| | ಪ್ರಹ್ಲಾದ | ದೇವಯಾನಿ (ಬಾಲಕಿ) |
| ಸಂಧಿ – 6. ಮೃತಸಂಜೀವಿನೀ - | ಕಚ | ಶುಕ್ರಾಚಾರ್ಯ |
| | ದೇವಯಾನಿ | ವೃಷಪರ್ವ |

**ಕಥಾ ಸಾರಾಂಶ:**

ಆಚಾರ್ಯಶುಕ್ರರ ದೈತ್ಯಗುರುತ್ವದ ಸಾಧನೆ- ಸಿದ್ಧಿ-ಸೋಲುಗಳನ್ನು ಒಂದು ಕಥೆಯನ್ನಾಗಿ ಕಟ್ಟಿಕೊಳ್ಳಲಾದ ಕೃತಿ ಶುಕ್ರಸಂಜೀವಿನೀ. ಪುರಾಣಾಂತರಗಳಲ್ಲಿ ಹಂಚಿಹೋದ ಕಥೆಗಳನ್ನು ರಂಗಕೃತಿಗಾಗಿ ಸಂಯೋಜಿಸಲಾಗಿದೆ. ಹೆಚ್ಚಿನೆಲ್ಲಾ ಪುರಾಣಗಳಲ್ಲಿ ಪ್ರಸ್ತಾವಿಸಲ್ಪಟ್ಟ ಶುಕ್ರಾಚಾರ್ಯರ ಆಖ್ಯಾನಗಳನ್ನು ಈ ಕೃತಿಗೆ ಮೂಲವಾಗಿ ಪರಿಗಣಿಸಬೇಕು. 'ಹರಿಚಾರ್ವಾಕ' ಭಾಗದಲ್ಲಿ ಬರುವ ಚಾರ್ವಾಕವಾದ - ಬೃಹಸ್ಪತಿ ಶುಕ್ರವೇಷದಲ್ಲಿ ಮಾಡಿದ್ದು ಎಂಬುದು ಹೆಚ್ಚಿನ ಪುರಾಣಗಳ ಹೇಳಿಕೆಯಾದರೂ ಒಂದು ಕಡೆ ಮಾತ್ರ ಬರುವ 'ಮಾಯಾ-ಮೋಹನ' ನನ್ನು ಆಯ್ದುಕೊಳ್ಳಲು ಕಾರಣ ರಂಗಕ್ಕೆ ಸುಂದರವಾಗಿ ಒದಗುವ ವೇಷ ಮತ್ತು ನಾಟ್ಯ. ಇಲ್ಲಿ ನಿರೂಪಿತವಾದ ಕಥೆ, ಪಾತ್ರಗಳ ಹಿನ್ನೆಲೆ ಭಿನ್ನ ಭಿನ್ನವಾಗಿಯೂ ಪುರಾಣಾಂತರಗಳಲ್ಲಿವೆ. ಉದಾ: ದೇವಯಾನಿಯ ತಾಯಿ ಜಯಂತಿಯಾಗಿದ್ದರೆ, ಪ್ರಿಯವ್ರತರಾಜನ ಮಗಳಾಗಿದ್ದಳು ಎಂಬುದು ಇನ್ನೊಂದು ಹೇಳಿಕೆ. ಆದ್ದರಿಂದ 'ಶುಕ್ರಸಂಜೀವಿನೀ' ಕೃತಿಯನ್ನು ಒಂದು ರಂಗಕೃತಿಯಾಗಿ ಗಮನಿಸಬೇಕು. ಈಗಾಗಲೇ ಸುಪ್ರಸಿದ್ಧವಾಗಿರುವ ಕಚದೇವಯಾನಿ ಪ್ರಸಂಗವನ್ನು ಇಲ್ಲಿ ಭಿನ್ನದೃಷ್ಟಿಯಿಂದ ನೋಡಲಾಗಿದೆ. ಪುರುಷಪ್ರಯತ್ನಕ್ಕೆ - ಆತ್ಮಬಲವೇ ಪ್ರಧಾನವೆಂದು ತಿಳಿದು ನಿರಂತರ ಪ್ರಯತ್ನಶೀಲನಾಗಿ ಸೋಲುತ್ತಾ-ಗೆಲ್ಲುತ್ತಾ ಮರಳಿ ಮರಳಿ ಪ್ರಯತ್ನಿಸುತ್ತಾ ತಮದಿಂದ - ರಜಕ್ಕೆ, ರಜದಿಂದ - ಸತ್ತ್ವಕ್ಕೆ ಸಾಗುವ ಶುಕ್ರಾಚಾರ್ಯನನ್ನು ಇಲ್ಲಿ ಗಮನಿಸಬೇಕು - 'ಭೃಗುಶಾಪದ' ಕಥೆ ಶುಕ್ರನು ದೈತ್ಯಗುರುವಾಗುವ ಪೀಠಿಕೆಯಾಗಿ ಬಂದಿದ್ದು - ವಿಷ್ಣುವಿನ ದಶಾವತಾರದ ಹಿನ್ನೆಲೆಯನ್ನು ಹೊಂದಿದೆ. ಯೋಗ್ಯ ಶಿಷ್ಯರು ದೊರೆಯದ ಅರ್ಹಗುರುವಿನ ಒಡಲಾಳದ ನೋವು ಕೂಡ ಇಲ್ಲಿ ಪ್ರತಿಪಾದಿತವಾಗಿದೆ.

'ಭೃಗುಶಾಪ', 'ಶುಕ್ರೋದ್ಭವ', 'ದೈತ್ಯೋದ್ಧಾರ', 'ಸಂಜೀವಿನೀಸಿದ್ಧಿ', 'ಹರಿ-ಚಾರ್ವಾಕ' ಮತ್ತು 'ಮೃತಸಂಜೀವಿನೀ' - ಇವು ಆರು ಒಳವಿಭಾಗಗಳು. ಇವುಗಳನ್ನು ಕಿರು ಅವಧಿಯ ಪ್ರತ್ಯೇಕ ಪ್ರಸಂಗಗಳಾಗಿಯೂ ಬಳಸಿಕೊಳ್ಳಬಹುದು.

**ಕವಿ ಪರಿಚಯ:**

ನಿವೃತ್ತ ಕನ್ನಡ ಉಪನ್ಯಾಸಕ. ಸಾಹಿತಿ, ಯಕ್ಷಗಾನ ಅರ್ಥಧಾರಿ ಮತ್ತು ಪ್ರಸಂಗ ಕರ್ತೃ. ಯಕ್ಷಗಾನ ವಿಮರ್ಶಕ. ಊರು - ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕು, ನಿಟ್ಟೂರು ಬಳಿಯ ಧರೆಮನೆ. ಕಳೆದ ಮೂವತ್ತಾರು ವರ್ಷಗಳಿಂದ ನೆಲೆಸಿರುವುದು ಮಂಗಳೂರು ತಾಲೂಕಿನ ಕಿನ್ನಿಗೋಳಿಯಲ್ಲಿ. ವಿದ್ಯಾರ್ಥಿ ದೆಸೆಯಿಂದಲೇ ಯಕ್ಷಗಾನದಿಂದ ಆಕರ್ಷಿತ. ವೇಷಧಾರಿಯಾಗಿ, ಅರ್ಥಧಾರಿಯಾಗಿ ಪಳಗಲು ವಿದ್ಯಾಭ್ಯಾಸ ಮಾಡಿದ ಉಡುಪಿ ಸಹಕಾರಿಯಾಯಿತು.

ಸುಮಾರು ಮೂವತ್ತೊಂದು ಯಕ್ಷಗಾನ ಪ್ರಸಂಗಗಳ ರಚಯಿತ. ಉಡುಪಿ ಯಕ್ಷಗಾನ ಕೇಂದ್ರ ಯಕ್ಷಗಾನ ಪ್ರಸಂಗ ಮಾಲಿಕಾ ಎಂಬ ಶೀರ್ಷಿಕೆಯಲ್ಲಿ ೧೩ ಪ್ರಸಂಗಗಳನ್ನು ಒಂದೇ ಕೃತಿಯಲ್ಲಿ ಪ್ರಕಟಿಸಿದೆ. ಯಕ್ಷಗಾನದ ಸುಮಾರು ನೂರಾಮೂವತ್ತು ಮಟ್ಟುಗಳನ್ನು ವಿವಿಧ ಪ್ರಸಂಗಗಳಲ್ಲಿ ಬಳಸಿಕೊಳ್ಳಲಾಗಿದೆ. ಪ್ರಸಂಗ ರಚನೆ ಮಾತ್ರವಲ್ಲದೆ, ಯಕ್ಷಗಾನ ಕ್ಷೇತ್ರಕ್ಕೆ ಸಂಬಂಧಿಸಿದ ನೂರಾರು ವಿಮರ್ಶೆಗಳು, ಚಿಂತನೆಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ, ಗ್ರಂಥಗಳಲ್ಲಿ ಪ್ರಕಟಗೊಂಡಿವೆ. ಕಿನ್ನಿಗೋಳಿಯ `ಯಕ್ಷಲಹರಿ' ಯಕ್ಷಗಾನ ಸಂಸ್ಥೆಯಲ್ಲಿ ೨೪ ವರ್ಷ ಕಾರ್ಯದರ್ಶಿಯಾಗಿ ಸೇವೆ. ಹಲವು ತಾಳಮದ್ದಲೆ ಸ್ಪರ್ಧೆಗಳನ್ನು, ಸಪ್ತಾಹಗಳನ್ನು ಆಯೋಜಿಸಿದ್ದಾರೆ. ಜೊತೆಗೆ, ವಿವಿಧ ಸಂಘ ಸಂಸ್ಥೆಗಳು ಆಯೋಜಿಸಿರುವ ಆಟ-ಕೂಟಗಳಲ್ಲಿ ಅವಲೋಕನಕಾರರಾಗಿ ಮತ್ತು ಗೋಷ್ಠಿ, ಕಮ್ಮಟಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡ ಅನುಭವ. ಅರ್ಥಧಾರಿಯಾಗಿ ಸಾವಿರಾರು ಕೂಟಗಳಲ್ಲಿ ಭಾಗವಹಿಸುವಿಕೆ. ಎಲ್ಲ ಬಗೆಯ ಪಾತ್ರಗಳ ನಿರ್ವಹಣೆ. ಅವಧಾನಗಳಲ್ಲಿ ಪೃಚ್ಛಕರಾಗಿ, ಸಂಘ-ಸಂಸ್ಥೆಗಳ ಸಲಹೆಗಾರರಾಗಿ, ಶ್ರೀ ಗುರು ರಾಘವೇಂದ್ರ ಸಂಚಾರಿ ಯಕ್ಷಗಾನ ಮಂಡಳಿ ಹೊಸಬೆಟ್ಟು ಸುರತ್ಕಲ್ ಇದರ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಣೆ. ಸಾಹಿತ್ಯದ ಇತರ ಪ್ರಕಾರಗಳಲ್ಲೂ ಆಸಕ್ತಿ. ರಾಜಕೀಯ ವಿಶ್ಲೇಷಣೆ, ರಂಗ ವಿಮರ್ಶೆ, ಲಲಿತ ಪ್ರಬಂಧ, ನಗೆ ಲೇಖನಗಳನ್ನು ಬರೆಯುವುದೂ ಹವ್ಯಾಸ. ಹಾಸ್ಯ ಬರಹ ಕುರಿತ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಬಹುಮಾನವೂ ಬಂದಿದೆ. 'ಬಸ್ಸು ಜಟಕಾ ಬಂಡಿ' ಎಂಬ ನಗೆ ಲೇಖನಗಳ ಪುಸ್ತಕ ಪ್ರಕಟಗೊಂಡಿದೆ. ಶ್ರೀರಾಮಚಂದ್ರಾಪುರ ಮಠದಿಂದ ಪ್ರಕಟಗೊಂಡ ಗುರುಗ್ರಂಥಮಾಲಿಕೆಯಲ್ಲಿ ಶುಕ್ರಾಚಾರ್ಯ, ದ್ರೋಣಾಚಾರ್ಯ, ಮಹಾಮುನಿ ಶುಕ ಎಂಬ ಮೂರು ಕೃತಿಗಳು ಪ್ರಕಟವಾಗಿವೆ. ಮಂಗಳೂರು ವಿಶ್ವವಿದ್ಯಾನಿಲಯದ ದ್ವಿತೀಯ ಬಿಕಾಂ ಪದವಿ ಕನ್ನಡ ಪಠ್ಯಪುಸ್ತಕದಲ್ಲಿ `ಮಹಾಪ್ರಸ್ಥಾನ' ಪ್ರಸಂಗದ ಪಾಂಡವ ಸ್ವರ್ಗಾರೋಹಣದ ಒಂದು ಭಾಗ ಪಠ್ಯವಾಗಿದೆ.

ಯಕ್ಷಗಾನ ಪತ್ರಿಕೆ `ಕಣಿಪುರ'ದಲ್ಲಿ ರಂಗಸ್ಥಳದ ಅಭಿಜಾತ ಕವಿಗಳು ಎಂಬ ಅಂಕಣವನ್ನು ಬರೆಯುತ್ತಿದ್ದು, ಇದರಲ್ಲಿ ಯಕ್ಷಗಾನ ಸುಪ್ರಸಿದ್ಧ ಕವಿಗಳ ಪರಿಚಯ ನೀಡಲಾಗುತ್ತಿದೆ. ಬೆಂಗಳೂರಿನ `ಸುದಿನ ಸುರಭಿ' ಪತ್ರಿಕೆಯಲ್ಲಿ `ಪುರಾಣ ಸ್ವಾರಸ್ಯಗಳು' ಎಂಬ ಅಂಕಣ ಬರಹ ಪ್ರಕಟಗೊಂಡಿದೆ. ಶ್ರೀ ರಾಮಚಂದ್ರಾಪುರ ಮಠದ `ಧರ್ಮಭಾರತೀ' ಮಾಸಪತ್ರಿಕೆಯಲ್ಲಿ `ವೀರತಪಸ್ವಿ' ಧಾರಾವಾಹಿಯಾಗಿ ಪ್ರಕಟವಾಗುತ್ತಿದೆ.

ಉಡುಪಿಯ ಯಕ್ಷಗಾನ ಕಲಾರಂಗ ಸಂಸ್ಥೆ ೨೦೧೫ನೇ ಸಾಲಿನ `ತಲ್ಲೂರು ಕನಕ ಅಣ್ಣಯ್ಯ' ಪ್ರಶಸ್ತಿ ನೀಡಿ ಗೌರವಿಸಿದೆ. ಜೊತೆಗೆ ಅವರ ಪ್ರಸಂಗಗಳ ಕುರಿತ ಸಾಹಿತ್ಯ-ಸಾಧನಾವಲೋಕನ, ಅವರ ಯಕ್ಷಗಾನ ಪ್ರಸಂಗಗಳ ವಸ್ತುವಿನ್ಯಾಸ-ಆಶಯ, ಛಂದಸ್ಸಿನ ಬಳಕೆ ಕುರಿತಾಗಿ ಯಕ್ಷ ವಿದ್ವತ್ ಲೋಕ ಭಾಷಣ-ಚರ್ಚೆಗಳನ್ನು ದಿನವಿಡೀ ನಡೆಸಿದ್ದು ಗಮನಾರ್ಹ. ಯಕ್ಷಗಾನ ಬಯಲಾಟ ಅಕಾಡೆಮಿ ಶ್ರೀಧರರ `ಯಕ್ಷಗಾನ ಪ್ರಸಂಗ ಮಾಲಿಕಾ' ಕೃತಿಗೆ ೨೦೧೧ನೇ ಸಾಲಿನ ಪುಸ್ತಕ ಪ್ರಶಸ್ತಿ ನೀಡಿ ಗೌರವಿಸಿದೆ. ಶಿವಮೊಗ್ಗದಲ್ಲಿ ೨೦೧೬ರ ಜನವರಿಯಲ್ಲಿ ನಡೆದ ಅಖಿಲ ಭಾರತ ೧೧ನೇ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ೨೦೧೬ರ ಫೆಬ್ರವರಿ ತಿಂಗಳಲ್ಲಿ ಕೆರೆಮನೆಯಲ್ಲಿ ನಡೆದ `ಶಂಭುಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ' ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟಿದ್ದಾರೆ. `ಜಡಭರತ' ಪೌರಾಣಿಕ ಕಾದಂಬರಿ ಪ್ರಕಟಗೊಂಡಿದ್ದು, `ಅಸುರ ಗುರು' ಎಂಬ ಬೃಹತ್ ಕಾದಂಬರಿ ಪ್ರಕಟಣೆಗೆ ಸಿದ್ಧವಾಗಿದೆ.

ಇವರು ಬರೆದ ಪ್ರಸಂಗಗಳು: ಕಬಂಧ ಮೋಕ್ಷ, ಸುದ್ಯುಮ್ನ, ಆದಿನಾರಾಯಣ ದರ್ಶನ, ಕುವಲಯಾಶ್ವ, ಗರುಡ ಪ್ರತಾಪ, ಬಾಲಭಾರತ, ಸತ್ವಶೈಥಿಲ್ಯ, ಮಹಾಪ್ರಸ್ಥಾನ, ಪರೀಕ್ಷಿತ-ಆಸ್ತೀಕಜನ್ಮ, ಜನಮೇಜಯ, ಶುಕ್ರಸಂಜೀವಿನೀ, ಅಗಸ್ತ್ಯ, ಜಡಭರತ, ಸಮ್ರಾಟ್ ಮರುತ್ತ, ಕುಜ್ಯಂಭ ಕಂದರ, ಯಕ್ಷಪ್ರಶ್ನೆ, ಯೋಗಾವತಾರಂ, ಫಲ್ಗುಣೀ ತೀರ್ಥ ಮಹಿಮೆ, ವೀರ ಚಿತ್ರಧ್ವಜ, ಶ್ರೀರಂಗ ರಾಯಭಾರ,

ನಾಲಾಯನೀ, ಬಕನ ಬಂಡಿ, ಅಂಗಾರಪರ್ಣ ವೃತ್ತಾಂತ, ಧೌಮ್ಯಪರಿಗ್ರಹ, ದ್ರೌಪದೀ ಸ್ವಯಂವರ, ದುರ್ಗಮಾಸುರ ವಧೆ, ಶರವೂರ ಶ್ರೀದುರ್ಗೆ, ಪೃಥುಯಜ್ಞ, ಹನ್ನಾರ ರಾಮೇಶ್ವರ ಮಹಾತ್ಮೆ, ನೈಮಿಷಾರಣ್ಯ ನಿರ್ಮಾಣ, ಸ್ವರ್ಣಕಮಲ

**ಟಿಪ್ಪಣಿ:**

ಆರು ಅಧ್ಯಾಯಗಳು, ಐವತ್ತರಷ್ಟು ಪಾತ್ರಗಳು, ಎಂಬತ್ತಕ್ಕಿಂತ ಹೆಚ್ಚು ಮಟ್ಟುಗಳು, ಸರಳ ಸುಂದರ ಕಾವ್ಯಾತ್ಮಕ ಪದ್ಯಗಳು, ಸುಪ್ರಸಿದ್ಧ ಪಾತ್ರವೊಂದರ ಅಪ್ರಸಿದ್ಧ ಕಥೆಗಳು, ಸ್ವರ್ಗ ಮರ್ತ್ಯ ಪಾತಾಳಗಳ ಅನೂಹ್ಯ ದೃಶ್ಯಾವಳಿಗಳು ಇವೆಲ್ಲ ಶುಕ್ರಸಂಜೀವಿನಿಯ ಜೀವಾಳಗಳು. ಬೃಹಸ್ಪತಿ ಶುಕ್ರರೆಂಬ ಮಹಾಗುರುಗಳಿಬ್ಬರ ಮೇಲಾಟ, ಕ್ರಮ ಕ್ರಮವಾಗಿ ಶುಕ್ರ ತಾಮಸಿಗಳಿಂದ ದೂರಾಗುತ್ತಾ, ಸಾಧಕನಾಗುತ್ತಾ ಸಾಗುವ ನಾಟಕೀಯ ಲಕ್ಷಣ ಇಲ್ಲಿಯ ಕಥೆಯ ವ್ಯಂಜನ. ನಿಕೃಷ್ಟರನ್ನು ದೇವತ್ವಕ್ಕೆ ಏರಿಸುವ ನಿರಂತರ ಹೋರಾಟ ಇಲ್ಲಿಯ ಹೂರಣ. ತೆಂಕು ಬಡಗು ತಿಟ್ಟು ಎರಡರಲ್ಲೂ ಅತ್ಯಂತ ಪ್ರಸಿದ್ಧ ತಾಳಮದ್ದಲೆ ಪ್ರಸಂಗವೆಂದು ಸ್ಥಾಪಿತವಾದ ಈ ಕೃತಿಯ ಪ್ರಾರಂಭದ ಅಧ್ಯಾಯ ಭೃಗುಶಾಪ ಬಯಲಾಟದಲ್ಲೂ ಯಶಸ್ವೀ ಪ್ರಯೋಗಗಳನ್ನು ಕಂಡಿದೆ. ಯುಗಗಳಷ್ಟು ವಿಸ್ತಾರವಾದ ಕಾಲಗತಿಯಲ್ಲಿ ಹರಡಿ ಬಿದ್ದ ಶುಕ್ರಕಥೆ ಇಲ್ಲಿ ಓರಣಗೊಂಡು ಯಕ್ಷಕಾವ್ಯವಾಗಿದೆ. ತಾಳಮದ್ದಲೆ ಬಯಲಾಟ ಎರಡೂ ವಿಚಾರಗಳಿಗೂ ವಿಫುಲವಾದ ಸಾಹಿತ್ಯ ಇಲ್ಲಿದೆ. ಮಾತಿಗೆ ಪೂರಕವಾಗಿ ಅವು ಒದಗಿ ಬರುತ್ತವೆ.

ಪ್ರತಿಯೊಂದು ಅಧ್ಯಾಯಗಳೂ ಪ್ರತ್ಯೇಕ ಕಥಾವಸ್ತುವಾಗಿ ಮೂರು-ನಾಲ್ಕು ಗಂಟೆಗಳಿಗಾಗುವ ಪ್ರಯೋಗದ ಸರಕುಗಳಿದ್ದು, ಒಟ್ಟಾರೆ ಎರಡು ದಿನಕ್ಕಾಗುವ ವಸ್ತು ಇಲ್ಲಿದೆ. ಬೇರೆ ಬೇರೆ ಪುರಾಣಗಳ ಕಥಾಭಾಗಗಳನ್ನು ಒಂದೆಡೆ ಸೇರಿಸಿ ಕಥಾ ಸಂಯೋಜನೆ ಮಾಡಲಾಗಿದೆ. ದೇವಾಸುರ ಸಂಗ್ರಾಮದ ದೃಶ್ಯಗಳ ಜೊತೆ ಭಾವ ಸಂಘರ್ಷ ಮುನ್ನೆಲೆಗೆ ಬಂದು ಕಥೆ ಹೇಳುವುದಷ್ಟೇ ಇಲ್ಲಿಯ ಕೆಲಸವಲ್ಲ. ರಂಗಸ್ಥಳದಲ್ಲಿ ಈಗಾಗಲೇ ಪ್ರಸಿದ್ಧವಾದ ಕಚದೇವಯಾನಿಯ ಕಥೆಯನ್ನು ಬೇರೆ ನೆಲೆಯಿಂದ ಚಿಂತನಕ್ಕೆ ಹಚ್ಚಲಾಗಿದೆ. ಪ್ರತೀ ವಿಭಾಗದಲ್ಲೂ ಐದಾರು ಪಾತ್ರಗಳಿದ್ದು ಎಲ್ಲವೂ ಸ್ವಯಂಪೂರ್ಣವಾಗಿ ಕಲಾವಿದರಿಗೆ ಒಳ್ಳೆಯ ಅವಕಾಶ ನೀಡುತ್ತವೆ. ಮೇಳಗಳಲ್ಲಿ ಹವ್ಯಾಸೀ ಬಳಗಗಳಲ್ಲಿ ಯಶಸ್ವೀ ಪ್ರಯೋಗ ಕಂಡ ಕಥೆ. ಇಂದ್ರ, ಖ್ಯಾತಿ, ತಮ, ಭೃಗು, ವಿಷ್ಣು, ಶುಕ್ರ, ಜಯಂತಿ, ಬೃಹಸ್ಪತಿ, ಶಿವ, ಕಚ, ದೇವಯಾನಿ, ಪ್ರಹ್ಲಾದ, ವೃಷಪರ್ವ, ಬೃಶುಂಡಿ ಮುಂತಾದ ಪಾತ್ರಗಳಿಂದ ಕಥೆಗೆ ರೋಚಕ ಆವರಣವನ್ನು ತೊಡಿಸಲಾಗಿದೆ. ಶ್ರೇಷ್ಠ ಕಲಾವಿದರ ಸಂಯೋಜನೆಯ ಬಹು ಕೃಷಿಗಳಿಂದ ಮತ್ತೆ ಮತ್ತೆ ಚಿಂತನೆಗೆ ಒಳಗಾದ ಕೃತಿ ಶುಕ್ರ ಸಂಜೀವಿನೀ.

# ಪ್ರಸಂಗ ಸಾಹಿತ್ಯ

**ಭಾಮಿನಿ**
ಏಕದಂತನಿಗೆರಗಿ ಸರಸತಿ |
ನಾಕುಮೊಗರಿಗೆ ನಮಿಸಿ ಲಕುಮೀ |
ಶ್ರೀಕರಾಂಘ್ರಿಗೆ ಬಾಗಿ ಗುರುಹಿರಿಯರನು ಬಲಗೊಂಡು ||
ಈ ಕಲೆಯ ಬೆಳಗಿಸಿದ ವಿಬುಧಾ |
ನೀಕಕಾಂ ತಲೆವಾಗಿ ವ್ಯಾಸಮು |
ಹಾಕವಿಗೆ ವಂದಿಸುತ ಪೇಳ್ವೆನು ದೈತ್ಯಗುರುಚರಿತೆ || 1 ||

**ಕಂದ**
ಸುತನೆಂ ಶ್ರೀಪಾದ ಸರ |
ಸ್ವತಿಯರ್ಗೆ ಧರೆಮನೆಯೊಳಿಹ ಶ್ರೀಧರ, ಕಲೆಯಂ ||
ಸತತಂ ಕಾವ ಕಟೀಲೊಳು |
ಸ್ಥಿತಳಾದಂಬಿಕೆಗೆ ಬಾಗಿ ಕೃತಿಯೊಪ್ಪಿಸುವೆಂ || 1 || 2 ||

**ವಾರ್ಧಕ**
ಸುರವಂದ್ಯ ಪ್ರಾಚೀನ ಭೃಗುಕುಲೋದ್ಭವ ಕವಿಯ |
ಚರಿತೆಯಿದು ಭಾಗವತ ಮತ್ಸ್ಯ ವಾಯುಪುರಾಣ |
ವೆರಕಗೊಳೆ ಕಲ್ಪನೆಯು ಭಾರತಮಹಾಕಾವ್ಯದಿಂ ಕಥೆಗಳಾಧರಿಸುತ ||
ಪರಿಣತರ ತಿಳಿವುಮಂ ರಂಗತಂತ್ರಂಗಳಂ |
ಪರಿಗ್ರಹಿಸಿ ಯಕ್ಷಗಾನದೊಳೊರೆವೆನಿದ ಕಲಾ |
ಧರರೆತ್ತಿ ಪತಿಕರಿಸಿ ಬೆಳಗಿಸಲ್ ಬಹುಮಾನ್ಯವೆಂದು ಧನ್ಯತೆ ಪಡೆವೆನು || 1 || 3 ||

***ಸಂಧಿ 1 : ಭೃಗುಶಾಪ***

**ಸೌರಾಷ್ಟ್ರ - ತ್ರಿವುಡೆ**
ಪಾಕಶಾಸನನಿತ್ತನೋಲಗ |
ನಾಕಲೋಕದ ವರ ಸುಧರ್ಮದಿ |
ಲೋಕಪಾಲಾನೀಕ ನಮಿಸಿ ಪ | ರಾಕೆನುತಿರೆ || 1 ||
ಅಂದು ಸಭೆ ರಂಜಿಸಿದುದಮರೀ |
ವೃಂದವಾಡಲು ನಾಟ್ಯ ಗಾಯಕ |
ರಿಂದ ಪಾತಕರಿಂದ ದಿವಿಜರೊ | ಳಿಂದ್ರನೆಂದ || 2 ||
ಕೇಳಿರೈ ದಿಕ್ಪಾಲಮುಖ್ಯರು |
ಶ್ರೀಲಲಾಮನ ದಯದಿ ಸ್ವರ್ಗವ |
ಪಾಲಿಸುತ್ತಿಹೆ ವೈಭವದಿ ನಾ | ನಾಳೆಗೆಂತೊ || 3 ||
ದಿತಿಕುಮಾರರು ದುಷ್ಟರಾದರು |
ಅತಿಬಲಾಢ್ಯರು ಸಮರದುರ್ಗರು |
ಮತಿವಿಹೀನರು ವರವಿಮತ್ತರು | ಪತಿತಖಳರು || 4 ||
ಇವರೊಳಗೆ ತಮನೆಮಗಸಾಧ್ಯನು |
ದಿವದ ಸಿರಿಯನು ಸೆಳೆವ ಮನದಲಿ |
ಭುವನಕಂಟಕ ಕವಿಸೆ ಸೈನ್ಯವ | ತವಿಪುದೆಂತು || 5 || 8 ||

**ಕೇದಾರಗೌಳ - ಝಂಪೆ**
ಅವಧರಿಸು ಸುರಪಾಲಕ | ಸೋಮಕನ |
ಬವರವೆಮಗೇಂ ಕಾಯಕ ||
ಕವಿದು ಬರಲಸುರಕಟಕ | ಸಮರದಲಿ |
ಸವರಿ ತಹೆನೆನೆ ಪಾವಕ || 1 || 9 ||

**ಮಾರವಿ - ಏಕ**
ಗುಡುಗುಡಿಸುತ ಯಮ ನುಡಿದ ನಿಶಾಚರ |
ಗಡಣವು ಬರಲೇನು ||
ಬಿಡುಗಣ್ಣರ ದೊರೆ ಬಿಡು ಬಿಡು ಚಿಂತೆಯ |
ಬಡಿದೊಟ್ಟೈಸುವೆನು || 1 || 10 ||

**ಭೈರವಿ - ತ್ರಿವುಡೆ**
ವಾತ ನುಡಿದನು ಕೇಳ್ ದಿವೌಕಸ |
ನಾಥ ರಾಕ್ಷಸರಾಗಣ ||
ಆತುಕೊಳುವುದಸಾಧ್ಯ ಝುಂಝಾ |
ವಾತದುರುಬೆಯನರೆಕ್ಷಣ ||
ಆತಗಳ ತರಿದೊಟ್ಟುವೆನು ತಮ |
ನೈತರಲಿ ಬಿಡು ಭೀತಿಯ ||
ಏತಕವದಿರ ಚಿಂತೆ ಧೈರ್ಯವ |
ನಾತು ತಾಳಿಕೊ ಮೋದವ || 1 || 11 ||

**ವಾರ್ಧಕ**
ಸುರಪನಂ ಪೌರುಷಪ್ರದರ್ಶನದಿ ಸಂತೈಸು |
ತಿರಲು ದಿಕ್ಪಾಲಕರು ಗುರುಬೃಹಸ್ಪತಿ ಬರ |
ಲ್ಕೆರಗಿ ಸತ್ಕರಿಸುತ್ತಲಾಸನವನಿತ್ತು ಕುಳ್ಳಿರಿಸಲಾನನವೀಕ್ಷಿಸಿ ||
ಪರಿಯಿದೇನೈ ನಾಕದೊಡೆಯ ಸುಖಲೋಕದೊಳು |
ಬರುವುದೆಂತೈ ಚಿಂತೆಯಾಸ್ಯ ಕುಂದಿಹುದೇಕೆ |
ಅರುಹು ನೀನೆನೆ ಕೇಳ್ದು ಮಘವ ಮುದುಡಿದ ಮನದಿ
ಧಿಷಣನೊಡನಿಂತೆಂದನು || 1 || 12 ||

**ಮಧ್ಯಮಾವತಿ - ಆದಿ**
ಗುರುದೇವ ದೈತ್ಯರು ದೇವಸಂಪದವ |
ಧುರದಿಂದ ಗೆಲ್ಲಲೈತರಲಾವೇಂಗೆಯ್ವ ||
ಪರಿಯನರುಹಿರೆನೆ ಪೌರುಷದಿಂದ |
ಮುರಿವೆವೆಂಬರು ನೀವ್ ಪೇಳ್ವುದು ಸೂಕ್ತವೆಂದ || 1 || 13 ||

**ಕಾಪಿ - ಅಷ್ಟ**
ಪಾಕಶಾಸನನೆ ಯೋಚಿಸುತ | ಬಪ್ಪ |
ವ್ಯಾಕುಲವೇನೆಂದು ಮೊದಲೆ ತರ್ಕಿಸುತ |
ಕಾಕುದೈತ್ಯರ ಮೂಲಸಹಿತ | ಕಿತ್ತು |
ಲೋಕ ಕಂಟಕರ ನಿಗ್ರಹಿಪುದೆ ವಿಹಿತ || 1 ||
ಗುರುದೇವ ದೈತ್ಯರ ಬಲವು | ಸ್ಥಿರ |
ವಿರದಾತ್ಮೋನ್ನತರಲ್ಲ ಹೀನರ್ ನಿಶ್ಚಯವು |
ಬರುವ ಧೈರ್ಯವದೆಲ್ಲಿ ಬಹುದು | ಬಂದ |
ರುರುಹಿ ಭಿದುರಕಾಪೋಶನಗೊಳ್ವೆ ನಿಜವು || 2 || 15 ||

**ಬೇಗಡೆ - ಏಕ**
ಮಘವ ಲಾಲಿಸು ಬಲದಿ ಬಹುಪರಿಯ | ಸಾಧಿಸುತಲೋಕವ |
ವಿಗಡತನದಿಂ ಗೆಲಲು ಬಹುದಯ್ಯ ||
ಬಗೆಗಳೆರಡೈ ಶಕ್ತಿಯುಕ್ತಿಗ |
ಳಗಣಿತವು ಮತ್ತವಕೆ ಕವಲುಗಳ್ |
ಮಿಗಿಲು ಗುರು, ವರಬಲಗಳೈದಲು |
ಬಗೆಯರಸುರರು ಮೊದಲೆ ಸಾಧಿಸು || 1 || 16 ||

**ಕಂದ**
ಗುರುವಚನವನವಧಾರಿಸಿ |
ಸುರಪಾಲಂ ಬಪ್ಪ ಕಾಲಮಂ ಕಾದಿರ್ದಂ ||
ಸುರಸಂಪದ ನವನಿಧಿಗಳಿ |
ಗರಸಾದಂ ಬಳಿಕ ವೈಶ್ರವಣನಲಕೇಶಂ || 1 || 17 ||

**ಸೌರಾಷ್ಟ್ರ - ತ್ರಿವುಡೆ**
ದೈತ್ಯಪತಿ ತಮನಿತ್ತನೋಲಗ |
ಸತ್ತ್ವಬಲಯುತ ವೀರದಾನವ |
ಮೊತ್ತಮಂ ಕೂಡುತ್ತ ಶೋಣಿತ | ಪತ್ತನದಲಿ || 1 ||
ದನುಜಪತಿ ತನ್ನವರ ನೋಡುತ |
ಲನುನಯದೊಳುಪಚರಿಸಿ ಯೋಗ್ಯಾ |
ಸನವನೀಯುತ ಮತ್ತೆ ಪೇಳಿದ | ಮನದ ಮಾತ || 2 || 19 ||

**ಕೇದಾರಗೌಳ - ಝಂಪೆ**
ಆಲಿಸಿರಿ ದೈತ್ಯವರರೆ | ಸತ್ತ್ವದಿಂ |
ದಾಳುತಿಹೆ ನಾನೀ ಧರೆ ||
ಕಾಳಗದಿ ನಿಮ್ಮಧಟಿಗೆ | ಬುದ್ಧಿಯನು |
ಕಾಲ ಪೇಳ್ವನು ಕಾಲಿಗೆ || 1 ||
ಸಾಧಿಸಲು ಸ್ವರ್ಗವನ್ನು | ಎನ್ನ ಪದ |
ಕಾದಪ್ಪ ಹಿರಿಮೆಯನ್ನು |
ಸಾಧಕರೆ ಕಾಂಬಿರೇನು | ಪೇಳಿರೆನ |
ಲುದ್ಧತಾಸುರನೆಂದನು || 2 || 21 ||

**ಮಾರವಿ - ಏಕ**
ಕೊಡು ಕೊಡು ನೇಮವ | ದಡಿಗ ದಿವೌಕಸ |
ಗಡಣವ ಕಡಿದೊರಸಿ ||
ಕೊಡಿಸುವೆ ಬಿಡುಗಣ್ಣೊಡೆಯನ ಬಿಡದಿಯ |
ಬಡಿವಾರವ ಬಿಡಿಸಿ || 1 || 22 ||

**ಭೈರವಿ - ಏಕ**
ರುಧಿರಾಕ್ಷನು ಹೂಂಕರಿಸಿ | ಪೇ |
ಳಿದ ದಿವಿಜರನವಗಡಿಸಿ ||
ಪದಕೊಪ್ಪಿಸುವೆನು ಜಯವ | ಮ |
ತ್ತೊದಗಿಪೆನತಿಸಂಪದವ || 1 || 23 ||

**ಘಂಟಾರವ - ಅಷ್ಟ**
ಪಾಲಿಸಪ್ಪಣೆ ಕಾಲಾದಿ ದಿವಿಜರ |
ಕಾಳಗದಿ ಬಡಿದಿಕ್ಕಿ ಸೆರೆ ಪಿಡಿ |
ವಾಳು ನಾ ಕುಂಭೋದರ || 1 || 24 ||

**ತುಜಾವಂತು - ಏಕ**
ಭಲರೇ | ಬಾಹು | ಬಲರೆ || ಪ ||
ಬಲವಿರೋಧಿಯೊಡನೆ ಸೆಣಸಿ |
ಗೆಲುವ ಶೌರ್ಯ ನಿಮ್ಮೊಳಿರಲು |
ತಳುವದೀಗ ದೈತ್ಯಸೇನೆ |
ತೆರಳಲಿ | ಮೇ | ಲೆರಗಲಿ || ಭಲರೇ || 1 ||
ಭರಿತ ಸೈನ್ಯಸಹಿತ ಪೋಗಿ |
ಸುರರ ಸಿರಿಯ ಸೂರೆಗೈದು ||
ಪರಮವಿಕ್ರಮದಲಿ ನಾನು |
ಮೆರೆಯುವೆ | ನಿಮ್ಮ | ಮೆರೆಸುವೆ || ಭಲರೇ || 2 || 26 ||

**ದ್ವಿಪದಿ**
ಅಸುರರೀಪರಿ ಸಮಾಲೋಚಿಸುತ ಬಳಿಕ |
ಮುಸುಕಿದರು ದೇವಲೋಕಕ್ಕೆ ಬೊಬ್ಬಿಡುತ || 1 || 27 ||

**ಆರ್ಯಸವಾಯಿ - ಏಕ**
ಹೇಳದೆ ಕೇಳದೆ ಮುಂದೊತ್ತುವರಾರ್ |
ಖೂಳರೆ ನಿಲ್ಲಿರಿ ನೀವಿಲ್ಲಿ ||
ವೇಳೆಯ ತಿಳಿಯುತ ಹೊಗಲವಕಾಶವ |
ಪಾಲಿಸುವವರಿರೆ ನಾವಿಲ್ಲಿ || 1 || 28 ||

**ಮಾರವಿ - ಏಕ**
ಮಾನದಿ ಪೋಗಿಂತೊರೆ ನಿನ್ನೊಡೆಯಗೆ |
ಶೋಣಿತಪತಿ ತಮನು ||
ದಾನವರೊಡನೈತಂದನು ಸಮರಕೆ |
ತ್ರಾಣವಿರುವುದೇನು || 1 ||
ಏನೇನೇನೇನೆಲೊ ಹುಲು ದಾನವ |
ತ್ರಾಣವೆನಿತೊ ನಿನಗೆ ||
ಏನೆಂದರಿತಿರಿ ಸ್ವರ್ಗವ ನರಕವ |
ಕಾಣಿಸುವೆನು ನಿಮಗೆ || 2 || 30 ||

**ಭಾಮಿನಿ**
ಅಟ್ಟಹಾಸವ ಗೆಯ್ಯೆ ದಾನವ |
ಚಿಟ್ಟನುತ ಚೀರಿದನು ದೂತನು |
ಬಿಟ್ಟುಬಿಡಿ ಜೀವದೊಳೆನುತ ಗೋಳ್ಗುಟ್ಟುವನ ಪಿಡಿದು ||
ಬೊಟ್ಟನಿಡುತಲಿ ಪೆಟ್ಟನಿಕ್ಕುತ |
ಲಟ್ಟೆ ಮರುಗುತ ಬಂದು ಪಾದವ |
ಕಟ್ಟಿ ಬಿನ್ನೈಸಿದನು ನಡುಗುತ ಬಿಟ್ಟಗಣ್ಣವಗೆ || 1 || 31 ||

**ಮುಖಾರಿ - ಏಕ**
ಒಡೆಯ ನೀ ಲಾಲಿಸಬೇಕು ನುಡಿಯ |
ನಡೆಯಲಾರದ ದೊಡ್ಡ ಸೋಜಿಗ ಜೀಯ ||
ಒಡೆಯ ನೀ ಲಾಲಿಸಬೇಕು ನುಡಿಯ | ಪ ||
ದಡಿಗನು ರಕ್ಕಸ | ಪಡೆಯನು ಶೋಣಿತ |
ದೊಡೆಯನು ಕೂಡುತ | ಗುಡುಗುಡಿಸಿದ ನಿ |
ನ್ನೊಡೆಯಗೆ ಪೇಳೆಂ | ದ್ಹೊಡೆದಟ್ಟಿದನು || ಒಡೆಯ || 1 || 32 ||

**ಕೇದಾರಗೌಳ - ಮಟ್ಟೆ**
ಕಿಡಿಯ ಸೂಸಿ ಮಘವ ನುಡಿದ | ದಡಿಗ ದೈತ್ಯರ |
ಗಡಣ ಬರಲು ಬೆದರಲೇಕೆ | ಬಡಿದು ಮೂರ್ಖರ ||
ಬಿಡಿಪೆನಿಂದೆ ಸ್ವರ್ಗದಾಸೆ | ಯೊಡನೆ ದಿವಿಜರ |
ಪಡೆಯು ಬರಲಿ ದಿಕ್ಪತಿಗಳೆ | ಹೊಡೆಸಿ ಡಂಗುರ || 1 ||
ಸುರಪನಿಂತು ಸೈನ್ಯಸಹಿತ | ಗುರ್ವನುಜ್ಞೆಯ |
ಶಿರದಿ ಧರಿಸಿ ಬಂದಸುರರ | ತರಿಯುತಿರೆ ತಮ ||
ಕರೆದು ಕಳುಹೆ ದೈತ್ಯವರರ | ಧುರಕೆ ಸೇನೆಯ |
ಭರಿತವಾಯ್ತು ಸಮರವೇದಿ | ರುಧಿರಜಲಮಯ || 2 || 34 ||

**ಕೇದಾರಗೌಳ - ಝಂಪೆ**
ಭರ್ಗನನು ತಡೆಯುತಾಗ | ಉದ್ಧತನು |
ಭೋರ್ಗುಡಿಸುತೆಂದನೀಗ ||
ಸ್ವರ್ಗವನ್ನೆಮ್ಮೊಡೆಯಗೆ | ನೀಡುತಲಿ |
ನಿರ್ಗಮಿಸಿ ನೀವ್ ಸುಮ್ಮಗೆ || 1 ||
ಸುಟ್ಟುರುಹುವೆನು ದಾನವ | ಗಳಹದಿರು |
ದುಷ್ಟತನಕೇಂ ಗೌರವ ||
ಬಿಟ್ಟೀಗ ಸ್ವರ್ಧಾಮವ | ಸೆಳೆವ ಬಲ |
ವೆಷ್ಟಿಹುದು ನೀನಾರವ || 2 || 36 ||

**ಘಂಟಾರವ - ಅಷ್ಟ**
ಅಗ್ನಿ ಕೇಳೆನ್ನನುದ್ಧತನೆಂಬರು |
ಸಗ್ಗವನು ಬಿಡದಿರಲು ಸುರಪುರ |
ನುಗ್ಗಿ ಸಿಗಿಸಿಗಿದೊಟ್ಟುವೆ || 1 ||
ಕೂಗಿ ಸಾಯದಿರೆಲವೊ ದಾನವ ನಿನ್ನ |
ಸಾಗಿಸುವೆ ಯಮ ಪುರಕೆನುತ ಧನು |
ತೂಗಿ ಶರವನ್ನೆಚ್ಚನು || 2 || 38 ||

**ಶಂಕರಾಭರಣ - ಮಟ್ಟೆ**
ಸರಳು ಖಡ್ಗ ಗದೆಗಳಿಂದ ಸಮರಗೈಯಲು |
ಉರುಳೆ ದನುಜ ಕಂಡು ರುಧಿರನೇತ್ರನೈದಲು || 1 ||
ಅರಿತು ಮರುತ ಮಲೆತು ನುಡಿದನಾರೊ ದುಷ್ಟನೆ |
ದುರುಳತನದಿ ಬಂದಿರೇಕೆ ಮರಳಿ ಸುಮ್ಮನೆ || 2 || 40 ||

**ಮೆಚ್ಚುಗೌಳ - ಅಷ್ಟ**
ರುಧಿರಾಕ್ಷನೆಂದೆಂಬರೆನ್ನನು ಕೇಳ್ನಿಮ್ಮ |
ಅಧಟನು ಮುರಿದೊಟ್ಟುತ ||
ಸದಮಲ ಸ್ವರ್ಗದುನ್ನತಿಯ ಸಂಪದವೆಂಬ |
ಪದಕೇರಿಸುವ ಸೋಮನ || ನಿಸ್ಸೀಮನ || 1 ||

ಮರುಳು ದಾನವ ಸುರಸಿರಿಯ ಸೆಳೆಯಬಂದು |
ತೆರಳಿದರಿಲ್ಲ ಹಿಂದೆ ||
ದೊರೆ ಸಹ ಯಮಪುರಕೈದುವ ಕಾಲವೆಂ |
ದೆರಗಿದ ಸುಳಿದಾತನ || ಪ್ರಭಂಜನ || 2 || 42 ||

**ಮಾರವಿ - ಝಂಪೆ**
ಮರುತನುರುಬೆಯ ತಾಳ | ಲರಿದಾಗಿ ರುಧಿರಾಕ್ಷ |
ನುರುಳಿದನು ರಣಕಣದಿ | ಪರಿಕಿಸುತಲಿದನು ||
ಸುರರ ಸಂದೋಹವನು | ತರಿದಪ್ಪಳಿಪೆನೆನುತ |
ಲುರಿದು ಕುಂಭೋದರನು | ಬರಲು ಯಮ ತಡೆದು || 1 ||
ನಿಲ್ಲು ನಿಲ್ಲೆಲೊ ದನುಜ | ಸೊಲ್ಲಡಗಿಸುವೆ ನಿನ್ನ |
ಮಲ್ಲತನವನು ಸ್ವರ್ಗ | ದಲ್ಲಿ ತೋರದಿರು ||
ಕ್ಷುಲ್ಲಕರೆ ಪಥದಪ್ಪಿ | ಬಂದಂತೆ ತೋರುತಿದೆ |
ಅಲ್ಲಿ ಶಿಕ್ಷೆಪೆ ಬನ್ನಿ | ನರಕ ಸರಿದಾರಿ || 2 ||
ಸಾಕು ಸಾಕೆಲೊ ಯಮನೆ | ಪಾಕಶಾಸನನೆಲ್ಲಿ |
ನಾಕದೈಸಿರಿಯ ಸೆಳೆ | ವಾಕಾರ್ಯ ಗೈದು ||
ನೂಕಿಸುವೆ ನಿನ್ನ ಶ | ಕ್ತಿಯ ಸೆಳೆಯುತಾ ಕುಂಭ |
ಪಾಕದಲಿ ಮತ್ತಿಡುವೆ | ಲೋಕಪಾಲಕರ || 3 || 45 ||

**ಸೌರಾಷ್ಟ್ರ - ತ್ರಿವುಡೆ**
ಸೊಕ್ಕು ನಿನಗಿನಿತಿರಲು ತಾಳೆಂ |
ದಿಕ್ಕಿದನು ಗದೆಯಿಂದಲಿರ್ವರು |
ದಿಕ್ಕರಿಗಳಂದದಲಿ ಹಣಿದರು | ಹೊಕ್ಕು ಹೊಯ್ದು || || 1 ||
ಅಂತಕನ ಗದೆಯಿಂದಲಾ ದೇ |
ವಾಂತಕನು ತರಹರಿಸಿ ಬೀಳಲು |
ಹೊಂತಕಾರಿಗಳೆಲ್ಲ ಬೆದರೆ ಕೃ | ತಾಂತನಿಂಗೆ || 2 || 47 ||

**ಮಾರವಿ - ಏಕ**
ಕಿಡಿಗಾರುತ ತಮ | ಕೊಡುತತಿಧೈರ್ಯವ |
ಬಿಡುಗಣ್ಣರ ಸದೆದು ||
ಬಡಿದೊಟ್ಟೈಸುವೆ | ಬಿಡಿಬಿಡಿರೆನುತಲಿ |
ಅಡಹಾಯ್ದನು ಬಂದು || 1 ||
ಏರುತಲಾಕ್ಷಣ | ವಾರಣವನು ಸುರ |
ವಾರವ ಸಂತೈಸಿ ||
ಸಾರೆಲೊ ಬಂದವ | ನಾರೆಲೊ ಸ್ವರ್ಗವ |
ಸೂರೆಗೊಳಲು ಬಯಸಿ || 2 || 49 ||

**ಭೈರವಿ - ಅಷ್ಟ**
ಅಧಿಪತಿ ದಾನವರ | ಶೋಣಿತಪುರ |
ದಧಿಕಾರಿ ತಮನಸುರ ||
ಸದೆದು ನಿನ್ನನು ಗೆದ್ದು ಸುರಲೋಕದಧಿಕಾರ |
ಕೊದಗಿ ಬಂದಿರುವ ವೀರ || 1 ||
ತಾಮಸ ಗುಣದ ತಮ | ಪುಣ್ಯಾತ್ಮರಿ |
ಗೀ ಮಹಾ ಸ್ವರ್ಗಧಾಮ ||
ನಾ ಮೊದಲೇ ಗೈದ ಶತಯಾಗಕೊದಗಿತು |
ಸೀಮೆಯನರಿತು ನಡೆ || 2 || 51 ||

**ಭೈರವಿ - ಏಕ**
ಎನ್ನಯ ಬಲಪೌರುಷಕೆ | ಆ |
ತ್ಮೋನ್ನತಿ ಸಿರಿ ವೈಭವಕೆ ||
ಇನ್ನುಳಿವೆಯ ನೀ ನೋಡು | ಪದ |
ವನ್ನು ಪಿಡಿದು ಕ್ಷಮೆಬೇಡು || 1 ||
ಮಿತಿಬೇಕತಿಯಹಮಿಕೆಗೆ | ಆ |
ಹತಿಯೆಂತರಿಯದ ಮತಿಗೆ ||
ಗತಿಗಾಣುವ ಕಡೆಗಾಲ | ಬಂ |
ದಿತು ಬವರದಿ ಕೈಸೋಲ || 2 || 53 ||

**ಪಂತುವರಾಳಿ - ಮಟ್ಟೆ**
ತಾಳಿಕೊಳ್ಳೆನುತ್ತ ತಮನು |
ಕೋಲ ಮಳೆಯ ಸುರಿಯೆ ಸುರರ |
ಪಾಲನದನು ತರಿದು ಮರಳಿ | ಮೇಲುವರಿದನು || 1 ||
ಪೇಳಲೇನು ಸಮರರಂಗ |
ಕಾಲಮೃತ್ಯುವಿನ ತರಂಗ |
ಸೋಲಗಾಣದವರ ಬಹುಶ | ರಾಳಿ ತೀರಿತು || 2 || 55 ||

**ಭಾಮಿನಿ**
ಹಳಚಿದರು ಬಹು ಬಗೆಯೊಳೀರ್ವರು |
ಕೊಳುಗುಳವು ಕೈಮೀರಲರಿಯುತ |
ಕುಲಿಶಮಂ ತೆಗೆದಿಟ್ಟ ವಾಸ್ತೋಷ್ಪತಿಯು ಗರ್ಜಿಸುತ ||
ಬಲುಭಟನ ಬಲವಳಿಯೆ ದಾನವ |
ನುಳಿವ ಹಾದಿಯನರಸುತೋಡಲು |
ಬಲವಿರೋಧಿಯ ಬಲವು ಬೆಂಬತ್ತಿದುದು ರಕ್ಕಸರ || 1 || 56 ||

**ಸಾಂಗತ್ಯ - ರೂಪಕ - ಝಂಪೆ - ಅಷ್ಟ - ಏಕ**
ಮನದಿ ಚಿಂತೆಯ ತಾಳಿ ಕೆಟ್ಟೆವೀಗಾವೆಂದು |
ದನುಜರತ್ಯಾಯಾಸದಿಂದ ||
ಮನುಮಥಾರಿಯು ನಮ್ಮ ಮರೆತನೇನಕಟೆಂದು |
ಅನಿಮಿಷೇಶ್ವರನ ಭೀತಿಯಲಿ || 1 ||
ಶಕ್ತಿ ಸಾಹಸದಿಂದ ಯುಕ್ತಿ ಯೋಜನೆಯಿಂದ |
ಶಕ್ತರಾಗಿರ್ದೆವೈ ನಾವು ||
ಸೂಕ್ತ ಚಿಂತನೆಗೋರ್ವ ಗುರುವಿಲ್ಲವದರಿಂ ನಿಃ |
ಶಕ್ತರಾದೆವು ರಣಾಂಗಣದಿ || 2 || 58 ||

**ವಾರ್ಧಕ**
ಧಿಷಣನಾತಂ ದೇವಗುರುವಾತನಂ ಮೀರ್ವ |
ನಿಶಿತಮತಿಯಾಶ್ರಯವ ಪೊಂದಿ ಬಳಿಕಾ ಸುರರ |
ದೆಸೆಗೆಡಿಸಬೇಕದಕೆ ಶಕ್ತನೋರ್ವನೆ ಮಹಾ ಮಂತ್ರಜ್ಞ ಭೃಗುಮುನೀಶಂ ||
ಅಸಮಸತ್ತ್ವನು ತಪಃಸಿದ್ಧಿಯೊಳಗೆಮ್ಮ ರ |
ಕ್ಷಿಸಲು ಬೇಕೆಂದವನ ಬೇಡಲ್ಕೆ ಗೆಲವಹುದು |
ಉಸಿಕನ್ನೈದುವುದೆಂದು ವಿಸರವೆಲ್ಲವ ಕೂಡುತಸುರೇಶನೈತಂದನು || 1 || 59 ||

**ಸೌರಾಷ್ಟ್ರ - ತ್ರಿವುಡೆ**
ಹುಡುಕುತಸುರರ ಗಡಣವನು ಸುರ |
ಪಡೆಯು ಬೆಂಬತ್ತಿದುದು ದೂರದಿ |
ನಡೆವರನು ಕಂಡೊಡನೆ ಬಡಿಯಿರಿ | ಪಿಡಿಯಿರೆನುತ || 1 ||
ಓಡುವರ ಪಿಂದೋಡಿದರು ಮಾ |
ತಾಡದಿವರಡಗಡಗಿ ಬಂದರು |
ಗಾಡಿಯಿಂದೆಸೆವಾಶ್ರಮವ ಕಂ | ಡಾಡಿಕೊಳುತ || 2 || 61 ||

**ಕಂದ**
ಆ ಸಮಯದಿ ಕಾರ್ಯಾರ್ಥದೊ |
ಳಾಶ್ರಮಮಂ ಬಿಟ್ಟು ತೆರಳಿರೆ ಭೃಗುಮುನೀಶಂ ||
ಆಶ್ರಯಮೆಂಬಾಕ್ರಂದನ |
ವಾ ಸತಿಯಾಲಿಸುತ ಖ್ಯಾತಿಯೈತಂದೊರೆದಳ್ || 1 || 62 ||

**ಕೇದಾರಗೌಳ - ಅಷ್ಟ**
ಆರು ನೀವೆಲ್ಲಿಂದ ಬಂದಿರೀಪರಿ ಚಿಂತಾ |
ಕಾರಕೇಂ ಕಾರಣವು ||
ತೋರುವಿರತಿ ಸಮರ್ಥರ ತೆರದೊಳಗಿಂತು |
ಗಾರುಗೆಟ್ಟಿರುವಿರೇಕೆ || 1 ||
ಪೆಸರು ದೆಸೆಗಳೇನೆಂದುಸುರಿರಿ ವಾಸಿಪ |
ವಸುಮತಿ ಯಾವುದಯ್ಯ ||
ವಿಸರವಿಲ್ಲೈತಂದಾಸರೆಯ ಯಾಚಿಸುವಂಥ |
ಗಸಣಿಯಾರಿಂದಾಯಿತು || 2 || 64 ||

**ಭಾಮಿನಿ (ಅರ್ಧ)**
ಭೃಗುಮುನೀಶನ ಜಾಯೆ ಖ್ಯಾತಿಯು |
ಅಘಹರನು ಯಜ್ಞಾರ್ಥವೈದಿಹ |
ಬಗೆಯದಿರಿ ಸಂಶಯವ ಬಂದೆಡರರುಹಿ ನೀವೆನಲು || 1 || 65 ||

**ಸೌರಾಷ್ಟ್ರ - ಅಷ್ಟ**
ಶೋಣಿತಾಧಿಪ ನಾನು ಸೋಮಕ ನಾಮಕ | ಮಾತೆ ಕೇಳು ||
ಬಹು | ದಾನವರೊಡಗೂಡಿ ದಾಳಿಯನಿಟ್ಟೆವು | ಮಾತೆ ಕೇಳು || 1 ||
ಸುರರಿಂದ ಸೋತೆವು ಗುರುವಿನಾಶ್ರಯಕಾಗಿ | ಬಂದೆವಮ್ಮ ||
ಭೃಗು | ವರರಿಂದ ರಕ್ಷಣೆ ಕೇಳುವ ಮನದಿಂದ | ಬಂದೆವಮ್ಮ || 2 ||
ಪೊರೆಯಬೇಕೆಮ್ಮನೆಂದೆರಗಿ ಬೇಡುತಲಿಹೆ | ಕೇಳಿರಮ್ಮ ||
ಅಲ್ಲ | ದಿರಲು ನಮ್ಮೆಲ್ಲರ ತರಿವರು ಬಂದಿಲ್ಲಿ | ಕೇಳಿರಮ್ಮ || 3 || 68 ||

**ಮಧುಮಾಧವಿ - ತ್ರಿವುಡೆ**
ಭೀತಿ ಬಿಡಿರೈ ಯಾತುಧಾನರೆ |
ನೀತಿಯನು ಮಿಗುತಾಶ್ರಮಕ್ಕವ |
ರೈತರಲು ಪಿಂತಿರುಗರಿಲ್ಲಿಂ |
ಮಾತ ಮೀರುತ ವರ್ತಿಸೆ || 1 ||
ಎನ್ನ ಬಲುಹಿಂ ನಿಮ್ಮ ರಕ್ಷಿಪೆ |
ಹೆಣ್ಣೆನುತ ಧಿಕ್ಕರಿಸಬಂದರೆ |
ಬನ್ನಬಡುವರೆನುತ್ತಲವರನು |
ಮನ್ನಿಸಿದಳಾ ಖ್ಯಾತಿಯು || 2 ||
ಕರೆದು ವಟುಗಳ ನುಡಿದಳಿಲ್ಲಿಗೆ |
ಬರುವ ಸುರರನು ತಡೆದು ಮುನಿವರ |
ಬರುವನಕ ಕಾಯ್ದಿರಲು ಪೇಳಿರಿ |
ತೆರಳಿರೆನ್ನುತ ಕಳುಹಲು || 3 || 71 ||

**ಶಂಕರಾಭರಣ - ಮಟ್ಟೆ**
ಸುರಪ ಸುರರ ಕೂಡುತಲ್ಲಿ | ಬರುತಲರಸುತ |
ದುರುಳರಿಲ್ಲಿ ಬಂದರೆಲ್ಲಿ | ಮರೆಯೊಳಡಗುತ ||
ಅರರೆಯಾಶ್ರಮವನು ಮರೆಯ | ಹೊಕ್ಕರದ್ಭುತ |
ಭರದಿ ನುಗ್ಗಿರೆನಲು ದಂಡ | ದಿಂದ ತಡೆಯುತ || 1 || 72 ||

**ಆರ್ಯಸವಾಯಿ - ಏಕ**
ಎಲ್ಲಿಗೆ ಪೋಪುದು ನಿಲ್ಲಿರಿಯಾಶ್ರಮ |
ದಲ್ಲಿಯೆ ಗದ್ದಲಗೆಯ್ಯದಿರಿ ||
ಇಲ್ಲವು ಅಪ್ಪಣೆ ಹೊರತು ಪ್ರವೇಶವು |
ಸೊಲ್ಲಿಸದಿಲ್ಲಿಯೆ ಕುಳ್ಳಿಹುದು || 1 ||
ವಟುಗಳೆ ಕೇಳಿರಿ ರಾಕ್ಷಸರಿಲ್ಲ ಕ |
ಪಟದಲಿಯಾಸರೆ ಪಡೆದಿಹರು ||
ಕುಟಿಲರ ತರಿಯಲು ಬಂದೆವು ಸ್ವರ್ಗದ |
ಕಟಕವು ತಾವೆಂದನು ವರುಣ || 2 ||
ಆಶ್ರಯ ಗೀಶ್ರಯ ನಮಗೊಂದರಿಯದು |
ಆಶ್ರಮದೊಳಗಿಲ್ಲವು ಗುರುವು ||
ನಾಶವ ಹೊಂದುವಿರರಿತರೆ ಮಾತೆಯು |
ವಾಸಿಯ ಬಿಟ್ಟೀಗೈದುವುದು || 3 || 75 ||

**ಭಾಮಿನಿ**
ಏನು ಧೈರ್ಯವಿದರರೆ ಭೃಗುಸತಿ |
ದಾನವರಿಗಾಶ್ರಯವನಿತ್ತಳೆ |
ಜ್ಞಾನಶೂನ್ಯತೆಗೇನನೆಂಬೆನು ನೂಕಿರಾ ಕಡೆಗೆ ||
ಗೋಣನರಿಯಿರಿ ಕಂಡ ದನುಜರ |
ಹೀನಕರ್ಮಿಗಳಾಶ್ರಯದಿ ಮುನಿ |
ಮಾನಿನಿಯು ಧಿಕ್ಕಾರಯೋಗ್ಯಳೆನುತ್ತ ಮುಂದರಿಯೆ || 1 || 76 ||

**ದೇಶಿ - ರೂಪಕ**
ಏತಕೀಪರಿ | ಧೂರ್ತರಾದಿರಿ ||
ನೀತಿ ಮೀರಬೇಡಿರೆನುತ | ಖ್ಯಾತಿ ತಡೆದಳು || 1 ||
ಆ ನಿಶಾಟರ | ನೀನಿದೀತೆರ |
ಆನಲೇಕೆ ಬಿಡುಬಿಡೆಂದ | ನನಿಮಿಷೇಶ್ವರ || 2 ||
ಶರಣು ಹೊಕ್ಕರು | ತರಳರವದಿರು |
ಪೊರೆವುದೆಮ್ಮ ರೀತಿ ನೀತಿ | ಯರಿತು ಪೋಪುದು || 3 ||
ಕಡುಮದಾಂಧರ | ಗಡಣಕಾಶ್ರಯ ||
ಕೊಡುವ ಠಾವಿಗಾವ ನೀತಿ | ಬಿಡೆನು ದುರುಳರ || 4 || 80 ||

**ಶಂಕರಾಭರಣ - ಆದಿ**
ಸಾರಿ ಪೇಳ್ವೆ ಬೇಡವಿಂಥಾ | ಕ್ರೂರಕೃತ್ಯವಾಶ್ರಮವನು |
ಮೀರಿ ನಡೆಯೆ ಕೆಡುವೆ ಕಡೆಗೆ | ಸಾರಿದೆ ಮಘವ || 1 ||
ಕೆಟ್ಟದನುಜರನ್ನು ನೀ ಬೈ | ಚಿಟ್ಟು ಬುದ್ಧಿ ಪೇಳ್ವೆ ದುಷ್ಟ |
ಕುಟ್ಟಿ ಕಳೆಯೆ ತಡೆಯಬರುವ | ದುಷ್ಟರ ಕಾಂಬೆ || 2 ||
ದಿಟ್ಟನಾದರೊಂದು ಪಾದ | ವಿಟ್ಟು ನೋಡು ಕೆಡುವ ಕಾಲ |
ಕೆಷ್ಟು ಪೇಳ್ದರಿಲ್ಲ ಬುದ್ಧಿ | ಬಿಟ್ಟಗಣ್ಣನೆ || 3 || 83 ||

**ಮಾರವಿ - ಏಕ**
ಕೊಂದು ಕಳೆಯಿರಿಲ್ಲಡಗಿಹ ದಾನವ |
ವೃಂದವನೆನ್ನುತಲಿ ||
ವೃಂದಾರಕರಿಂಗೀಯುತ ನೇಮವ |
ಮುಂದೈದಲು ಕನಲಿ || 1 || 84 ||

**ಭಾಮಿನಿ**
ಕ್ರೋಧದಿಂದುರಿದೆದ್ದಳಾ ಸತಿ |
ಹೇ ದಿವಿಜಪತಿ ನಿನ್ನಹಂಕೃತಿ |
ಗಾದಪುದು ಗತಿಯೆನುತವನ ಸ್ತಂಭಿಸಿದಳಾ ಖ್ಯಾತಿ ||
ಮೇದಿನಿಗೆ ಕೀಲಿಸಿತು ಕಾಲ್ಗಳು |
ಕೈದು ಕೈದಪ್ಪಿದುದು ಗೊಂಬೆಯೊ |
ಲಾದ ಮರವಟ್ಟಮರ ಮರನಾಗಿರ್ದ ಸ್ತಂಭನದಿ || 1 || 85 ||

**ಕೇದಾರಗೌಳ - ಝಂಪೆ**
ಗುರುವೆ ರಕ್ಷಿಪುದೆನ್ನುತ | ಸುರರೆಲ್ಲ |
ತೆರಳಿ ಧಿಷಣಗೆ ನಮಿಸುತ ||
ಸುರಿವಶ್ರುಧಾರೆಯಿಂದ | ಬೆಸಸಿದರು |
ಬೆರಗಾಗಿ ಗುರುವು ನಿಂದ || 1 || 86 ||

**ಕಂದ**
ಆಂಗೀರಸನವಧಾರಿಸಿ |
ಅಂಗನೆ ಸಾಮಾನ್ಯಳಲ್ಲವೆಂದರಿತೆಂದಂ ||
ಏಂಗೈವುದು ಬಂದೆಡರ ವಿ |
ಹಂಗರಥನ ಕರುಣೆ ಕಾಯ್ವುದು ಪ್ರಾರ್ಥಿಸುವಂ || 1 || 87 ||

**ಆನಂದಭೈರವಿ - ಆದಿ**
ಸ್ಥಿತಿಪ ಕರುಣವಾರಿಧಿ | ರಕ್ಷಿಸು ದೇವ |
ಪತಿತೋದ್ಧರಣ ಶ್ರೀನಿಧಿ ||
ಗತಿಗಾಣೆವೈ ಲಕ್ಷ್ಮೀ | ಪತಿ ನೀನು ಮೆಯ್ದೋರಿ |
ವ್ಯಥೆಗೊಳಗಾದೆಮ್ಮ | ಪತಿಕರಿಸೈ ತಂದೆ || ಸ್ಥಿತಿಪ || 1 ||
ಖ್ಯಾತಿ ದೇವಿಯ ಘಾತಿಗೆ | ಸಿಲುಕಿ ಸ್ತಂಭೀ |
ಭೂತನಾದಮರೇಶಗೆ |
ಧಾತ ನೀನೇ ಸುರ | ವ್ರಾತರಕ್ಷಕ ದೀನಾ |
ನಾಥ ಬಾಂಧವ ಜಗ | ನ್ನಾಥ ಬಾ ಬಾ ದೇವ || 2 || 89 ||

**ಭಾಮಿನಿ**
ಆಲಿಸಿದನು ಕೃಪಾಳು ಮುಂಬಹ |
ಕಾಲಕರ್ಮಸ್ಥಿತಿಯ ಗತಿಗಿದು |
ಮೂಲ ಖ್ಯಾತಿ ಸ್ತಂಭ ತಮ ವಿಜೃಂಭಣೆಯು ಬವಣೆ ||
ಓಲಯಿಸಲಿದೆ ಭೃಗುಕುಮಾರನ |
ಮೇಳದಲಿ ರಕ್ಕಸ ಪ್ರಪಂಚವು |
ಗೋಳುಗೊಡಲಲ್ಲಿರಲು ಬೇಕೆಂದೈದಿ ಮೆಯ್ದೋರ್ದ || 1 || 90 ||

**ದ್ವಿಪದಿ**
ಶ್ರೀವಲ್ಲಭನ ಕಂಡು ಭಕ್ತಿಭಾವದಲಿ |
ದೇವರ್ಕಳೆರಗುತಿರೆ ಕೇಳ್ದ ವನಮಾಲಿ || 1 || 91 ||

**ಶಂಕರಾಭರಣ - ತ್ರಿವುಡೆ (ಪ್ರಭೇದ)**
ನಾಕಿಗರೆ ನಿಮಗೇಕೆ ವ್ಯಾಕುಲ |
ಲೋಕವಂದ್ಯರು ನೀವು ಕರ್ಮ ವಿ |
ಪಾಕಕರ್ಹರೆ ಕಾಣನಾಗಿಹ |
ಪಾಕಶಾಸನನೇತಕೆ | ಪೇಳಿರೆನಗೆ || 1 ||
ಖ್ಯಾತಿದೇವಿಯ ಸ್ತಂಭನಕೆ ಸುರ |
ನಾಥ ಸಿಲುಕಿದ ಪರಿಯ ತಾರಾ |
ನಾಥನರುಹಲು ಬಂದ ಹರಿ ಸುರ |
ವ್ರಾತದೊಡನೆ | ತಾಳಿರೆನುತ || 2 || 93 ||

**ನವರೋಜು - ಏಕ**
ಮರವಟ್ಟಾs ಸುರಪತಿಯು | ನಿಂ |
ದಿರೆ ಕಂಡೀ ಭೃಗುಸತಿಯು ||
ಸುರಪುರದೊಡೆಯನ | ತೃಣಸಮಗೈದಳು |
ಪರಿಯರಿಯದೆ ನಾ | ಕೆಣಕಲು ಸುಲಭವೆ || 1 ||
ವೃಂದಾನಂsದನು ಬಂದು | ಸುರ |
ವೃಂದಾನಂsದನ ಪಿಡಿದು ||
ಸ್ಪಂದನಗೊಳಿಸುತ | ಸ್ತಂಭನವಿಳಿಸಲು |
ವೃಂದಾರಕಗಣ | ವೆಂದುದು  ಜಯ ಜಯ || 2 || 95 ||

**ಸಾಂಗತ್ಯ - ರೂಪಕ**
ಎರಗುತ ನುತಿಸಿದ ನಾರಾಯಣನೆ ನಿನ್ನ |
ಕರುಣೆಯಿಂದುಳಿದುದೀ ಬದುಕು ||
ಗರುವೆಯಸಾಧ್ಯಳು ಬಿಡಳೆಮ್ಮ ಸುಮ್ಮನೆ |
ಹರಿಯೆ ನೀನೇ ಗತಿ ನಮಗೆ || 1 ||
ಶಕ್ತಿಯ ಮೀರಿ ನೀ ನಡೆದೆ ಮಘವ ಕೋಪೋ |
ದ್ರಿಕ್ತಳ ಗೆಲುವುದಸಾಧ್ಯ ||
ಯುಕ್ತವೆ ಹೆಂಗೊಲೆ ಪಾರುಗಾಣುವುದೆಂತು ||
ಯುಕ್ತಿಯ ಮುಂಗಾಣೆ ನಾನು || 2 || 97 ||

**ಕಂದ**
ಧೂರ್ಜಟಿ ಹೆಣ್ಣಾದನೊಯೆಂ |
ಬಾರ್ಭಟೆ ಮೊಳಗಿಸುತಲೈದಿ ಸುರಪತಿ ಮಾಯಾ |
ನಿರ್ಜಿತನಾಗುತಲೊಪ್ಪಿರೆ |
ಗರ್ಜಿಸಿ ಕಿಡಿಗಣ್ಣದುರಲು ಹಲುಮೊರೆದೆಂದಳ್ || 1 || 98 ||

**ಸೌರಾಷ್ಟ್ರ - ತ್ರಿವುಡೆ**
ಎಲವೊ ಹರಿ ನೀ ಧೂರ್ತ ಸುರಪನ |
ಬಲವನಾಂತೀಗೆನ್ನ ಶಕ್ತಿಯ |
ಸೆಳೆದೆಯಾ ನೀವಿಬ್ಬರಿನ್ನೆಂ | ತುಳಿವಿರಯ್ಯ || 1 ||
ಗಡಗಡನೆ ನಡುಗುತ್ತ ಸುರಪತಿ |
ಅಡಗಿ ಬೆಂಗಡೆ ಬೆದರಿ ಕೊಲು ಕೊಲು |
ಬಿಡಳು ನಮ್ಮನೆನಲ್ಕೆ ನಕ್ಕನು | ಜಡಧಿಶಯನ || 2 ||
ಮುರಿದು ಮುಕ್ಕುವೆ ಮೂಜಗವನೆಲೆ |
ಮರುಳೆ ನಗು ನಗು ಹಲ್ಲ ಕೀಳುವೆ |
ಪರಿಕಿಸೆನ್ನಯ ಶಕ್ತಿಯೆಂದೆ | ತ್ತಿರಲು ಕರವ || 3 ||

ಇತ್ತನಪ್ಪಣೆ ಚಿಮ್ಮಿತಾಕ್ಷಣ |
ಸುತ್ತಿ ಸತ್ತ್ವದೊಳಾ ಸುದರ್ಶನ |
ಕತ್ತರಿಸಿ ಕೆಡಹಲ್ಕೆ ಚೀರಿದು | ದುತ್ತಮಾಂಗ || 4 || 102 ||

**ಭಾಮಿನಿ (ಅರ್ಧ)**
ಚೀತ್ಕೃತಿಯೆ ಮುನಿಯಾದುದೆಂಬೋಲ್ |
ಪೂತ್ಕರಿಸಿ ಭೃಗು ಸಿಡಿದು ಸುಳಿದನು |
ಖ್ಯಾತಿಯಳಿವನು ಕಂಡ ಮುನಿಯುರಿಗೆಂಡ ತಾನಾದ || 1 || 103 ||

**ಮಾರವಿ - ಏಕ**
ಛೀ ಸುಡು ಸುಡು ಹರಿ | ವಾಸವನುಳಿವಿಗೆ ||
ಹೇಸದೆ ಮಾನಿನಿಯ ||
ಘಾಸಿಗೊಳಿಪ ನೀ | ನೇಸರ ದೈವವು |
ಮೋಸವ ಗೈದಿಹೆಯ || 1 ||
ಇತ್ತನು ಶಾಪವ | ಹತ್ತು ಜನುಮವ |
ನ್ಯಿತ್ತುತ ಧರಣಿಯಲಿ ||
ಹೊತ್ತು ತೊಳಲು ನೀ | ಪತ್ನೀ ವಿರಹವ |
ನಿತ್ಯವು ದುಃಖದಲಿ || 2 || 105 ||

**ಭಾಮಿನಿ**
ಭೀತನಾದನು ಸುರಪ ಸ್ತಂಭೀ |
ಭೂತರಾದರು ಸುರರು ಸಂತಸ |
ವಾತುದಸುರಾನೀಕ ಮೌನಿವ್ರಾತ ಬೆರಗಾಗೆ ||
ಯತುಧಾನವಿರೋಧಿ ನಸುನಗು |
ತೈತರುತ ಮುನಿರುದ್ರುನಿರ್ದೆಡೆ |
ಖಾತಿಯಲಿ ನೀನಿತ್ತ ಶಾಪಕೆ ಭೀತನಲ್ಲೆಂದ || 1 || 106 ||

**ಶಂಕರಾಭರಣ - ರೂಪಕ**
ಶಾಪವಿದನು ಶಿರದೊಳಾಂತೆ | ತಾಪಸೋತ್ತಮ |
ಶ್ಯಾಪದರ ನಿಗ್ರಹಣದಾ ಕ | ಲಾಪದುಪಕ್ರಮ ||
ಕೋಪಕಿತ್ತು ಮನವ ಕೊಲಲು | ಪಾಪಕಾರ್ಯವು |
ಲೋಪವೆಂತು ಬಂತು ಬದುಕೆ | ಯಾಪದ್ಧರ್ಮವು || 1 || 107 ||

**ದೇಶಿ - ಮಟ್ಟೆ**
ತರಿದರೇನಿದೋ |
ತಪದ ಮಹಿಮೆಯು ||
ಮರಳಿ ಬದುಕನೀಯುವಂಥ |
ಪರಿಯ ಪರಿಕಿಸು || 1 || 108 ||

**ಆರ್ಯಸವಾಯಿ - ಏಕ**
ತವಸಿಯೆ ತವಗುಣವವಗಣಿಸುತ ವಾ |
ಸವನನು ರಕ್ಷಿಸಲೈದಿದೆನೆ ||
ತವಿಸುವ ವ್ಯಕ್ತಿಯೊಳಿರಬೇಕೈ ಗುಣ |
ನವನಿರ್ಮಾಣದ ಸಂವಹನೆ || 1 ||
ಸಲಹೈ ಕರುಣದೊಳೆಮ್ಮನೆನುತ ಹರಿ |
ಕಳುಹಿಸಿ ಸುರಸಂದೋಹವನು ||
ತೊಳಲುವ ನರನಾಟಕವನು ಚಿಂತಿಸಿ |
ಸಲಿಲಪಯೋಧಿಗೆ ಗಮಿಸಿದನು || 2 || 110 ||

**ಭಾಮಿನಿ**
ಎನ್ನ ತಪ ಸಂಪನ್ನವಾಗಿರ |
ಲಿನ್ನು ಬದುಕಲಿ ಮಡದಿಯೆಂದಾ |
ಛಿನ್ನಶೀರ್ಷವ ಕಾಯದೊಡಗೂಡಿಸುತ ಪ್ರೋಕ್ಷಿಸಲು ||
ಮುನ್ನಿನಂದದಿ ದೇಹ ಪ್ರಾಣಗ |
ಳನ್ನು ಪಡೆದೇಳುತ್ತ ನಮಿಸಲು |
ಪನ್ನತಿಕೆಗಚ್ಚರಿಯನಾಂತುದು ಸಕಲ ಸಂದೋಹ || 1 || 111 ||

**ಕೇದಾರಗೌಳ - ಅಷ್ಟ**
ಅಸುರಕ್ಷಿತರು ನಾವು ದೆಸೆಗಾಣದವರು ರ |
ಕ್ಷಿಸಬೇಕೆನ್ನುತ ತಮನು ||
ಅಸುರವಿಸರ ಸಹ ನಮಿಸುತ್ತ ನುತಿಸಿದ |
ನಸಮಾನ ತಪಸಿಯನು || 1 ||
ಗುರುವಾಗುತೆಮ್ಮನುದ್ಧರಿಸಬೇಹುದು ಸುರ |
ಗುರುವಿಂದಲಧಿಕ ನೀವು ||
ಕರುಣಿಸುತೆಮ್ಮ ಸಂಕುಲದೇಳಿಗೆಯ ಗೈದು |
ಸುರರಿಂದ ಬದುಕಿಸಿರಿ || 2 || 113 ||

**ಕಾಂಬೋಧಿ - ಝಂಪೆ**
ಯಮಿಗಳ್ಕೈ ನಾವು ಸಂಕ್ರಮಿಸುವೆವು ಸಿದ್ಧಿಯಲಿ |
ಭ್ರುಮೆಯ ಲೋಕದ ಚಿಂತೆ ತೊರೆದಿಹೆವು ಪಿಂತೆ ||
ಮಮಕಾರ ಮೀರಿದಗೆ ಗುರುತನದ ಬಂಧನವೆ |
ತಮ ನಿನ್ನ ಬೇಡಿಕೆಯು ನಮಗುಚಿತವಲ್ಲ || 1 || 114 ||

**ಸಾಂಗತ್ಯ - ರೂಪಕ**
ಕಂಡೆನದ್ಭುತವ ಪ್ರಚಂಡಮುನಿಯೆ ಕೋಪ |
ಗೊಂಡು ಸುಡುವ ರುದ್ರಶಕ್ತಿ ||
ಕಂಡೆವೈ ಕ್ಷಮೆಯ ಕಮಂಡಲೂದಕವ ಮುಂ |
ಕೊಂಡು ಸೃಜಿಪ ದಿವ್ಯತೇಜ || 1 || 115 ||

**ಕಾಂಬೋಧಿ - ಝಂಪೆ**
ವಿಧಿಯಾಣತಿಯ ಮೀರಿ ಸುಟ್ಟು ಸೃಜಿಸಲು ಬಹುದೆ |
ಇದು ಕ್ಷಣಿಕ ಪರತತ್ತ್ವ ಸತ್ಯ ಶಾಶ್ವತವು ||
ಇದಿರಾಳಿಯಹ ಧಿಷಣನಿಂಗೆನ್ನ ಸುತನುಶನ |
ನೊದಗಿದಪನಾಶ್ರಯಿಸಿರೆಂದು ಕಳುಹಿದನು || 1 || 116 ||

*ಸಂಧಿ 2 : ಶುಕ್ರೋದ್ಭವ*

**ಭಾಮಿನಿ**
ಋತ್ವಿಜೋತ್ತಮ ಭೃಗು ಕುಮಾರಕ |
ಸತ್ತ್ವಯುತ ಸನ್ಮಂತ್ರಸಾಧಕ |
ನಿತ್ಯ ನಿರ್ಮಲಚಿತ್ತ ಸಕಲಾಗಮ ಸುವಿಜ್ಞಾನಿ ||
ಸತ್ಯಶೋಧಕ ಯೋಗಿವರ ದ್ವಿಜ |
ಸತ್ತಮನು ಕವಿ ನಾಮಧಾರಕ |
ತತ್ತ್ವಮಥನಾಸಕ್ತ ಶಿಷ್ಯೋತ್ತಮರ ನಡುವೆಸೆದ || 1 || 117 ||

**ಸೌರಾಷ್ಟ್ರ - ತ್ರಿವುಡೆ**
ಗೋಮಿನೀಸುರವರನೆ ರಕ್ಷಿಸು |
ಹೇ ಮಹಾಯೋಗೀಂದ್ರ ರಕ್ಷಿಸು |
ಸ್ವಾಮಿ ಗುರುವಾಗುತ್ತ ಪೊರೆ ಸು | ತ್ರಾಮನಿಂದ || 1 || 118 ||

**ಕಾಂಬೋಧಿ - ಝಂಪೆ**
ನೀವಾರದೇಕೆ ಬಂದಿಹಿರಿ ರಕ್ಷಿಪುದೇನು |
ನಾವು ಗುರುವಾಗಲ್ಕೆ ನಿಮಗೇನು ಹಿರಿಮೆ ||
ಆವ ಪರಿಭವವಾಯ್ತು ಸುತ್ರಾಮನಿಂ ನಿಮಗೆ |
ದೇವಾರಿಗಳು ನೀವು ಭೂದೇವರಾವು || 1 || 119 ||

**ಸೌರಾಷ್ಟ್ರ - ತ್ರಿವುಡೆ**
ಸೋಮಕನು ನಾ ದಾನವೇಂದ್ರನು |
ಯಾಮಿನೀಚರವೃಂದ ಸಹ ಸ್ವ |
ರ್ಧಾಮಕಡರುತ ಸೋತೆವೈ ಸು | ತ್ರಾಮನಿಂದ || 1 ||
ನಿಮ್ಮ ಜನನಿಯೊಳಾಶ್ರಯವ ಪಡೆ |
ದೆಮ್ಮನಿರಿಯಲು ಬಂದ ಸ್ತಂಭಿಸೆ |
ಕಮ್ಮಗೋಲನ ಪಿತನಿರಿದ ನಿ | ಮ್ಮಮ್ಮನನ್ನು || 2 || 121 ||

**ಕೇದಾರಗೌಳ - ಝಂಪೆ**
ಮಾತೆಯನು ಹರಿ ಕೊಂದನೆ | ಸುರಪತಿಯ |
ನಾತ ರಕ್ಷಿಸಿಕೊಂಡನೆ ||
ತಾತನಾಶ್ರಮವಲ್ಲವೆ | ತಿಳಿದು ಸುರ |
ವ್ರಾತಮಂ ಸುಡಲಿಲ್ಲವೆ || 1 || 122 ||

**ಭಾಮಿನಿ**
ಬದುಕನಿತ್ತನು ಸತಿಗೆ ತವಪಿತ |
ಹದುಳವಪ್ಪುದು ನಿಮ್ಮ ಗುರುತನ |
ತ್ರಿದಶ ಗುರುವಿಂಗೆಣೆಯೆನುತಲಪ್ಪಣೆಯನಿತ್ತಿಹನು ||
ಬದುಕನಿತ್ತಾಧರಿಸುತೆಮ್ಮ |
ಭ್ಯುದಯಮಂ ಗೈವುದು ಮಹಾತ್ಮನೆ |
ವಿಧಿಸುವುದನೊಪ್ಪುವೆವು ಬಪ್ಪುದು ಕುಲಕೆ ಗುರುವಾಗಿ || 1 || 123 ||

**ಮಾರವಿ - ಏಕ**
ಹರಿ ತರಿದನೆ ನಮ್ಮವ್ವೆಯನಾಶ್ರಮ |
ಮುರಿವರು ಸುಮನಸರೆ ? ||
ಸುರಗುರು ಧಿಷಣನ ಮಂತ್ರಣದಿಂ ಸೊ |
ಕ್ಕಿರುವರೆ ಭಳಿ ಭಳಿರೆ || 1 || 124 ||

**ಕಂದ**
ಭೃಗುಜಂ ಪೂರ್ವವ ಚಿಂತಿಸಿ |
ಬಗೆದ ಗುರು ದೋಷಿಯೆಂದು ತಾಮಸಿಯಾದಂ ||
ಬಗೆದುದು ವಿಧಿ ರಾತ್ರಿಂಚರ |
ರಿಗೆ ತಾಮಸಿಗಳ್ಗೆ ಗುರುವೆನಿಸುವಂತೀಗಳ್ || 1 || 125 ||

**ಮೋಹನ - ಅಷ್ಟ**
ಸಂಗಡಿಗರು ಪೂರ್ವದಿ | ಗೀಷ್ಪತಿಯು ನಾ |
ನಂಗೀರಸಾಶ್ರಮದಿ ||
ಭಂಗಿತನಾದೆನು ಪಕ್ಷಪಾತವನು ವ್ಯಾ |
ಸಂಗದೊಳ್ ಸುತನಿಗೆ ಗೈವುದ ಕಾಣುತ್ತ || 1 ||
ಬೇಸರದಿಂ ತೊರೆದು | ಗೌತಮ ಮುನಿ |
ಯಾಸರೆಯೊಳಗುಳಿದು ||
ವ್ಯಾಸಂಗಗೈವುತ್ತ ಸಾಧಿಸಿದೆನು ಯೋಗಾ |
ಭ್ಯಾಸದಿಂ ಸ್ಥೂಲ ಸೂಕ್ಷ್ಮಾದಿ ಗಮನಗಳ || 2 || 127 ||

**ಭೈರವಿ - ಏಕ**
ಗುರುತನವನು ಸ್ವೀಕರಿಸಿ | ಮ |
ತ್ಪುರುಷ ಪ್ರಯತ್ನವ ಮೆರೆಸಿ ||
ಸುರರೈಸಿರಿಯಂ ಸೆಳೆದು | ಸಂ |
ಸ್ಕರಿಸುವೆ ನಿಮ್ಮನು ಪೊರೆದು || 1 || 128 ||

**ಮಧ್ಯಮಾವತಿ - ಆದಿ**
ಉಪಕೃತರಾದೆವು ಗುರುದೇವ ನೀವು |
ಕೃಪೆದೋರೆ ರಾಕ್ಷಸಕುಲವು ಪಾವನವು ||
ತಪಸಿ ನಿಮ್ಮಯ ಸೇವೆ ಪರಮಸೌಭಾಗ್ಯ |
ಸಫಲವಾಯಿತು ತೆರೆಯಿತು ನಮ್ಮ ಭಾಗ್ಯ || ಉಪ || 1 || 129 ||

**ಭೈರವಿ - ಏಕ**
ಎಚ್ಚರಿಕೆಯ ಮಾತೊಂದು | ಎ |
ನ್ನಿಚ್ಛೆಯ ನೀವೆಂದೆಂದು ||
ತುಚ್ಛೀಕರಿಸಲ್ಕಂದೆ | ಮ |
ತ್ತುಚ್ಛೇದವು ಗತಿ ಮುಂದೆ || 1 || 130 ||

**ವಾರ್ಧಕ**
ವಿನಯದಿಂ ವಂದಿಸುತ ಬಹುದೆಂದು ಬೇಡುತಿಹ |
ಅನಿಮಿಷಾರಿಗಳಿಗೀಯಲ್ಕಭಯಮಂ ಮತ್ತೆ |
ಘನತೋಷದಿಂದುಘೇಯೆಂಬಬ್ಬರವು ಮೊಳಗೆ ಕರೆದೊಯ್ದರುಶನಸನನು ||
ದಿನದಿನದಿ ತಾಮಸರ ಬುದ್ಧಿಯಂ ತಿದ್ದುತ್ತ |
ಮನದೊಳಗೆ ಚಿಂತಿಸುತ ಸುಮನಸರ ವೈಭವವು |
ಧನಮೂಲವದ ಸೆಳೆದು ಸಾಹಸವ ಪರಿಕಿಸುವೆ ಮೊದಲೆಂದು ಚಿಂತಿಸಿದನು || 1 || 131 ||

**ನವರೋಜು - ಏಕ**
ಮತ್ತರು ಭೋsಗದಿ ಸುರರು | ಸಿರಿ |
ಬತ್ತದೆ ಬೀsಗುತಲಿಹರು ||
ವಿತ್ತಸ್ರೋತವ | ಕತ್ತರಿಸಲು ಪಲ್ |
ಕಿತ್ತಿಹ ಭೋಗಿಯೊಲ್ | ಮತ್ತೇಂ ಗೈವರು || 1 ||
ಎಲ್ಲಿಹುದೂs ಧನವೆಂದು | ಮನ |
ದಲ್ಲಿಯೆ ಯೋsಚಿಸುತಂದು ||
ಬಲ್ಲಿದ ಯೋಗದೊ | ಳಲಕಾವಲ್ಲಭ |
ನಲ್ಲಿದೆ ನವನಿಧಿ | ಯೆನ್ನುತ ಪೊರಟನು || 2 || 133 ||

**ಕಾಂಬೋಧಿ - ಝಂಪೆ**
ಓಲಗವ ಯಕ್ಷಪತಿ ಗಂಧರ್ವ ಕಿನ್ನರರ |
ಜಾಲದಿಂದಲಕೆಯೊಳು ವೈಶ್ರವಣನೀಯೆ ||
ಓಲೈಸಿದರು ಶ್ವೇತಭದ್ರ ಮಣಿಭದ್ರಕ ವಿ |
ಶಾಲಕರ್ಣ ವರಾಹಕರ್ಣ ಗುಹ್ಯಕರು || 1 ||
ಆ ಸಭಾಭವನದೈಸಿರಿಯನೇನೆಂಬೆನಾ |
ಕಾಶದಲಿ ಗುಹ್ಯಕರು ಪೊತ್ತು ನಿಂತಿಹರು ||
ಸೂಸಿದುದು ಸ್ವರ್ಣಾಂಶುವಲಕಾನದಿಯ ತಟದ |
ಪ್ರಾಸಾದಮಯವಾದ ದಿವ್ಯನಗರಿಯಲಿ || 2 ||
ವಿದ್ಯಾಧರೇಶ್ವರರು ಸಿದ್ಧಸಾಧ್ಯರು ಗರುಡ |
ರದ್ಭುತಾಕಾರಿಗಳು ಶುದ್ಧಸಾತ್ವಿಕರು ||
ಅಬ್ಧ್ಯಾದಿ ದೇವತೆಗಳತಿಚತುರನಟರು ಶ್ರುತಿ |
ಬದ್ಧ ಗಾಯಕರಲ್ಲಿ ಮೆರೆದರೇನೆಂಬೆ || 3 || 136 ||

**ಭೈರವಿ - ಏಕ**
ಬಲಿಯುತ ಯೋಗದ ಪಥವ | ತಾ |
ತಲುಪಿದನಲಕಾಪುರವ ||
ತೊಳಗುವ ಧನಪನ ತೇಜ | ಕಂ |
ಗೊಳಿಸಲು ಪಿಡಿದನು ಭೃಗುಜ || 1 || 137 ||

**ಪಂಚಾಗತಿ - ಮಟ್ಟೆ**
ಕಿತ್ತನು ತೇಜವ ಯೋಗದಿ |
ತತ್ತರ ತಿರುಗಿದ ವಿತ್ತಪ |
ಎತ್ತಣ ಸೆಳೆತವೊ ತಿಳಿಯದೆ |
ಸತ್ತ್ವದಿ ಸಾವರಿಸಿ || 1 ||
ಮಾಯದೊಳೆಳೆಯಲು ಭಾರ್ಗವ |
ನೋಯುತ ಮಿಡುಕಿ ಕುಬೇರನು |
ಆಯತಿಕೆಯನೊಗ್ಗೂಡಿಸಿ |
ತಾಯೆಳೆದನು ಮರಳಿ || 2 ||
ಕಳೆಗುಂದಿದನು ಕುಬೇರನು |
ಜ್ವಲಿಸಿದ ತೇಜದೊಳುಶನನು ||
ಬಳಲುತ ಮೂರ್ಛೆಗೆ ಸಂದನು |
ಸೆಳೆಯಲು ಸಂಪದವ || 3 || 140 ||

**ಭಾಮಿನಿ**
ವಿಗಡಸತ್ತ್ವದಿ ವಿತ್ತವೆಲ್ಲವ |
ಭೃಗುಜ ಬರಸೆಳೆದಿಳಿದು ಭವನಕೆ |
ಬಿಗಿದು ಮಾಯಾವರಣವದರೊಳಗಿಟ್ಟು ಗಹಗಹಿಸಿ ||
ಮಘವ ಮುಂದಿನ್ನಾವ ತಂತ್ರವ |
ಬಗೆವ ಭಾಗ್ಯವಿಹೀನ ಕಾಲವ |
ಬಗೆದು ಬರ್ದಿಲವೈರಿಗಳಿಗೀಯುವೆನು ಸಂಪದವ || 1 || 141 ||

**ನಾದನಾಮಕ್ರಿಯೆ - ರೂಪಕ**
ಧನಪನೆದ್ದು ನೋಡಿ ಶಕ್ತಿ |
ಹನನಗೈದು ಸೆಳೆದು ನಿಧಿಯ |
ಮುನಿಪ ಪೋದನುಳಿಸದಾದೆ |
ಧನವ ಸುರರಿಗೆ ||
ಧನವ ಸುರರಿಗುಳಿಸದಾದೆ |
ತ್ರಿಣಯಮಿತ್ರನೆಂದು ನಂಬಿ |
ಅನಿಮಿಷೇಶನಿತ್ತ ಪದವಿ |
ಕ್ಷಣಿಕವಾಯಿತೆ || 1 ||
ಪರಮ ಪುರುಷ ಪಾರ್ವತೀಶ |
ಪೊರೆಯೊ ಪತಿತನಾದೆನಯ್ಯೊ |
ಗರುವದಿಂದ | ಮೆರೆವ ದೈತ್ಯ |
ಗುರುವ ಶಿಕ್ಷಿಸೋ ||
ಗರುವದಿಂದ | ಮೆರೆವ ದೈತ್ಯ |
ಗುರುವು ಯೋಗಿ | ವರನೊ ಶಿವನೆ |
ಸುರರ ಸಿರಿಯು | ಸೂರೆ ಹೋಯ್ತು |
ಕರುಣಿಸೆಮ್ಮನು || 2 || 143 ||

**ಸೌರಾಷ್ಟ್ರ - ತ್ರಿವುಡೆ**
ಕೋಟಿ ಪ್ರಮಥರ ಕೂಟ ತಾಂಡವ |
ದಾಟವಗಜೆಯ ಬೇಟ ಗಂಗಾ |
ಜೂಟದಿಂದೊಪ್ಪಿರಲು ಹರ ಹಿಮ | ಪೀಠದಲ್ಲಿ || 1 ||
ಭಾವಲಹರಿಯ ಮೀರಿ ಸೆಳೆಯುವ |
ನೋವಿನಾ ನುಡಿಗೊಲಿದು ಬಂದನು |
ಪಾವನಾಂಘ್ರಿಗೆ ನಮಿಸಲೆತ್ತಿದ | ದೇವ ಶಂಭು || 2 || 145 ||

**ಮೇಚಾಳಿ - ಏಕ**
ಅಲಕೇಶ ನಿನಗೇಕೆ ಕ್ಲೇಶ | ಸೋತು |
ಬಳಲಿ ಬೇಡುವುದೇಂ ವಿತ್ತೇಶ || ಮಿತ್ರ |
ಸೆಳೆದೆ ಭಕ್ತಿಯೊಳಿಂದು |
ತಿಳುಹು ಕಾರಣ ಬಂಧು || ಅಲಕೇಶ || 1 || 146 ||

**ನೀಲಾಂಬರಿ - ಏಕ**
ಪರಮಪುರುಷ ರಕ್ಷಿಸು | ದೈತ್ಯರ ಗುರು |
ಉರುಹಿದಂದವನೀಕ್ಷಿಸು ||
ಸಿರಿಯ ಕಿತ್ತೆಳೆಯಲಸು | ಹಿಂಗಿತು ನೋಡು |
ಸುರರ ನೀನುದ್ಧರಿಸು || 1 || 147 ||

**ಮೇಚಾಳಿ - ಏಕ**
ನಿನ್ನೊಳು ನಿಕ್ಷೇಪಗೈದ | ಧನ |
ವನ್ನೆ ಕಿತ್ತೆಳೆದುಕೊಂಡೊಯ್ದ || ಗುರು |
ವೆನ್ನುವವನಾರವ |
ಗೈವೆ ಸಂಹಾರವ || 1 || 148 ||

**ಸಾಂಗತ್ಯ - ರೂಪಕ**
ಉಶನನೆಂಬಾ ಯೋಗಿ ದೈತ್ಯರ ಗುರು ಸುಮ |
ನಸರ ಸಂಪದವನು ಸೆಳೆದು ||
ವಶವಗೈದನು ತನ್ನ ಶಿಷ್ಯರಿಂಗೀಯುವ |
ಪಶುಪತಿ ರಕ್ಷಿಪುದೆನ್ನ || 1 || 149 ||

**ಅಷ್ಟಪಾದ ಮಾರವಿ - ಏಕ**
ಯೋಗದಿ ಸೆಳೆದಿಹ | ಯೋಗಿಯ ಶಕ್ತಿಯ |
ನೀಗ ಪರೀಕ್ಷಿಪೆ | ನೀಗುವೆನವನಿಂ |
ದಾಗಿಹ ಕಷ್ಟವ | ಬೇಗುದಿ ಬೇಡೆಂ |
ದಾಗಮ ವಂದಿತ | ಭೋಗಿವಿಭೂಷನು || ಏನನೆಂಬೆ || 1 ||
ಕುಂಭಿನಿ ನಡುಗಿತು | ಅಂಬರವದುರಿತು |
ಶಂಭುವು ಶೂಲವಿ | ಜೃಂಭಿಸಿ ರೋಷದಿ |
ತಂಬಿಸಲುಶನನ | ಡಿಂಬವ ಯೋಗಿ ಸ್ವ |
ಯಂಭುವು ಸೆಳೆದನು | ಬಿಂಬವ ಪಿಡಿದು || ಏನನೆಂಬೆ || 2 || 151 ||

**ಮಿಶ್ರತೋಡಿ - ಅಷ್ಟ**
ಭೂತನಾಥನು ಸೆಳೆವುದನು | ಭೃಗು |
ಜಾತನರಿತು ಚಿಂತಿಸಿದನು ||
ಈತನನೆಂತು ಮೀರುವೆನು | ಯೋಗಿ |
ನಾಥನಾಗಿಹ ಪರಶಿವನು || ದೈತ್ಯ |
ವ್ರಾತಕಪ್ಪುದು ನಷ್ಟ |
ನಾ ತಳುವಲು ಕಷ್ಟ |
ವೀ ತತೂಕ್ಷಣ ಸೂಕ್ಷ್ಮ |
ರೀತಿಯಿಂದಡಗುವೆ || ಭೂತ || 1 || 152 ||

**ಮಾರವಿ - ಮಟ್ಟೆ**
ಅಣುವಿನಂತೆ ಸೂಕ್ಷ್ಮಗೊಳುತ |
ತ್ರಿಣಯನಿಂಗೆ ಕಾಣದಂತೆ |
ಮುನಿಯು ಯೋಗಮಾರ್ಗದಿಂದ |
ಜುಣುಗಿ ಪೋದನು || 1 ||
ನುಸುಳಿ ಪೋಪುದರಿತು ಮುನಿಯ |
ನಸಮನೇತ್ರ ಸೂಕ್ಷ್ಮಗಾತ್ರ |
ದೆಸುಗೆಯಿಂದ ಪಿಡಿದು ತನ್ನ |
ವಶಕೆ ತಂದನು || 2 ||
ಕೃತ್ತಿವಾಸನುಗ್ರಗೊಳುತ |
ಕುತ್ತಿ ಕೊಲುವೆ ದೈತ್ಯರಿಂಗೆ |
ವಿತ್ತವಿತ್ತ ಮುನಿಯನೆಂದು |
ಎತ್ತೆ ಶೂಲವ || 3 ||
ಭಾಳನೇತ್ರನುಗ್ರತೆಯನು |
ಜಾಲದಿಂದ ಮುರಿವೆನೆಂದು |
ಸ್ಥೂಲರೂಪ ಬಿಟ್ಟು ನೆಗೆದ |
ಶೂಲದಗ್ರಕೆ || 4 || 156 ||

**ಭೈರವಿ - ಏಕ**
ಬುದ್ಧಿಯ ಬಲದಿಂ ಮೆರೆವ | ನೀ |
ನಿದ್ದರೆ ಮೆಲುವೆಯೊ ಜಗವ ||
ಹೊದ್ದಿದರೇಂ ಶೂಲಾಗ್ರ | ತಾ |
ಮೆದ್ದು ಬಿಡುವೆನೆಂದುಗ್ರ || 1 ||
ಎಳೆದರು ಬಾರದ ಬಿಗಿಯು | ಮುನಿ |
ಕುಳಿತಿಹ ಶೂಲದ ಮೊನೆಯು ||
ಸೆಳೆದ ಭರಾಟೆಗೆ ಬಗ್ಗಿ | ಆ |
ಗಲೆ ಬಿಲ್ಲಾದುದು ಕುಗ್ಗಿ || 2 || 158 ||

**ಭಾಮಿನಿ**
ಭೋಗಿಭೂಷಣನುಗ್ರನಾಗುತ |
ಲಾ ಗರುವನಂ ಸೆಳೆದು ನುಂಗಲು |
ಬಾಗಿ ಶೂಲ ಪಿನಾಕರೂಪವನಾಂತುದೇನೆಂಬೆ ||
ಕೈಗೆ ಬಂದುದು ಶೂಲ ಧನುವೆಂ |
ತೀಗಲೆನ್ನುತ ಪಲ್ಲಟಿಸುತಲಿ |
ಯೋಗಿವರ ಪರಮೇಶ ಶೂಲಿ ಪಿನಾಕಿ ತಾನಾದ || 1 || 159 ||

**ಜಂಜೂಟಿ - ಅಷ್ಟ**
*(ಪಲ್ಲವಿ ಈ ಪದ್ಯಕ್ಕೆ ಇಲ್ಲ. ಆದರೂ ಆ ಬಗೆಯ ರಚನೆಯನ್ನು ಮಾಡಲಾಗಿದೆ)*
ಕಂಡನು ಶಿವನ ದೇಹದಲಿ | ಬ್ರ |
ಹ್ಮಾಂಡದ ಸತ್ಯವನಲ್ಲಿ || ಕಂಡನು || ಪ ||
ಭರ್ಗನ ದೇಹವ ಪೊಕ್ಕು | ಕವಿ |
ಭಾರ್ಗವ ತೊಳಲಿದ ಸಿಕ್ಕು ||
ನಿರ್ಗಮಿಸುವ ಮಾರ್ಗವರಸುತ್ತ ನೋಡಿದ |
ಸ್ವರ್ಗ ಮೊದಲಾದಖಿಲ ಜಗಗಳ |
ದುರ್ಗಮನ ನಿಗ್ರಹಿಯ ಗರ್ಭದಿ || ಕಂಡನು || 1 ||
ನಟನಮನೋಹರ ಶಿವನ | ಕಂಡ |
ನಿಟಿಲೋಗ್ರನಯನ ಪ್ರಲಯನ ||
ಹಟಯೋಗದೊಳು ನೆಲೆಗೊಂಡುಗ್ರತಪಗೈವ |
ಪಟವಿವರ್ಜಿತನಾದ ಗೌರೀ |
ಲಟಹ ಮೋದವಿಹಾರಿ ಶಂಭುವ || ಕಂಡನು || 2 || 161 ||

**ಕಂದ**
ಉಶನನ ಮಾಯಾವರಣವ |
ನಸಮಾಕ್ಷಂ ಕಡಿದು ಗೋಸುತಂಗೀಯುತ್ತಂ ||
ಅಸುರರ ಗುರುವಂ ಶಿಕ್ಷಿಸೆ |
ಶಶಿಧರ ಬಂಧಿಸಿದ ಜೀರ್ಣಿಸೆ ಬರುವ ಪಥಮಂ || 1 || 162 ||

**ವಾರ್ಧಕ**
ಏಣಾಂಕಧರನು ನಿರ್ಗಮದಧ್ವ ಬಂಧಿಸುತ |
ಸ್ಥಾಣುವಂದದಿ ಜಲದಿ ತಪವ ಗೈಯುತ್ತಿರಲ್ |
ಕಾಣದುಶನಸ ಮಾರ್ಗ ಜೀರ್ಣಗೊಳ್ಳದೆ ತಪೋಜ್ವಾಲೆಯನ್ನುಣುತಿರ್ದನು ||
ತಾನು ಪ್ರಜ್ವಲಿಸಿದಂ ಶ್ರೀರುದ್ರ ತಪದಿಂದ |
ಮೌನಿವರನಿಂತು ಸಾವಿರ ವರ್ಷ ಪರಮಶಿವ |
ಜ್ಞಾನದಿಂ ನುತಿಗೈದ ಕೃತಿಗತಿಶ್ರುತಿಮತಿಗೆ ಭರ್ತ ನೀ ಕಾವುದೆಂದು || 1 || 163 ||

**ಮೋಹನ - ಆದಿ**
ಶಂಭೋಽ ಪಾಲಯ ಶರಣೋದ್ಧರಣ ||
ಜಯ ಗೌರೀರಮಣ || ಶಂಭೋ || ಪ ||
ಶಂಭು ಮಯೋಭು ಸ್ವ | ಯಂಭು ಲಯೇಶ ತ್ರಿ |
ಯಂಬಕ ಪಾಲಕ | ಸಾಂಬ ಸದಾಶಿವ | ಶಂಭೋ || ಅ. ಪ ||
ಪಥವಾ | ತೋರುತ ರಕ್ಷಿಪುದಭವ ||
ಪತಿಕರಿಸುತಲೆನ್ನುವ | ಖತಿಮತಿ ನೀಗುತಲಪರಾಧವ |
ಹಿತದಿಂ ಮನ್ನಿಸುವ || ಪತಿತೋದ್ಧಾರನೆ ಶರುವ ||
ಗತಿಗಾಣೆನು ಗಿರಿಜಾಪತಿ ಶರಣಾ |
ಗತ ಜನಪೋಷಕ ನೀಡು ಪ್ರಸಾದವ || ಶಂಭೋ || 1 || 164 ||

**ಕೇದಾರಗೌಳ - ಝಂಪೆ**
ಮುನಿಯ ಮಾತನ್ನಾಲಿಸಿ | ಕ್ಷಣಕಾಲ |
ಮನಸಿಜಾರಿಯು ಚಿಂತಿಸಿ ||
ಘನತೆಗೊಪ್ಪದ ಮಾರ್ಗವ | ತೋರುವೆನು |
ಮುನಿಯೆಂತು ಬಹನು ತಿಳಿವ || 1 ||
ಹೊರಬರಲಿಕೊಂದೆ ದಾರಿ | ನಿನಗಿಹುದು |
ಒರೆವೆನೆಂದನು ಪುರಾರಿ ||
ಹರಿದು ಬಾ ಜನನಾಂಗದಿ | ದ್ರವವಸ್ತು |
ಬರುವಂತೆ ಗುಪ್ತಾಂಗದಿ || 2 || 166 ||

**ಭಾಮಿನಿ**
ಚಿಂತಿಸಿದ ಭೃಗುಜಾತ ಪೊರಮಡ |
ಲೆಂತು ಮೂತ್ರದ ಮಾರ್ಗದೊಳಗೀ |
ಕಂತುವೈರಿಯಸಾಧ್ಯ ತಪಕೀಯಧ್ವ ಸರಿಯಹುದೆ ||
ಅಂತರಂಗದಿ ಗ್ರಹಿಸಿ ಯೋಗಿ ಮ |
ನೋಂತರಂಗನ ಮೆಚ್ಚಿಸುವ ರೂ |
ಪಾಂತು ಪೋಗುವೆನೆಂದು ಕಾಯುತಲಿರ್ದ ಕಾಲವನು || 1 || 167 ||

**ಮಧ್ಯಮಾವತಿ - ಆದಿ**
ಲೀಲಾವಿಹಾರದಿ ಶಿವ ಶರ್ವಾಣಿಯರು |
ಕೈಲಾಸ ಸಾನು ಪ್ರದೇಶದೊಳಿಹರು ||
ಕಾಲನಿಶ್ಚಲವಾಂತು ಶಿವಶೃಂಗಾರದೊಳು |
ಓಲೈಸುತಿಹುದೆಂಬೋಲ್ ಪ್ರಕೃತಿ ರಂಜಿಸಲು || 1 || 168 ||

**ಟುಮರಿ - ರೂಪಕ**
ಅಗಜೆ ನೋಡೀ ನಗದ ಗಾಡಿ |
ಬಗೆಯ ಸೆಳೆವುದು || ಎನ್ನ |
ಬಗೆಯ ಸೆಳೆವುದು ||
ಮುಗಿಲಿಗಿತ್ತು | ಸೊಗದ ಮುತ್ತು |
ನಗುತ ಮೆರೆವುದು || ನಗವು |
ನಗುತ ಮೆರೆವುದು || ಅಗಜೆ || 1 ||
ಸಲಿಲನಾರಿ | ಬಳುಕಿ ಜಾರಿ |
ಬಳಸಿ ನಗವನು || ಇನಿಯ ||
ಬಳಸಿ ನಗವನು ||
ಇಳಿದು ತಬ್ಬಿ | ಕೊಳುತಲಬ್ಬಿ |
ಗೊಳುತ ನೆಗೆವಳು || ಅಬ್ಬಿ ||
ಗೊಳುತ ನೆಗೆವಳು || ಸಲಿಲ || 2 ||
ರಾಜಶೀವಿ | ಯೋಜೆ ನೋಡು |
ಭೂಜವೃಂದಕೆ ||
ರಾಜಮೌಳಿ | ಜಾಜಿಬಳ್ಳಿ |
ರಾಜಿಸುತ್ತಿದೆ || ಶಿವನೆ || ರಾಜಿಸುತ್ತಿದೆ || 3 || 171 ||

**ಭೈರವಿ - ತ್ರಿವುಡೆ**
ಅಂಚೆನಡಿಗೆಯ ನೋಡೆ ನಲ್ಲೆ ಪ |
ಳಂಚಲೆಯುವೀ ಜಿಂಕೆಯ ||
ಪಂಚಮದ ಕುಹುಕೂಜನದ ಪಿಕ |
ದಿಂಚರವ ನೀ ಕೇಳ್ದೆಯ ||
ಹೊಂಚಿ ನಾಟ್ಯದಿ ನಲಿವ ನವಿಲೇ |
ಕುಂಚವಾಗಿದೆ ಪ್ರಕೃತಿಯ ||
ಚಂಚಲಾಕ್ಷಿಯೆ ನೋಡೆನುತಲಾ |
ಪಂಚಮುಖ ಪಾರ್ವತಿಗೆ ತೋರ್ದನು || 1 || 172 ||

**ಭಾಮಿನಿ**
ದೋಷವಿರಹಿತ ಪ್ರಕೃತಿ ಪುರುಷವಿ |
ಲಾಸದಿಂ ಬೆರಗಾಗೆ ಜಗ ಕೈ |
ಲಾಸಪತಿಯುದ್ರಿಕ್ತನಾದನು ಶಿವೆಯ ಮೊಗನೋಡಿ ||
ಈಶ ಸ್ಖಲಿಸಲು ಭೃಗುಜ ಮಿಣ್ಣನೆ |
ಈ ಸಮಯವನುಕೂಲವೆಂದು |
ಲ್ಲಾಸ ಹಾಸದಿ ಶುಕ್ರರೂಪದೊಳಿಳಿದು ನಗುತಿರಲು || 1 || 173 ||

**ಸೌರಾಷ್ಟ್ರ - ತ್ರಿವುಡೆ**
ಕಂಡು ಕೋಪದಿ ಕೆಂಡವಾದನು |
ಗಂಡಹೆಂಡಿರ ಸರಸಕ್ರೀಡೆಗೆ |
ಗಂಡವಾಗುತ ಬಂದೆಯಾ ನೀ | ಭಂಡ ಮುನಿಯೆ || 1 ||
ಕಾಲಕಂಟಕ ಜೀರ್ಣನಾಗದೆ |
ಬಾಳಿದೆಯ ಮುಂದುಳಿಸೆನೆನ್ನುತ |
ಶೂಲಿ ರೋಷದಿ ಮೇಲಕೆತ್ತಿದ | ಶೂಲವನ್ನು || 2 || 175 ||

**ಕಾಪಿ - ಅಷ್ಟ**
ಎರೆಯ ಸೈರಿಸು ಸೈರಿಸೊರೆವೆ | ನಿನ್ನ |
ತರಳನೀತನ ನೀನು ಕೊಲುವುದು ತರವೆ ||
ಗುರುಕವಿ ಭಾರ್ಗವನೀತ | ನಿನ್ನು |
ದರದಿಂದ ಮಥಿಸಿ ಬಂದಿಹ ನವನೀತ || 1 ||

ಶುಕ್ರರೂಪವನಾಂತು ಧರೆಗೆ | ಈತ |
ನಿಷ್ಕ್ರಮಿಸಿದನೆಂದು ಕೋಪವೆ ನಿನಗೆ ||
ವಿಕ್ರಮವಿರುವೆಡೆ ಮುನಿಸು | ಏಕೆ |
ಅಕ್ರಮವಿಲ್ಲಿಲ್ಲ ನಮಿಸುವೆ ಕ್ಷಮಿಸು || 2 || 177 ||

**ಶಂಕರಾಭರಣ - ತ್ರಿವುಡೆ (ಪ್ರಭೇದ)**
ಶಾಂಭವಿಯ ನುಡಿಗೊಲಿದು ಶಂಭುವು |
ಸ್ತಂಭಿಸುತ ಶೂಲವನು ನೀ ಸುತ |
ನೆಂಬ ನುಡಿ ದಿಟವಹುದು ದೈತ್ಯ ಕ |
ದಂಬಗುರು ನಾನೊಪ್ಪಿದೆ | ಕ್ಷಮಿಪೆ ನಿನ್ನ || 1 ||
ಸಾಧಕನೆ ನೀ ಶುಕ್ರರೂಪವ |
ನಾಧರಿಸಿ ಧರೆಗೊಗೆಯುತೆನಗೆಣೆ |
ಯಾದೆ ಶುಕ್ರಾಚಾರ್ಯ ನಾಮದೊ |
ಳಾದರವಗೊಳು ಲೋಕದಿ | ಜಯವ ಪೊಂದು || 2 ||
ತಂದೆತಾಯಿಯರಿಂಗೆ ಮಣಿವೆನು |
ಹೊಂದಿದೆನು ಮರುಹುಟ್ಟ ನಿಮ್ಮಿಂ |
ಕಂದ ಶುಕ್ರನ ಕಾವುದೆಂದೆಂ |
ದೆಂದೆರಗಿ ಪೊರವಂಟನು | ಹರಕೆಗೊಳುತ || 3 || 180 ||

*ಸಂಧಿ 3 : ದೈತ್ಯೋದ್ಧಾರ*

**ವಾರ್ಧಕ**
ಕಾಮಹರನುದರದೊಳಗುಶನನಿಹ ಕಾಲದೊಳು |
ಸೋಮಕಂ ವೇದತಸ್ಕರನಾಗೆ ಮೀನಾಗಿ |
ಶ್ರೀಮನೋವಲ್ಲಭಂ ಮಡುಹಿದಂ ಭೃಗುಶಾಪ ಮೊದಲಾದುದೀತೆರದೊಳು ||
ಭೀಮಬಲ ಕನಕಕಶಿಪುವು ಹಿರಣ್ಯಾಕ್ಷರು |
ದ್ದಾಮಸಾಹಸದಿಂದ ಸ್ವರ್ಧಾಮಮಂ ಗೆಲಲ್ |
ಭೂಮಿದೇವಿಯ ಮೊರೆಗೆ ಹಂದಿಯಾದಂ ಹರಿಯು, ಪ್ರಹ್ಲಾದನುದ್ಧಾರಕೆ || 1 ||
ನರಸಿಂಹ ರೂಪಾಂತ, ಕೂರ್ಮಾವತಾರವಾ |
ಶರಧಿಮಥನದೊಳಾಗಲಿಂತು ಚತುರವತಾರ |
ಪರಪುರುಷಂ ಮುಗಿಸಲಿತ್ತ ಶೋಣಿತಪುರದಿ ಹರಿಭಕ್ತ ಪ್ರಹ್ಲಾದನು ||
ಪರಿಪಾಲಿಸುತ್ತಿರಲ್ ದ್ವಿಜವೇಷದಿಂ ಮಘವ |
ಭರಿತಶೀಲವನೊಯ್ಯೆ ಕ್ರೋಧದಿಂ ಧುರವೆಸಗಿ |
ಪರಿಭವಂಗೊಂಡು ದುಃಖದೊಳಿರ್ದ ಶುಕ್ರಸುತರೀ ಕಾಲದೊಳ್ ಗುರುಗಳು || 2 || 182 ||

**ಮಧುಮಾಧವಿ - ತ್ರಿವುಡೆ**
ಶ್ರೀನಿಧಿಯ ಸದ್ಭಕ್ತ ಸಜ್ಜನ |
ಮಾನನಿಧಿ ಭಾಗವತಜನಮಣಿ |
ಶೋಣಿತವನಾಳಿದನು ಭಜಕ ವಿ |
ತಾನದೆರೆಯನು ಜ್ಞಾನಿಯು || 1 ||
ನಂಬಿಕೆಯ ಕಟ್ಟಾಳು ದೈವದ |
ಬಿಂಬವನು ಕಂಬದೊಳು ತೋರಿದ |
ನೆಂಬ ಬಿರುದಿನೊಳಾಳ್ದ ದೈತ್ಯ ಕ |
ದಂಬವನು ಸಂಬಾಳಿಸಿ || 2 || 184 ||

**ಕಾಂಬೋಧಿ - ಝಂಪೆ**
ಹರಿಯ ನಾಮಾಮೃತವ ತುಂಬಿ ಮಹತಿಯ ಮಿಡಿದು |
ಪರಮಭಕುತರ ಭಾವಲಹರಿಯಂ ಮೀಟಿ |
ಕರಣಪೀಯೂಷನಾದಾವರಣ ನಿರ್ಮಿಸುತ |
ಸುರಮುನಿಪ ನಾರದನು ಧರೆಗಿಳಿದು ಬಂದ || 1 || 185 ||

**ನವರೋಜು - ಏಕ**
ಕ್ಷೀರಾಂಭೋನಿಧಿಶಯನ | ಸಂ |
ಸಾರಾಂಭೋನಿಧಿತರಣ ||
ನಾರಾಯಣ ಜಯವೆನ್ನುತಲೈತಹ |
ನಾರದ ಮುನಿಪನ ಕಾಣುತಲೆದ್ದನು || 1 ||

ಕೈಹಿಡಿದೂs ಕರೆತಂದ | ಆ |
ಮಹಿಮನ ಗೌರವದಿಂದ ||
ವಿಹಿತವ ಬೋಧಿಸುತಹಿತ ನಿವಾರಿಸಿ |
ಮಹಿಯುದ್ಧರಿಸುವ ಮಹಿಮನೆ ನಮಿಸುವೆ || 2 || 187 ||

**ಬೇಗಡೆ - ಏಕ**
ಆಲಿಸುವುದೆಲೆ ಭಜಕಕುಲಮೌಳಿ | ನಾ ಬಂದೆ ನಿನ್ನಯ |
ಶೀಲಸಚ್ಚರಿತಗಳನುರೆ ಕೇಳಿ ||
ಶ್ರೀಲಲಾಮನ ಭಕುತನಹೆ ನೀ |
ಪಾಲಿಸುವೆ ದೈತ್ಯಾಳಿಯನು ಸಂ |
ಬಾಳಿಸುತಲೀಗೆಂತು ಪೇಳು ವಿ |
ಶಾಲಮತಿ ಸುಕ್ಷೇಮವೇನೈ || 1 ||
ನಿನ್ನ ಮನವಿನಿತೇಕೆ ಕುಂದಿಹುದು | ಲಕ್ಷ್ಮೀವರನ ಸಂ |
ಪನ್ನನೊಲಿಸಿಹನೆಂಬ ಬಿರುದಿಹುದು ||
ಮುನ್ನ ಪಿತನು ಹಿರಣ್ಯಕಶಿಪುವು |
ಚಿಣ್ಣನಾದರು ಚಿತ್ರಹಿಂಸೆಗ |
ಳನ್ನು ನೀಡಲು ಸಹಿಸಿಕೊಂಡೈ |
ಮನ್ನೆಯನೆ ಮತ್ತೇನು ಮರುಕವು || ಆಲಿಸು || 2 || 189 ||

**ಕೇದಾರಗೌಳ - ಅಷ್ಟ**
ಯತಿವೇಷಧರಿಸಿ ವಾಸವ ಮೋಸದಿಂದ ಸಂ |
ಚಿತ ಶೀಲಮಂ ಬೇಡಲು ||
ಪತಿತನಾದೆನು ಕೊಟ್ಟು ಹತತೇಜನಾಗಿಹೆ |
ವೃತಿಪತಿ ಗತಿಗಾಣೆನು || 1 ||
ಬಲವು ಶೀಲವನು ಬೆಂಬಲಿಸಿದ ಕಾರಣ |
ಬಳಲಿದೆ ಹೋರಾಟದಿ ||
ಬಲವೈರಿಯಿಂ ಸೋತು ಬಲಿತ ಚಿಂತೆಯ ಪೊತ್ತು |
ನೆಲಕೆ ನಾ ಭಾರವಾದೆ || 2 || 191 ||

**ಸುರುಟಿ - ಏಕ**
ಆಲಿಸು ದೈತ್ಯೇಂದ್ರ | ತವಗುರು |
ಶೂಲಿಯ ದಯದಿಂದ ||
ಕಾಲನಿಯಂತ್ರಕ ಮಂತ್ರಮಹೋದಧಿ |
ಮೇಲಹ ಮಾಯಾಸಿದ್ಧಿಯ ಹೊಂದಿಹ || 1 ||
ಭವನುದರವ ಸೇರಿ | ತಪದೊಳು |
ಶಿವಸಮ ಕಲೆಯೇರಿ ||
ಅವತರಿಸಿಹನೈ ಶುಕ್ರಸ್ವರೂಪದಿ |
ತವಸಿಯನಾಶ್ರಯಿ | ಸವನಾಶ್ರಮದೊಳು || 2 ||
ಶುಕ್ರಾಚಾರ್ಯನನು | ಕರೆತಾ |
ವಿಕ್ರಮಿಯಹೆ ನೀನು ||
ಶಕ್ರಾದ್ಯರ ಗೆಲು ಪಡೆ ಯಶಮೆಂದು ಪ |
ರಿಕ್ರಮಿಸಿದ ನಾರದ ಮುನಿ ನಭದಲಿ || 3 || 194 ||

**ಭಾಮಿನಿ**
ಮುನಿಯವಚನವನವಧರಿಸುತಾ |
ಘನ ಮಹಿಮನಂ ಕಾಂಬ ತವಕದೊ |
ಳನುಜ ಮಂತ್ರಿ ಸಮೇತ ಪೊರಟನು ಶುಕ್ರರಾಶ್ರಮಕೆ ||
ಅನಲನೇತ್ರಪ್ರಸಾದಪಾತ್ರನೆ |
ದನುಜಕುಲವುದ್ಧರಿಸಿ ಕಾಯುವ |
ಮನವ ಮಾಡುವುದೆಂದು ಪದಯುಗಕೆರಗಿ ಬೇಡಿದನು || 1 || 195 ||

**ಸಾಂಗತ್ಯ - ರೂಪಕ - ಝಂಪೆ - ಅಷ್ಟ - ಏಕ**
ಹರಸುತ್ತಲಿಂತೆಂದ ಶುಭವಾಗಲೈ ಕಂದ |
ಪರಿಕಿಸಲ್ ದೈತ್ಯೇಂದ್ರ ನೀನು ||
ಪರಮಭಾಗವತನಂತಿರುವುದೀ ಹೊರವೇಷ |
ವರಿಯೆ ನೀನಾರು ಪೇಳೆಂದ || 1 || 196 ||

**ಸಾಂಗತ್ಯ - ರೂಪಕ**
ಒಡೆಯನಾಗಿಹೆ ದೈತ್ಯಗಡಣಕ್ಕೆ ಪ್ರಹ್ಲಾದ |
ಜಡಜನಾಭನ ಭಕ್ತನಹೆನು ||
ಪಡೆದರ್ ಹಿರಣ್ಯಕಶಿಪುಕಯಾದುಗಳೆನ್ನ |
ಪೊಡವಿ ಶೋಣಿತ ಗುರುವರನೆ || 1 ||
ದಾನವರಿಗೆ ಗುರು ನೀವೆಂದು ಪದ್ಮಜ |
ಸೂನುವೆಚ್ಚರಿಸಲೈತಂದೆ ||
ಮೌನೀಶ ಬಂದೆಮ್ಮನುದ್ಧಾರಗೈವುದು |
ಜ್ಞಾನಿಯೆ ಸಲಹೆಮ್ಮ ತಂದೆ || 2 || 198 ||

**ಜಂಜೂಟಿ - ಅಷ್ಟ**
ಮೆಚ್ಚಿದೆನೆಲೆ ದೈತ್ಯಭಾನು | ನಿನ್ನ |
ನಿಚ್ಚಟಭಕ್ತಿಗೆ ನಾನು ||
ಸಚ್ಚರಿತನೆ ಬಂದು | ಮೆಚ್ಚಿ ನೀ ಕರೆವಾಗ |
ಚಚ್ಚರದಿ ಬಹೆ | ಮುಚ್ಚಟೆಯೊಳೆ |
ನ್ನಿಚ್ಛೆಯನು ನೀ | ನೆಚ್ಚರಿಸಿದೈ || 1 ||
ಧನ್ಯರಾದೆವು ಗುರುದೇವ | ಸಂ |
ಪನ್ನ ನೀ ಬರಲು ಭೂದೇವ ||
ಉನ್ನತರಾದೆವೆ | ಮನ್ನಿಸಿಯಕಾಗಿ ನೀವ್ |
ಬನ್ನಬಟ್ಟಿರಿ | ಪನ್ನಗಾಭರ |
ಣನ್ನ ಮೆಚ್ಚಿಸಿ | ಮರಳಿ ಬಂದಿರಿ || 2 || 200 ||

**ದ್ವಿಪದಿ**
ಉಚಿತ ಮರಿಯಾದೆಯಿಂ ಪುರಕೆ ಕರೆತಂದು |
ರಚಿಸಿ ಭವನವ ನೆಲೆಯಗೊಳಿಸಿ ತಾನಂದು || 1 ||
ದುಗುಡದಿಂ ಪ್ರಹ್ಲಾದ ಮಣಿದೊಂದು ದಿವಸ |
ವಿಗಡ ಮುನಿರುದ್ರನೊಳು ಪೇಳಿದನು ಮನಸ || 2 || 202 ||

**ಗೌಳ - ಆದಿ**
ಭೃಗುಮುನಿತನಯ ಲಾಲಿಪುದೆನ್ನ ನುಡಿಯ |
ಅಗಣಿತಮಹಿಮನೆ ವ್ರತಿಗಳಿಗೊಡೆಯ || ಪ ||
ಸುರಪನೊಂದಿನ ಬಂದ | ದ್ವಿಜವೇಷದಿಂ ನಿಂದ |
ಭರಿತ ಶೀಲವನೊಯ್ದ | ಮರೆಮೋಸದಿಂದ || ಭೃಗು || 1 ||
ಕಾಲವೀ ಪರಿ ಕೆಟ್ಟು | ಕಾಳಗವನು ಕೊಟ್ಟು |
ಸೋಲಿಗೆ ಮೆಯ್ಗೊಟ್ಟು | ಪೇಳಲೇನುಂಟು || ಭೃಗು || 2 || 204 ||

**ಭಾಮಿನಿ**
ಅಸುರಪತಿ ಧೈರ್ಯವನು ತಾಳ್ಮುಮ |
ನಸರೊಡೆಯನಿಂಗೆನ್ನ ಮಂತ್ರಣ |
ದೆಸುಗೆಯಿಂ ತೋರುವೆನು ಬಿಡು ನೀ ಮನದ ಕ್ಲೇಶವನು ||
ಉಶನ ಬಂದ ಸುವಾರ್ತೆ ದೇವ |
ಪ್ರಸರವರಿಯಲಿ ಪೊಸ ವಿಧಾನದಿ |
ಮುಸುಕಬೇಕೈ ನಾಕ ಕರೆಸೈ ದೈತ್ಯಸಂಕುಲವ || 1 || 205 ||

**ಆಹೇರಿ - ಝಂಪೆ**
ಬಂದುದಾ ಕರ್ಬುರರ ಬಲವು | ಬಹಳ |
ಮಂದಿ ಮಾರ್ಬಲ ಕೂಡಿ ತಂದು ಶೋಣಿತಪುರದಿ || ಬಂದುದಾ || ಪ ||
ವೀರತನವೆಮಗೆ ಶೃಂಗಾರವೆಂಬದ್ಭುತರು |
ಘೋರರೂಪಗಳಿಂದ ಬೀಭತ್ಸರೆನಿಸುವರು ||
ವೈರಿವನಿತೆಯರ ಕಣ್ಣೀರ ಕರುಣಾರಸರು |
ಭೀರುವಂತೋಡುವರಿಗಳ ಹಾಸ್ಯಗೈವವರು ||
ಹೋರಾಟವಿಕ್ಕಿ ರೌದ್ರದಿ ರೂಹುಗೆಡಿಸುವರು |
ಕ್ರೂರತನದಿಂ ಭಯಾನಕ ಕಾರ್ಯಗೈವವರು ||
ಗೌರವದಿ ವಂದಿಪರ ಶಾಂತದಿಂ ಕಾಂಬವರು |
ಮೂರು ಲೋಕವ ಮುರಿವ ರಣರಸದ ಪಂಡಿತರು || ಬಂದುದಾ || 1 || 206 ||

**ಮಾರವಿ - ಏಕ**
ನಮಿಸುತ ಸಂಹ್ಲಾದನು ಹೇ ಜೇಷ್ಠನೆ |
ಎಮಗೇಂ ಕರೆಯಾಯ್ತು ||
ನಿಮಿಷಾರ್ಧದಿ ಕೈಗೂಡಿಪೆನಾರಿಂ |
ಸಮನಿಸಿತಾಪತ್ತು  || 1 || 207 ||

**ಭೈರವಿ - ಏಕ**
ಅನುಹ್ಲಾದನು ಮಣಿಯುತ್ತ | ಕೇ |
ಳ್ದನು ಬಂದಿರುವ ವಿಪತ್ತ ||
ಅನುಮಾನಿಸದರುಹೆಂದು | ತಾ |
ಕ್ಷಣದಲಿ ಸಾಧಿಪೆನೆಂದು || 1 || 208 ||

**ಸೌರಾಷ್ಟ್ರ - ತ್ರಿವುಡೆ**
ಎರಗಿ ಕೇಳ್ದನು ಶಿಬಿಯು ಕರೆಸಿಹೆ |
ಭರಿತ ಸೇನಾಜಾಲವಾವೆಡೆ |
ತೆರಳಬೇಕೆನಗಪ್ಪಣೆಯ ಕೊಡು | ಧುರವಿಜಯಕೆ || 1 || 209 ||

**ಕೇದಾರಗೌಳ - ಝಂಪೆ**
ಕಿರಿಯ ಭಾಷ್ಕಳನೆರಗುತ | ಕೇಳಿದನು |
ಪಿರಿಯಣ್ಣ ರಣಕೈದುತ ||
ಸುರಮುಖ್ಯರನ್ನಿರಿಯುವೆ | ಅನುಮತಿಯ |
ಕರುಣಿಸೀಕ್ಷಣ ಪೊರಡುವೆ || 1 || 210 ||

**ಮಧುಮಾಧವಿ - ಆದಿ**
*(ಧಾಟಿ : ಹಂಸಕೇತನಾದಿಗಳೆಲ್ಲ...)*
ಅನುಜಾತ ಮಂತ್ರಿ ಮಾಂಡಳಿಕರೆ ಕೇಳಿ |
ದನುಜಾರಿಗಳ ಗೆಲ್ವ ಮನದಿಂದಲೇಳಿ | ಪ |
ಗುರುವಿನಾಶಿಷವಾಂತು | ಸುರಲೋಕಕೇರುವ |
ಪರಿ ಬೇರಿರುವುದದ | ನರಿತಿರಿ ನೀವು ||
ಸುರಸಂಪದದ ಮೋಹ | ಕೆರವಲ್ಲ ಮೋಹರ |
ಗರುವವ ಮುರಿದು ಪಿಂ | ತಿರುಗುವ ಗುರಿಯು || 1 ||
ನೀತಿ ಮೀರದ ರಣ | ರೀತಿಯಾದರೆ ನಮ್ಮ |
ಭೂತೇಶ ಜಯವ ಪೊಂ | ದಿಪನೆಂದು ನಂಬಿ ||
ಐತಹುದೆನ್ನ ಸಂ | ಗಾತವೆನ್ನುತಲೆದ್ದು |
ಖ್ಯಾತಿಜಗೆರಗೆ ಪ್ರ | ಖ್ಯಾತ ಪ್ರಹ್ಲಾದ || ಅನುಜಾತ || 2 || 212 ||

**ಮಾರವಿ - ಏಕ**
ವಿಕ್ರಮಿ ತೆರಳೈ ಸ್ವರ್ಧಾಮವ ನೀ |
ನಾಕ್ರಮಿಸುತ ಗೆಲಿದು ||
ಶಕ್ರನ ಗೆಲ್ಲೆಂದಾಶಿಷಗೈದನು |
ಶುಕ್ರ ದನುಜಗಂದು || 1 ||
ಇತ್ತನು ಯೋಗಿ ಮಹತ್ತ್ವದ ಶಕ್ತಿಯ |
ಸತ್ತ್ವವು ವರ್ಧಿಸಲು ||
ದೈತ್ಯವಿತಾನದುಘೇಯಬ್ಬರದಿಂ |
ಧಾತ್ರಿಯು ಕಂಪಿಸಲು || 2 || 214 ||

**ತುಜಾವಂತು - ಮಟ್ಟೆ**
ಪೊರಟರಮಮ ದೈತ್ಯವೀರರು | ಸ್ವರ್ಗಲೋಕ |
ಮುರಿದು ಗೆಲುವ ಮನದ ಶೂರರು || ಪೊರಟ || ಪ ||
ಗುರುವು ಸರುವರನ್ನು ಹರಸೆ |
ಎರಗುತೆದ್ದು ಪರಿಘ ಕುಂತ |
ಶರ ಶರಾಸನಾದಿಗಳನು |
ಧರಿಸಿ ಗದೆಯ ತಿರುಹಿ ಖಡ್ಗವ || ವೀರನಡೆಯ |
ಗುರಿಯನೇರಿ ಪೊಕ್ಕು ಸ್ವರ್ಗವ || ಬಡಿದು ದೂತ |
ಗುರುಹಲೋಡೆ ಬೊಬ್ಬಿಡುತ್ತವ || ಪೊರಟ || 1 || 215 ||

**ಕಲ್ಯಾಣಿ - ಅಷ್ಟ**
ವಂದಿಸುವೆನು ಸುರರೊಡೆಯ | ನೋಡು |
ಬಂದಿಹ ದಾನವ ಪಡೆಯ ||
ಮಂದಿ ಮಾರ್ಬಲವೆಷ್ಟೊ ತಿಳಿಯ | ಅವ |
ರಂದವು ನೂತನ ಜೀಯ || 1 ||
ಕೊರಳೊಳು ತುಳಸಿಯ ಸರವ | ಧರಿ |
ಸಿರುವವನವರೊಳು ಗರುವ ||
ಹರಿಭಕ್ತ ಪ್ರಹ್ಲಾದನೆನುವ | ಬಂದ |
ಪೊರೆಯಬೇಕೆಮ್ಮನು ಮಘವ || 2 || 217 ||

**ಸೌರಾಷ್ಟ್ರ - ತ್ರಿವುಡೆ**
ಕೇಳಿ ವಿಸ್ಮಿತನಾಗಿ ಸುರಪತಿ |
ಖೂಳನೀಗೈತಂದನಚ್ಚರಿ |
ಶೀಲವನು ನಾ ಸೆಳೆಯುತಾತನ | ಸೋಲಿಸಿರ್ದೆ || 1 ||
ಬಂದರೊಳ್ಳಿತು ಹರಿಭಜಕನೆಂ |
ದಂದು ಬಿಟ್ಟಿಹೆ ಶಿರವನರಿವೆ ಮ |
ದಾಂಧನಿಗೆ ಕಡೆಗಾಲವೀದಿನ | ಬಂದುದಹಹ || 2 || 219 ||

**ನಾದನಾಮಕ್ರಿಯೆ - ಅಷ್ಟ**
ಪಾಕಶಾಸನ ಕೊಡು ನೇಮವ | ಸುರ |
ಲೋಕಕ್ಕೈದಸುರರ ಸ್ತೋಮವ |
ನಾ ಕೊಂದು ಸುಡುವೆನೆಂದಗ್ನಿಯು | ಕೆಂಡ |
ತಾ ಕಾರೆ ಸುರರ ಶತಘ್ನಿಯು || 1 || 220 ||

**ಘಂಟಾರವ - ಅಷ್ಟ**
ಬಿಡು ಬಿಡೌಜಸರೊಡೆಯನೆ ಸುಳಿಯುತ್ತ ||
ದಡಿಗರನು ಕಡಿದಡಗಿಸುವೆನೆಂ |
ದೊಡನೆ ಮಾರುತನೆದ್ದನು || 1 || 221 ||

**ಕೇದಾರಗೌಳ - ಝಂಪೆ**
ವರುಣನುಕ್ಕೇರುತೆಂದ | ಸುರಪತಿಯೆ |
ದುರುಳ ಪ್ರಹ್ಲಾದನಿಂದ ||
ಬರುವುದೇಂ ನಾ ಕಾಂಬೆನು | ಕೊಡು ನೇಮ |
ಕರುಳುಗಿದು ಕೊಲುವೆ ನಾನು || 1 || 222 ||

**ಭೈರವಿ - ಏಕ**
ಶ್ಯಮಿನಿಪತಿ ಮೇಲೆದ್ದು | ಕೊಡು |
ನೇಮವನರೆವೆನು ಮದ್ದು ||
ಯಾಮಿನಿ ಚರರನ್ನೆಳೆದು | ಪಿಡಿ |
ದಾಂ ಮುಳುಗಿಪೆ ನರಕದೊಳು || 1 || 223 ||

**ಸಾವೇರಿ - ಏಕ**
ಏರುತಲ್ಯೆರಾವತವ | ಸುರ |
ವಾರದಧಿಪ ಸಂಗರವ ||
ಸಾರುತ ಸುರಪರಿ | ವಾರ ಸಹಿತ ಪೊರ |
ಟಾರುಭಟಿಸುತ್ತೈತಂದರು ತಡೆದರು || 1 ||
ಅಗ್ರಜನಪ್ಪಣೆ ಪಡೆದ | ರಣ |
ದುಗ್ರತೆಯಿಂ ಸಂಹ್ಲಾದ ||
ನಿಗ್ರಹಿಸುತಲೈತಹನಂ ಕಂಡು ಮ |
ಹೋಗ್ರತೆಯಿಂ ತಡೆದೆಂದನು ಮಾರುತ || 2 || 225 ||

**ಭೈರವಿ - ಮಟ್ಟೆ**
ಒರೆಯೊ ದಾನವ | ಇಲ್ಲಿ | ಬರುವ ಕಾರಣ ||
ದುರುಳ ನಿನ್ನಯ | ಪೆಸರ | ನರುಹುತೀಕ್ಷಣ |
ತೆರಳು ಸುಮ್ಮನೆ | ಅಲ್ಲ | ದಿರಲು ಹಮ್ಮನೆ ||
ಮೆರೆದೆಯಾದರೆ | ಮರುತ | ನಿರವನರಿಯುವೆ || 1 || 226 ||

**ಮಾರವಿ - ಝಂಪೆ**
ಚಿನುಮಯನ ಸದ್ಭಕ್ತ | ದನುಜೇಶ ಪ್ರಹ್ಲಾದ |
ನನುಜ ಸಂಹ್ಲಾದನಹೆ | ಮಘವನಟ್ಟುಳಿಯ ||
ಹಣಿಸಲಾಂ ಬಂದಿಹೆನು | ಶೀಲಮಂ ಸೆಳೆದಿಹನ |
ಮನವ ಮೆಚ್ಚಿಸಬಂದ | ಮರುತ ಕೇಳೆಂದ || 1 ||
ಸುರೆಯ ಕುಡಿದೆಮ್ಮಸುವ | ನರೆವ ಬುದ್ಧಿಯೆ ನಿಮಗೆ |
ದುರುಳನಾದ ಹಿರಣ್ಯ | ಕಶಿಪುತರಳ ||
ಹರಿಭಕ್ತನಾದಡೇಂ | ಸುರದ್ವೇಷವಡಗುವುದೆ ||
ಕರುಳುಗಿವೆ ಬಾರೆಂದ | ಮರುತ ಪಲ್ಗಡಿದು || 2 || 228 ||

[ಯುದ್ಧ-ಮರುತನ ಪರಾಭವ]

**ಸೌರಾಷ್ಟ್ರ - ತ್ರಿವುಡೆ**
ಮರುತ ಮೆಯ್ಮರೆದೊರಗಲಗ್ನಿಯು |
ಉರಿಯುಗುಳುತ್ತೈತರಲು ಶರವಂ |
ಸುರಿದು ಬರಲನುಹ್ಲಾದನೆದುರಿಸು | ತೊರೆದನವಗೆ || 1 ||
ಏನೆಲವೊ ನೀ ಬಂದುದೇತಕೊ |
ಮಾನದಿಂ ಪೋಗಾರೊರೆದು ವೈ |
ಶ್ವಾನರನು ನಾ ಸುಡುವೆ ಬಿಡು ಬಿಗು | ಮಾನವನ್ನು || 2 || 230 ||

**ಭೈರವಿ - ಅಷ್ಟ**
ಜಾತವೇದನೆ ಕೇಳೆಲೊ | ಅನುಹ್ಲಾದ |
ನೈತಂದೆ ಧುರಕೆ ತಾಳೊ ||
ಖ್ಯಾತಿಜನಾಶಿಷವಾಂತು ಬಂದಿಹೆ ಸುರ |
ವ್ರಾತವ ಗೆಲುವೆ ತಾಳೊ || 1 ||
ಹಿಂದೆ ದೇವೇಶನೊಳು | ಪರಾಜಯ |
ಹೊಂದಿದ ಧೂರ್ತರೊಳು |
ಬಂದಿಹ ಮರುಶಕ್ತಿಯಿಂದವನೀಕ್ಷಿಪೆ |
ನೆಂದೆಚ್ಚನಸ್ತ್ರದೊಳು || 2 || 232 ||

[ಯುದ್ಧ - ಅಗ್ನಿಯ ಪರಾಭವ]

**ಮಾರವಿ - ಏಕ**
ಕಿಡಿಗೆದರುತ ಶೈಮಿನಿಪತಿಯೈತರೆ |
ನಡೆದ ಶಿಬಿಯು ಧುರಕೆ ||
ದಡಿಗದನುಜ ನೀನಾರೆಲೊ ನಡೆನಡೆ |
ಪಿಡಿದೊಯ್ವೆನು ಪುರಕೆ || 1 ||
ಕಾಲನೆ ಕೇಳ್ ಪ್ರಹ್ಲಾದನನುಜ ಶಿಬಿ |
ಶೀಲವನೊಯ್ದವನ ||
ಖೂಳಸುರಪನಂ ಶಿಕ್ಷಿಪೆ ತಡೆದರೆ |
ಕಾಲಾಂತಕನಹೆ ನಾ || 2 || 234||

**ಕಾಂಬೋಧಿ - ಮಟ್ಟೆ**
ದುಷ್ಟದನುಜ ಯಮನ ಪಾಶವೆದುರು ಬಂದಿದೆ | ನಿನಗೆ |
ನೈಷ್ಟು ಸೊಕ್ಕು ರೌರವದೊಳು | ಕುಟ್ಟಿ ಕೆಡಹುವೆ || 1 ||
ಬರಿದೆ ಬಾಯ ಬೊಬ್ಬೆ ಸತ್ಯ | ವಿರದು ನೋಡಿಕೊ || ನಿನ್ನ |
ಶಿರದ ಭಾರವಿಳಿಸಿ ಬಿಡುವ | ಶರವ ಸಹಿಸಿಕೊ || 2 || 236 ||

[ಯುದ್ಧ - ಯಮನ ಪರಾಜಯ||

**ಘಂಟಾರವ - ಅಷ್ಟ**
ವರುಣ ಕಾಣುತಲುರಿದೆದ್ದು ಬರುತಿರೆ ||
ಸುರಿದು ಭಾಷ್ಕಲ ಸರಳ ಸೋನೆಯ |
ನೆರಗಿ ಬಂದನು ಸಮರಕೆ || 1 ||
ನಿಲ್ಲು ನಿಲ್ಲೆಲೊ ವರುಣನೆ ಭಾಷ್ಕಲ |
ನಲ್ಲಿ ಧುರವೆಸಗದೆಯೆ ಪೋಗುವು |
ದೆಲ್ಲಿಗೆನ್ನುತ ತಡೆದನು || 2 || 238 ||

**ಕೇದಾರಗೌಳ - ಝಂಪೆ**
ಭಾಷ್ಕಲನೆ ಗಳಹಬೇಡ | ಕಲಹವ |
ತ್ಯಾಸೆ ಸೋಲಿಪುದು ನೋಡಾ ||
ವಾಸವಾರ್ಜಿತದ ಸಿರಿಯ | ಬಯಸಿದರೆ |
ನಾಶವೆಂಬುದು ನಿಶ್ಚಯ || 1 || 239 ||

[ಯುದ್ಧ - ವರುಣನ ಪರಾಭವ]

**ಕೇದಾರಗೌಳ - ಅಷ್ಟ**
ಸುರಪ ಸಂಭ್ರಮದಿಂದಲೇರುತ್ತೈರಾವತ ||
ತಿರುಹುತ್ತುಲಶನಿಯನು ||
ಧುರದಿ ಕೆಟ್ಟೋಡುವಮರರ ಸಂತೈಸುತ್ತ |
ಪೊರವಂಟನಾಹವಕೆ || 1 ||
ಮಾಧವನನು ನೆನೆದಾಹ್ಲಾದದಿಂದ ಪ್ರ |
ಹ್ಲಾದನು ರಥವೇರಿದ ||
ಕಾದಿ ಗೆಲ್ಲೆಂದ ಸದ್ಗುರುವ ನೆನೆದು ಸತ್ಯ |
ವಾದಿಯು ರಣಕೈದಿದ || 2 || 241 ||

**ದೇಶಿ - ಅಷ್ಟ (ಇನ್ನೊಂದು ರೀತಿ)**
ಬಂದೆಯ | ದನುಜ | ಬಂದೆಯ | ಪ ||
ಬಂದೆಯ ದನುಜ ನೀ ಸ್ವರ್ಗದೈಸಿರಿಯ ||
ಹೊಂದುವಾಸೆಯ ಪೊತ್ತ ಧೂರ್ತನಾಗಿಹೆಯ | ಅ. ಪ |
ಮಂದರಧರಭಕ್ತನೆಂಬಹಂಕಾರ |
ಬಂದುದರಿಂಗೈದೆ ಶೀಲಾಪಹಾರ ||
ಎಂದಿಗೂ ಬಿಡದು ನೋಡೀ ರಕ್ತಗುಣವು |
ವೃಂದಾರಕರ ಗೆಲ್ವೆನೆಂಬ ದುರ್ಗುಣವು || ಬಂದೆಯಾ || 1 ||
ಎನ್ನ ಶೀಲವ ಕದ್ದೆ ವಿಪ್ರವೇಷದಲಿ |
ನಿನ್ನ ಕಾಣಲು ಬಂದೆ ನಿಜದ ಚೋಹದಲಿ ||
ಗನ್ನಗಾರನೆ ಗೆಲ್ವೆ ನೋಡೆನ್ನ ಶಕ್ತಿ |
ಇನ್ನೇನು ತೋರುವೆ ರಣದಿ ಕುಯುಕ್ತಿ || 2 || 243 ||

**ಪಂತುವರಾಳಿ - ಮಟ್ಟೆ**
ನಾಕನಗರಿಗೇರಿ ಗೆಲ್ಲು | ವಾಕೆವಾಳತನವೆ ಧುರವು |
ನೂಕದಾಯ್ತು ಹಿಂದೆ ನಿನ್ನ | ಕೇಕಟಿಸುವೆ ನಿಲ್ಲು ರಣಕೆ || 1 ||
ಹೂಟಗಾರ ಲೋಕಸುಖದೊ | ಳೂಟಗೈದರಾಗದವನೆ |
ಕೂಟವಿದ್ಯೆ ತೋರೆನುತ್ತ | ಸೂಟಿಯಿಂದಲೆಚ್ಚ ಶರವ || 2 || 245 ||

[ಯುದ್ಧ]

**ಭಾಮಿನಿ**
ಘೋರರಣ ಗಂಟಿಕ್ಕಿದುದು ಜಯ |
ನಾರಿ ಯಾರಿಂಗೊಲಿಯದಿರೆ ದೇ |
ವಾರಿ ಶುಕ್ರ ಮಹೋಗ್ರಶಕ್ತಿಯನಿಡಲಿಕುರಿಮಸಗೆ ||
ದಾರುಣಾಸ್ತ್ರಾಹತಿಯೊಳಾ ಸುರ |
ವಾರ ಕೆಟ್ಟೋಡುತಿರೆ ಹರಿಹಯ |
ಗಾರುಗೆಟ್ಟನು ಪೂರ್ವದೇವನ ಕೈಸೆರೆಗೆ ಸಿಲುಕಿ || 1 || 246 ||

**ಸೌರಾಷ್ಟ್ರ - ತ್ರಿವುಡೆ**
ಮೋಸದಿಂ ನೀ ಘಾಸಿಗೊಳಿಸಿದ |
ವಾಸಿ ಮುಗಿಯಿತು ವಾಸವನೆ ನಿ |
ನ್ನೈಸಿರಿಯು ತೃಣವೆನಗೆ ಪಿಡಿದಿಹೆ | ಕೈಸೆರೆಯನು || 1 ||
ಕೊಟ್ಟು ನಾನೇಂ ಕೆಟ್ಟೆನೇ ನೀ |
ನಿಟ್ಟುಕೊಂಡೇಂ ಗಳಿಸಿದೈ ಸುರ |
ಪಟ್ಟಕೆನ್ನಿಂದಾಗದಾಹತಿ | ಬಿಟ್ಟೆ ನಿನ್ನ || 2 ||
ದುಗುಡಮನ ಸುರಪಾಲ ತೆರಳಲು |
ವಿಗಡದೈತ್ಯರ ಗಡಣ ಸಹಿತಲಿ |
ಮಿಗುವ ಜಯಘೋಷದಲಿ ಶೋಣಿತ | ನಗರಕೈದ || 3 || 249 ||

**ಕುಸುಮಷಟ್ಪದಿ (ಝಂಪೆ)**
ಮರಳಿ ಜಯಘೋಷದಿಂ |
ಪುರಕೆ ಬಹ ಸೈನ್ಯಮಂ |
ಪರಿಕಿಸುತ ತನಗಾಗಿ ದಿವಕೇರುತ ||
ಸುರವಿಜಯ ಶಿಲ್ಪಿಗಳ |
ಮುರಿದ ರಣಮಾರಣಕೆ |
ಕರಗಿ ಗುರುಚರಣಯುಗಕೆರಗಿ ನಿಂದ || 1 || 250 ||

**ಕೇದಾರಗೌಳ - ಝಂಪೆ**
ಲೇಸಾಗಲೇಳು ದೊರೆಯೆ | ಯುದ್ಧದೊಳು |
ವಾಸವನೊಳ್ ಜಯವು ದೊರೆಯೆ ||
ಘಾಸಿಗೊಳಲೇತಕೊರೆಯೆ | ಪರಿಹರಿಪೆ |
ದೋಷವೇನೆಂಬುದೊರೆಯೆ || 1 || 251 ||

**ಕಾಂಬೋಧಿ - ರೂಪಕ**
ಗುರುವೆ ನಿಮ್ಮಯ | ದಯದೊಳೀ ಜಯ |
ದೊರೆತ ಮೇಲಕೆ | ಅರಿತೆ ಸತ್ಯವ ||
ಮರಣವಪ್ಪಲು | ದೈತ್ಯಕೋಟಿಯು |
ಬರುವ ಜಯದಲಿ | ಸಾರ್ವಭೌಮನಾ || 1 ||
ಒಡೆಯಗೋಸುಗ | ಮಡದಿ ಮಕ್ಕಳ |
ಗೊಡವೆಯಿಲ್ಲದೆ | ಮಡಿದ ವೀರರ ||
ಪಡೆಯಲಪ್ಪುದೆ | ಬಿಟ್ಟಗಣ್ಣಾರ |
ಒಡೆಯ ವಾಸಿಯ | ಬಿಡನು ನಿಶ್ಚಯ || 2 ||
ಮತ್ತೆ ಮತ್ತೆ ಕೈ | ಹತ್ತೆ ಯುದ್ಧವು |
ಮೃತ್ಯುವೆಮ್ಮನು | ಕಿತ್ತು ತಿಂಬುದು ||
ದೈತ್ಯ ಕುಲವನು | ರಕ್ಷಿಸೆನ್ನುತ |
ತತ್ತ್ವಸಿದ್ಧಗೆ ನಮಿಸಲೆತ್ತಿದ || 3 || 254 ||

**ಭೈರವಿ - ಝಂಪೆ**
ಕೇಳಯ್ಯ ದೈತ್ಯಕುಲಮೌಳಿ ಸುಮನಸರು ಸುರೆ |
ಗೂಳುಂಡು ಸಾವ ಗೆಲಿದಿಹರು ||
ಕಾಲವಶರಹ ನಿಮ್ಮ ಕಾಳಗದೊಳಿಕ್ಕುವರು |
ಮೇಲಾದುಪಾಯ ಬೇಕದಕೆ || 1 ||
ಕೃತ್ತಿವಾಸನನೊಲಿಸಿ ಸತ್ತ್ವಸಿದ್ಧಿಯ ಗಳಿಸಿ |
ಮೃತ್ಯುಮುಖದಿಂದಲುದ್ಧರಿಪೆ ||
ಆತ್ಮಬಲವೃದ್ಧಿಯಂ ಸಾಧಿಸಲು ಕಾರ್ಯಪು |
ವೃತ್ತರಾದರೆ ನೀವಮರರು || 2 ||
ತೆರೆದ ಕಣ್ಣಿರು ಹರಿತಗಣ್ಣಿರೆಚ್ಚರದೊಳಿರಿ |
ಬರುವನಕ ನಾನೆಂದು ಹರಸಿ ||
ಪೊರವಂಟು ಬಂದ ಹಿಮಗಿರಿಯ ತಪ್ಪಲಿಗಾಗಿ ||
ಪರಮಯೋಗೀಶ್ವರನನೊಲಿಸೆ || 3 || 257 ||

***ಸಂಧಿ 4 : ಸಂಜೀವಿನೀ ಸಿದ್ಧಿ***

**ವಾರ್ಧಕ**
ಕಂದರ್ಪಹರನ ಮೆಚ್ಚಿಸಿ ಮಂತ್ರಸಿದ್ಧಿಯಂ |
ಪೊಂದುವಾಸೆಯಲಿ ಸುತ್ತಲು ಭೂಮ ಧೂಮಮಂ |
ಸಂದಣಿಸಿ ನಡುವೆ ದೇಹವ ನಿಲಿಸಿ ಯೌಗಿಕದ ನೆಲೆಗೆ ತನ್ನಯ ಮನವನು ||
ಸಂಧಿಸಿದನೇನೆಂಬೆ ಮೂಲೋಕ ಬೆರಗಾಗೆ |
ಕೆಂದಿ ತಪದುರಿಯು ಪ್ರಜ್ವಲಿಸಲಾ ಧೂಮವೃತಿ |
ನಿಂದನೊಂದೇ ಮನದಿ ತಪಿಸಿದಂ ತಪಿಸಿದಂ ತಪಿಸಿದಂ ಭೂತಪತಿಯ || 1 || 258 ||

**ಕಾಂಬೋಧಿ - ಅಷ್ಟ**
ಅಮರಲೋಕದಿ ತಪ್ಪೆ ತಾಳ | ತಾರಾ |
ರಮಣಗೆರಗಿ ಸುರಪಾಲ ||
ಸಮನಸನಗರ ಶು | ಕ್ರನ ತಪದುರಿಯಿಂದ |
ಕಮರಿ ಪೋಗುತಲಿದೆ | ಶಮನಗೊಳ್ಳುವುದೆಂತು || 1 ||

ರಂಭೆಯ ಕಳುಹಿಸಿ ಕೊಡಲೆ | ಹೂವಿ |
ನಂಬ ಹಿಂಬಾಲಿಸಬಹುದೆ ||
ಶಂಭುವ ಮೆಚ್ಚಿಸ | ಬಾರದಾ ಭೃಗುಜಾತ |
ಮುಂಬರಿಯುವುದೆಂತು | ನಂಬಿದೆ ರಕ್ಷಿಸಿ || 2 || 260 ||

**ಭಾಮಿನಿ**
ಭ್ರಾಂತಿ ಬೇಡವೊ ನೋಟ ಮಾಟಕೆ |
ಭ್ರಾಂತನಾಗುವನಲ್ಲ ಗಿರಿಜಾ |
ಕಾಂತನುದರದಿ ಜೀರ್ಣನಾಗದೆ ಬದುಕಿ ಬಂದವನು ||
ಕ್ಷಾಂತಗೊಳಿಸು ಮಹೋಗ್ರಯೋಗಿಯ |
ಶಾಂತನಹ ಸಂಬಂಧವೊಂದೇ |
ಸಾಂತ್ವನಕ್ಕಿಹ ಮಾರ್ಗ ಕುಟಿಲಕೆ ಸಿಕ್ಕನಾ ಕವಿಯು || 1 || 261 ||

**ಕೇದಾರಗೌಳ - ಝಂಪೆ**
ಸುರರ ನೆರಳಿಗು ಕ್ರೋಧವ | ತಾಳ್ವನವ |
ಕರಗುವನೆ ಭೃಗುಸಂಭವ ||
ತರಳೆಯೋರ್ವಳೆ ಜಯಂತಿ | ಸಂಬಂಧ |
ಕಿರುವ ದಾರಿಯದೇಂ ಗತಿ || 1 ||
ಅಪರಿಮಿತ ದೇಹದುರಿಯ | ಸಹಿಸುತಲಿ |
ತಪಿಪನ್ಯೆ ಮರುತರೊಡೆಯ ||
ಸಫಲನಹೆ ಸುತೆಯ ಕಳುಹು | ಸೇವೆಯಲಿ |
ತಪಸಿ ಸಾಂತ್ವನವಗೊಳುಗು || 2 || 263 ||

**ಕಂದ**
ಸುರಪಾಲಂ ಚಿಂತಾಬುಧಿ |
ಗೆರವಾದಂ ತನ್ನ ಕುವರಿಯ ಸುಖದ ದಿವಮಂ ||
ಕರಕಲುಗೈವುದೆ ದಿವಕೆಂ |
ದುರಿಸಲೆ ಸುಮನಸರಿಗಾಗಿ ಸುಮಮಾನಸಳಂ || 1 || 264 ||

**ಭೈರವಿ - ತ್ರಿವುಡೆ**
ಮದನನೆತ್ತಿದ ಹೆದೆಯ ಹೂವೆನೆ |
ಮೃದುಮದಾಲಸಯಾನೆಯು |
ವಿಧಿಯ ಚಳಕದ ಸೃಷ್ಟಿ ಸುಂದರಿ |
ಮಧುಮಧುರೆಯು ಜಯಂತಿಯು ||
ಚದುರೆ ಸುಶ್ರುತಗಾನೆ ಸುಕಲಾ |
ವಿದೆ ಸುರೇಂದ್ರಕುಮಾರಿಯು |
ಮಧುರಭಾಷಿಣಿ ಬಂದು ತಂದೆಯ |
ಪದಯುಗಕ್ಕಭಿನಮಿಸಿ ನಿಂದಳು || 1 || 265 ||

**ಕೇದಾರಗೌಳ - ಅಷ್ಟ**
ಎಂದಿನಂದವಿದಲ್ಲ | ಕುಂದಿದಾನನವೇನೋ |
ಬಂದ ಚಿಂತೆಯ ಸಾರ್ವುದು ||
ವೃಂದಾರಕೇಶ ಪು | ರಂದರಗೇಂ ಕ್ಲೇಶ |
ನಂದನೆಗರುಹು ತಂದೆ || 1 ||
ಲೋಕಪಾಲಕನಾಗಿ | ವ್ಯಾಕುಲ ಸಹಜವು |
ಏಕಾ ಚಿಂತೆಯು ಮಗಳೆ ||
ಭೀಕರವೀ ಲೋಕ | ನೀ ಸುಕುಮಾರಿಯು |
ನಾಕವಲ್ಲವು ಸರ್ವವು || 2 || 267 ||

**ಸಾವೇರಿ - ಆದಿ**
ಐವರೊಳೊರೆದ ದುಃಖ | ದುಃಖವದಲ್ಲ |
ನೀವೆ ಪೇಳ್ವಿರಿ ಜನಕ ||
ಆವ ಭಾವವೊ ಕುದಿದು | ಉಕ್ಕುತಲಿದೆ |
ದೇವರೊಡೆಯ ಪೇಳ್ವುದು || 1 ||
ಉಶನನದ್ಭುತ ತಪಕೆ | ಬೇಯಲು ಲೋಕ |
ಧಿಷಣ ಪೇಳಿದ ಪಾಯಕೆ ||
ವ್ಯಸನಗೊಂಡಿಹೆ ಮಗಳೆ | ಬಾಂಧವ್ಯದಿಂ |
ವಶನಹನೆಂದು ಪೇಳೆ || 2 || 269 ||

**ಸಾವೇರಿ - ರೂಪಕ (ಅತೀತಾಕ್ಷರ ರೂಪಕ)**
ಏ | ಕಿಂತು ಭ್ರಾಂತಿಯಾಂತೆ ಮನವ | ಶಾಂತಗೊಳಿಪುದು ||
ಸಂತವಿಸುವೆ ಭೃಗುಜನನ್ನು ಚಿಂತೆ ಬಿಡುವುದು || ಏ | ಕಿಂತು || 1 ||
ಕಾಂ | ತಾರಕೈದಿ ಸೇವೆಗೈದ | ಪಾರ ಮಹಿಮನ ||
ಸೇರಿ ವರಿಸಲೊಪ್ಪಿಸುವುದೆ | ದಾರಿಯೆಂಬೆ ನಾ || ಏ | ಕಿಂತು || 2 || 271 ||

**ಶಂಕರಾಭರಣ - ತ್ರಿವುಡೆ (ಪ್ರಭೇದ)**
ಉರಿವ ಸೂರ್ಯಂಗೆದುರೆ ಸರಸಿಜ |
ಪರಮನವ ನೀನೆಂತು ಮೆಚ್ಚಿಪೆ |
ತರಳೆ ಸ್ವರ್ಗಕ್ಕಾಗಿ ಬಲಿ ನೀ |
ನರಿಯೆ ಶುಕ್ರನಸಾಧ್ಯನು || ಬೇಡ ಮಗಳೆ || 1 ||
ಉರಿವ ಸೂರ್ಯನೆ ಸರಸಿಜಕೆ ಸಖ |
ಪರಮನವು ನನಗಿಲ್ಲ ಮೆಚ್ಚಿಪೆ |
ತೆರಳಿ ಸ್ವರ್ಗಕ್ಕಹೆನು ಬಲ ನೀ |
ಪರಸಿ ಕಳುಹೆಂದೆರಗುತ || ಒಪ್ಪಿಸಿದಳು || 2 ||
ಎನ್ನವರು ಸುಖದಿಂದ ಬಾಳಲಿ |
ಎನ್ನ ಲೋಕಕ್ಕಿರಲಿ ಸಂತಸ |
ವೆನ್ನುತಲಿ ಪೊರಮಟ್ಟಳಾ ಸಂ |
ಪನ್ನೆ ಮಾತೆಗೆ ನಮಿಸುತ || ಹರಕೆಯಾಂತು || 3 || 274 ||

**ಧನ್ಯಾಸಿ - ಅಷ್ಟ**
ಇಳಿದಳೂ | ಭೂಮಿ | ಗಿಳಿದಳು || ಪ ||
ಭುವನಮೋಹಕರೂಪಿನತಿವಿಲಾಸವ ತಾಳಿ |
ಯುವತಿ ಜಯಂತಿಯೈತಂದಳು ||
ಸ್ವರ್ಗ | ಭುವಿಯತ್ತ ನಡೆದು ಬಂತೆಂಬೊಲು ||
ದೇವ | ನಿವಹಕ್ಕೆ ಕೈ ಬೀಸುತಿಳಿದsಳು |
ಮತ್ರ್ಯ | ದವರೆಲ್ಲ ಬೆರಗಾಗಿ ನೋಡsಲು ||
ಹಿಮಗಿರಿ ಸಾನು | ಸೇರುತಲಿ ತಾನು |
ಆಶ್ರ | ಮವ ಕಂಡು ಬೆರಗಾಗಿ ನಿಂದsಳು ||
ಯೋಗಿ | ನಿವಹಾಧಿಪಗೆ ಕಯ್ಯ ಮುಗಿದsಳು || ಇಳಿದಳು || 1 || 275 ||

**ಸೌರಾಷ್ಟ್ರ - ತ್ರಿವುಡೆ**
ಕಂಡಳಾಖಂಡಲತನೂಭವೆ |
ಚಂಡಕಿರಣನ ತೆರದಿ ಜ್ವಲಿಸುತ |
ಖಂಡಪರಶುವಖಂಡ ತಪದೊಳು | ಮಂಡಿಸಿಹುದ || 1 ||
ಕ್ಷೀಣಗೊಂಡಿಹನುರಿದು ಕರಟಿಹ |
ತ್ರಾಣವಿಲ್ಲವು ತಪದ ಭರದಲಿ |
ಕಾಣನಾ ಮುನಿ ಕಾಯಕಷ್ಟವ | ಧ್ಯಾನದಲ್ಲಿ || 2 || 277 ||

**ಆಹೇರಿ - ಏಕ**
ಪರಿ ಪರಿಯಿಂದುಪಚರಿಸಿದಳಾ ತಪ |
ಚರಿತನ ಮಾನಿನಿಯು || ವ್ರಣದಿಂ |
ಬಿರಿದಿಹ ತ್ವಚೆಯಂ ತೊಳೆಯುತ ಸಲಿಲದಿ |
ಪರಿಶುದ್ಧಾನನೆಯು || ಮೂಲಿಕೆ |
ಯರಸುತ ಲೇಪಿಸಿ | ಗರಿಯಿಂ ಬೀಸುತ |
ಉರಿಯಂ ತಣಿಸುತ | ಮನದಲಿ ಮೆಚ್ಚುತ || ಪರಿ ಪರಿ || 1 ||
ಓರಣಗೊಂಡಾಶ್ರಮದೊಳು ಸುಂದರ |
ದಾರವ ಬೆಳೆಸಿದಳು || ಉಣಿಸುತ |
ನೀರನು, ಗಿಡಬಳ್ಳಿಗಳಂ ಬೆಳೆಸುತ |
ಲೋರಂತಿರಿಸಿದಳು || ವನತಂ |
ಪೇರಲು, ತಪದುರಿ- | ಯಾರಲು ಧರೆಯು |
ಬ್ಬೇರಲು ಮೃಗಪ | ಕ್ಷಿಗಳೊಗ್ಗೂಡಲು || ಪರಿ ಪರಿ || 2 || 279 ||

**ಭಾಮಿನಿ**
ಕಾಂತೆಯಿಂದದೊಳಿಂತು ತಪ ವಿ |
ಶ್ರಾಂತಮನ ಮುನಿಪತಿಯ ಸೇವಿಸಿ |
ಸಂತಸದಿ ಕಾಂತಾರವನೆ ಪ್ರತಿಸ್ವರ್ಗಮಂ ಗೆಯ್ಯೆ ||
ಕಾಂತನಹನೇ ಶಂಭುವೆಂಬೀ |
ಕಾಂತಚಿತ್ತನ ದೃಢಕೆ ಗೌರೀ |
ಕಾಂತ ಮೆಯ್ದೋರಿದನು ಬಹುವತ್ಸರ ತಪಃಫಲಕೆ || 1 || 280 ||

**ಸುರುಟಿ - ಆದಿ**
ಖ್ಯಾತಿಜ ಮೆಚ್ಚಿದೆನು | ಸಿದ್ಧಿಯ |
ರೀತಿಗೆ ಹೆಚ್ಚಿದೆನು ||
ಏತರದಿಚ್ಛೆಯನು | ಸಲಿಸಲು |
ಕಾತರನಾಗಿಹೆನು || 1 || 281 ||

**ನವರೋಜು - ಆದಿ**
ನೋಡಿದನಾ ಕ್ಷಣ ಶಿವನ | ಒಳ |
ಗಾಡಿದ ಭಾಳೇಕ್ಷಣನ ||
ಹೂಡುತ ರೂಢಿಯೊಳ್ಮನುವ | ಕೊಂ |
ಡಾಡಿದ ಬೇಡಿದ ವಿಭುವ || 1 ||
ಮೃತ್ಯುವ ಜೈಸುವ ಸಿದ್ಧಿ | ನೀ |
ಡುತ್ತಲಿ ಚೋದಿಸು ಬುದ್ಧಿ ||
ದೈತ್ಯೋದ್ಧಾರಕೆ ತಪವ | ನಿ |
ಸ್ವಾರ್ಥದಿ ಗೈದಿಹೆನಭವ || 2 || 283 ||

**ವಾರ್ಧಕ**
ಮಗನಾದೆ ಪೂರ್ವದಲಿ ಶುಕ್ರರೂಪದೊಳೊಗೆದು |
ಭೃಗುಮುನೀಶ್ವರಗೆಣೆಯ ಸಿದ್ಧಿಯಂ ಸಾಧಿಸಿದೆ |
ಮಿಗಿಲಾದೆ ದೇವತೆಗಳೆಲ್ಲರಿಂ ಜ್ಞಾನಬಲ ತಪತೇಜ ಸಿದ್ಧಿಗಳಲಿ ||
ವಿಗಡ ನಿನಗೀವೆ ಮೃತಸಂಜೀವಿನೀಮಂತ್ರ |
ಜಗವಿಜೇತನು ನೀನವಧ್ಯನೆನ್ನೊಳಗಿರುವ |
ಅಗಣಿತ ಮಹಾಶಕ್ತಿಗಳ ಪ್ರಜಾಪಾಲಕತ್ವವನಿತ್ತೆನೆಂದೆತ್ತಿದ || 1 || 284 ||

**ಜಂಜೂಟಿ - ಅಷ್ಟ**
ಹೊಂದಿದೆ ಧನ್ಯತೆ ವಿಭುವೆ | ನೀಡ |
ಲೆಂದು ಸಂಜೀವಿನಿ ಪ್ರಭುವೆ ||
ಕುಂದಿಲ್ಲದಂತೆನ್ನ ಶಿಷ್ಯವರ್ಗವ ಸುರ |
ವೃಂದದಿಂದುನ್ನತಿಯ ಸಾಧಿಸು |
ವಂದದಲಿ ಬೆಳೆವಂತೆ ಶ್ರಮಿಸುವೆ || 1 ||
ನಿನ್ನ ಸಾಧನೆಯ ಮಂತ್ರವಿದು | ಪರ |
ರನ್ನು ಹೊಂದಲು ಲೋಪವಹುದು ||
ಪುಣ್ಯಕಾರ್ಯಕ್ಕಾಗಿ ಬಳಸಿಕೊಳ್ಳೆಂದು ಪ್ರ |
ಸನ್ನಮಾನಸ ಬೀಜಮಂತ್ರವ |
ಕರ್ಣದಲಿ ಬೋಧಿಸುತ ಹರಸಿದ || 2 || 286 ||

**ಸುರುಟಿ - ಏಕ**
ಹರನು ಹರಸಿ ತೆರಳೆ | ಮುನಿಮನ |
ಪರಿಸರದಿಂದರಳೆ ||
ಬೆರಗಾದನು ತಪ | ದುರಿಯಂ ಸಹಿಸುತ |
ತರುಲತೆಗಳು ತಂ | ಪೆರೆಯುತ ಮೆರೆದಿರೆ || 1 ||
ಸುಂದರಪುಷ್ಕರಿಣಿ | ದಡದೊಳು |
ಮಿಂದಂತಿದೆ ತರುಣಿ ||
ಬಂಧಿಸಿದವರಾರ್ | ಬಳ್ಳಿಯ ಭೂಜಕೆ |
ಬಂದುವದೆಲ್ಲಿಂ | ಮಂದೆ ಹರಿಣಗಳು || 2 ||
ಬಳ್ಳಿಮಾಡ ನೋಡಿ | ರಮಿಸಿರ |
ಲಲ್ಲಿ ಪಕ್ಕಿ ಜೋಡಿ ||
ಎಲ್ಲಿಂದಲೊ ನೂ | ಪುರದ ನಿನಾದವು |
ಸೊಲ್ಲಿಸಿದಂತಿದೆ ಮೃದುಮಧುಗಾನವು || 3 || 289 ||

**ಕೇದಾರಗೌಳ - ಅಷ್ಟ**
ವನದ ಸೌಂದರ್ಯವ | ಮುನಿಪನೀಕ್ಷಿಸಿ ಬರೆ |
ಮನದಿ ಸಂಶಯಭಯವ ||
ವನಿತೆಯಾಂತಳು ಬಂದು | ಮಣಿದು ನಿಂದಿಹ ಲಜ್ಜಾ |
ನನೆಗೆಂದ ಬೆರಗಾಗುತ || 1 || 290 ||

**ಸೌರಾಷ್ಟ್ರ - ತ್ರಿವುಡೆ**
ಯಾರು ನೀ ಕಲ್ಯಾಣಿ ಸೊಬಗಿಂ |
ದಾರವೆಯ ಮಧ್ಯದಲಿ ವಿಹರಿಪೆ |
ನೀರೆಯೋರ್ವಳೆ ನಿರ್ಜನದ ಕಾಂ | ತಾರದೊಳಗೆ || 1 || 291 ||

**ಕೇದಾರಗೌಳ - ಅಷ್ಟ**
ವಂದಿಪೆನಿಂದ್ರನಂ | ದನೆ ಜಯಂತಿಯು ನಾನು |
ಬಂದೆನೇಕಾಂಗಿನಿಯು ||
ಬೆಂದಿತ್ತು ತವತಪ | ದಿಂದಲೀ ಪರಿಸರ |
ನೊಂದೆ ನದಕೆ ನಿಂದೆನು || 1 || 292 ||

**ಸೌರಾಷ್ಟ್ರ - ತ್ರಿವುಡೆ**
ಬೆಂದ ಪ್ರಕೃತಿಗೆ ಜೀವವಿತ್ತೆಯ |
ಹೊಂದೆ ಗಾಯವ ಕಾಯಲೇಪನ |
ದಿಂದ ಶಮನವ ಗೈದರಾರ್ ಪೇಳ್ | ಸುಂದರಾಂಗಿ || 1 ||
ಒಡೆದ ಚರ್ಮಕೆ ಗಿಡದ ಮೂಲಿಕೆ |
ಬಿಡವರೆದು ತೊಡೆಯುತ್ತಲಿರ್ದೆನು |
ಸುಡುವ ನೆಲಕಾಂ ಹಸಿರು ಹೊದಿಕೆಯ | ಉಡುಗೆ ತೊಡಿಸಿ || 2 || 294 ||

**ಯಮನ್ಕಲ್ಯಾಣಿ - ಅಷ್ಟ**
ಚದುರೆ ಚೋದ್ಯವನಾಂತೆ ಲಲಿತಾಂಗಿ | ಭೂವಿ |
ಬುಧ ನಾನು ತಪವಾಂತೆ ಶಿವಗಾಗಿ ||
ಅಧಿಕಪ್ರೀತಿಯು ದಾನವರ ಮೇಲೆ | ಈ ತ್ಯಾ |
ಗದ ಸೇವೆ ನಿನಗೇಕೆ ಸುರಬಾಲೆ || 1 ||
ಆರ ಪ್ರೀತಿಯ ಬಂಧವಿರಲೇನು | ಬಂದೆ |
ನಾರಿಯಾಗಿಯೆ ಸೇವೆಗೆನುತಾನು ||
ಗೌರೀಶನೊಲಿದಗೆಲ್ಲಿದೆ ಭೇದ | ಸ್ವಾಮಿ |
ಸೇರಿದೆನು ನಿನ್ನಯ ಶ್ರೀಪಾದ || 2 || 296 ||

**ಭಾಮಿನಿ**
ಮಾನಿನಿಯು ಮತಿವಂತಳೆನುತಲಿ |
ಮೌನಿವರ ಯೋಚಿಸಿದನಿವಳನು |
ಮಾನಕರ್ಹಳೆಯಲ್ಲ ಮುಂದಭ್ಯುದಯವಹುದಹುದು ||
ಜಾಣೆ ನೀನೆನಗಾಗಿ ಗೈದುದ |
ಕೇನ ನೀಡಲಿ ಪೇಳೆ ಪೇಳೆ |
ನ್ನಾಣೆ ನಾಚದೆ ನಿನ್ನಭೀಷ್ಟವನೀವೆ ಜಯವಂತೆ || 1 || 297 ||

**ಸಾಂಗತ್ಯ - ರೂಪಕ**
ಭಾರದ ಲಜ್ಜೆಯಿಂ ಬಾಗಿದಳಂಗನೆ |
ಓರೆನೋಟವ ಬೀರಿ ನೆಲವ ||
ಗೀರಲು ಬೆರಳಿಂದ ಮಾತಿಗೆ ಮೀರಿದ |
ನೂರು ಭಾವವ ಕಣ್ಣೋಳ್ ಕಂಡ || 1 ||
ಬಾ ಭಾಮಿನಿಯೆ ನಿನ್ನ ಭಾವ ನಾನರಿತೆ ಮ |
ತ್ತೇಭಗಾಮಿನಿ ನಿನ್ನ ವರಿಪೆ ||
ಶೋಭನಾಂಗಿಯೆ ಭೋಗ ಭುವನವು ನಿನ್ನದು |
ಈ ಭೂಮಿಯೊಳಗೆಂತು ಕೃಷಿಯು || 2 ||
ಸುತ್ರಾಮಸುತೆ ನಾನು ದೈತ್ಯಗುರುವು ನೀನು |
ಇತ್ತಂಡಕಿಹುದು ವೈಷಮ್ಯ ||
ನಿತ್ಯದ ಸುಖಕೆ ವಿಘ್ನವು ಬಾರದಂತೆಯ |
ತ್ಯಂತ ರಹಸ್ಯದಿ ಕೂಡು || 3 || 300 ||

**ಕಂದ**
ಗೇಹಕೆ ಬಂದಿರಲವರ ವಿ |
ವಾಹವು ಗಾಂಧರ್ವರೀತಿಯೊಳ್ ನಡೆದಿರಲುಂ ||
ಮೋಹಕೆ ಹಗಲಿರುಳಿರದೆನೆ |
ನೇಹದೊಳಾ ಜೋಡಿ ದೇಹವೊಂದಾಗಿತ್ತುಂ || 1 || 301 ||

**ವಾರ್ಧಕ**
ತರುಣಿಯೊಡನಿಂತು ಲೋಕವ ಮರೆತು ಶುಕ್ರನಿರೆ |
ದುರುಳತನಮಂ ಬಿಟ್ಟು ದೈತ್ಯರಾತ್ಮೋನ್ನತಿಗೆ |
ನಿರತರಾದರು ಯಜ್ಞ ಯಾಗ ಜಪ ತಪಗಳಲಿ ಗುರು ಬರುವುದಂ ಕಾಯುತ ||
ಕುರುಜಾಂಗಲವನಾಳ್ವ ವೃಷಪರ್ವನೆಂಬವನ |
ಪಿರಿತನದಿ ಬಹುದೈತ್ಯರೊಗ್ಗೂಡೆ ಪ್ರಹ್ಲಾದ |
ತರಳನಾದ ವಿರೋಚನನಗೆ ರಾಜ್ಯವನ್ನಿತ್ತು ಹರಿಯ ಧ್ಯಾನಿಸುತಿರ್ದನು || 1 || 302 ||

***ಸಂಧಿ 5 : ಹರಿಚಾರ್ವಾಕ***

**ಶಂಕರಾಭರಣ - ಏಕ (ಭೋಗಷಟ್ಪದಿ)**
ಸುರಪ ಕ್ಷೀರಶರಧಿಗೈದಿ |
ಹರಿಯ ಪಾದಕೆರಗಿ ಪೇಳ್ದ |
ಪರಮಪುರುಷ ಪೊರೆವುದೀಗ | ಸ್ವರದ ಬಲವನು ||
ಬರಿಯ ದೇಹಬಲದಿ ಮೆರೆವ |
ದುರುಳರುಗಳು ಸಾಧಿಸುವರು |
ಗುರುವು ಮಂತ್ರಸಿದ್ಧನಾದ | ತರಳೆ ತಡೆದಳು || 1 ||
ಇನ್ನು ತಡೆಯೆ ಮೂರುಲೋಕ |
ವನ್ನು ಗೆಲುವರವರು ಹರಿಯೆ |
ಪುಣ್ಯಪುರುಷಗತಿಯು ನೀನು | ಪನ್ನಗಾಸನ ||
ನಿನ್ನ ಚಿಂತೆಯನ್ನು ಬಿಡು ಬಿ |
ಡೆನ್ನುತಭಯವಿತ್ತು ಹರಿಯು |
ಮುನ್ನ ಮುನಿಯ ಶಾಪ ಮುಗಿಯ | ಲೆನ್ನುತೆದ್ದನು || 2 || 304 ||

**ಭಾಮಿನಿ**
ಎಲ್ಲಿ ಜಪತಪವೆಲ್ಲಿ ದನುಜರಿ |
ದೆಲ್ಲ ಶುಕ್ರನ ನೀತಿ ಮರಣವ |
ಗೆಲ್ಲಬಲ್ಲ ಸುಮಂತ್ರ ಸೇರಲು ನುಂಗುವರು ಜಗವ ||
ಖುಲ್ಲರನು ಸೆಳೆದಾಮಿಷದ ಮಡು |
ವಲ್ಲಿ ಕೆಡಹುವೆನೆನುತ ಲಕ್ಷ್ಮೀ |
ವಲ್ಲಭನು ತಾಳಿದನು ಯೋಗದಿ ಮೋಹನಾಕೃತಿಯ || 1 || 305 ||

**ನವರೋಜು - ಆದಿ (ಬಂದನು ದೇವರದೇವ - ರೀತಿ)**
ಬಂದನು ಮಾಯಾ ಮೋಹ | ಬಹು |
ಸುಂದರ ಕಾಂತಿಯ ದೇಹ ||
ಮಂದಸ್ಮಿತಾನನ | ದಿಂದೊಪ್ಪಿ ಬುಧಜನ |
ವೃಂದವಂದಿತ ಬಂದ | ಕಂದರ್ಪಪಿತ ಬಂದ || ಬಂದನು || 1 ||
ಆಶಾಪಾಽಶದಿ ಜಗವ | ಪಿಡಿ |
ದಾಸುರ ಶಕ್ತಿಯ ಕಡೆವ ||
ಶ್ರೀಶಽ ರಚಿಸಿ ಭೋಗ | ಮೋಸ ಮದಿರೆ ರೋಗ |
ಕ್ಲೇಶ ಮದವು ವಿಷ | ಯಾಸಕ್ತಿ ಕೆರಳಿಸಿ || ಬಂದನು || 2 || 307 ||

**ಝಿಲ್ಲಾನಿ - ಅಷ್ಟ**
ಏನಿದದ್ಭುತ ಋಷ್ಯಾಶ್ರಮವು | ಬಕ |
ಧ್ಯಾನ ಕೋವಿದರೆಲ್ಲ ಸೇರಲಾಶ್ರಯವು || ಪ ||
ಬಿಟ್ಟರು ಕೆಲರು ಪರಾನ್ನ | ಮಾಂಸ |
ಮುಟ್ಟರು ಗುಟ್ಟಲಿ ನಡೆಯುವುದಣ್ಣ ||
ಕಟ್ಟಿ ಜಟೆಯ ಭಸ್ಮ ಬಳಿದು | ನಿಂದ |
ರುಟ್ಟು ವಲ್ಕಲ ಮೂಗಿಗಿಟ್ಟು ಕೈಬೆರಳು || ಏನೀ || 1 ||

ಇವರೊಳಗೋರ್ವ ಬೃಶುಂಡಿ | ಸಂಸಾ |
ರವ ಬಿಟ್ಟು ಕುಟೀಚರನೆಂಬ ನಿರ್ದಂಡೀ ||
ಶಿವನಾಪ್ತನಾನೆ ಪರಮಹಂಸ | ಭೂಮಿ |
ಗವತರಿಸಿದ ಪರಿವ್ರಾಜಕ ಹಂಸ || ಏನಿ || 2 ||
ಹಣೆಯೊಳು ಶೋಭಿಪ ಭಸ್ಮವೇಂ | ಬಾಯೊಳ್ |
ಮಣ ಮಣ ಮಂತ್ರವು ಕ್ಷಣಕೊಂದು ಓಂ ಓಂ ||
ಕುಣಿವ ತಾಳಕ್ಕಿಲ್ಲ ತಂತಿ | ತನ್ನ |
ಗಣವ ಕೂಡಿಸಿಕೊಂಡ ವೇದಾಂತ ಭ್ರಾಂತಿ || ಏನಿ || 3 || 310 ||

**ಸಾಂಗತ್ಯ - ರೂಪಕ**
ಅಲ್ಲಿಗೈತಂದನಾ ಮಾಯಾಮೋಹನ ಹೋಮ |
ದಲ್ಲಿಯಾಜ್ಯವ ಚೆಲ್ಲಿ ನಲಿದು ||
ಗುಲ್ಲೆಬ್ಬಿಸುವ ಡಾಂಭಿಕರ ಕಂಡು ನುಡಿದನು |
ಇಲ್ಲೇಂ ಕಾರ್ಯವು ನೀವಾರೆಂದು || 1 ||
ಯಾಗದೀಕ್ಷಿತರು ನಾವ್ ಯೋಗಸಾಧಕರು ನಾವ್ |
ಭೋಗವರ್ಜಿತರು ನಾವೆಂದು ||
ಆ ಗುಲ್ಲಿನೊಳಗಿಂದಲೆದ್ದು ಬೃಶುಂಡಿಯು |
ಯೋಗಿಯ ಭಂಗಿಯೊಳ್ನಿಂದು || 2 ||
ನಾವಿಲ್ಲಿಯಾತ್ಮೋನ್ನತಿಗೆ ಹೇತುವಾದಂಥ |
ದೇವಕಾರ್ಯದಿ ನಿಂದಂಥವರು |
ಸಾವುಹುಟ್ಟುಗಳ ದಂದುಗ ಮೀರಿ ದಿವಕೇರ್ವ |
ಠಾವ ಚಿಂತಿಪರು ನೀವಾರು || 3 || 313 ||

**ಮಿಶ್ರತೋಡಿ - ಅಷ್ಟ**
ನಸುನಗುತೆಂದನು ಹರಿಯು | ನೀವೀ |
ದೆಸೆಗೆ ಸಂದಿರುವುದಚ್ಚರಿಯು ||
ಹೊಸಮಾತ ಕಲಿತ ನಾಲಗೆಯು | ತೊದ |
ಲಿಸುವಂತೆ ತೋರ್ಪುದು ನುಡಿಯು || ಸ್ವರ್ಗ |
ವೆಸೆವುದದಾವೆಡೆ | ಕುಶಲವೆ ಸೇರ್ದಡೆ |
ಉಸಿರಿದರಾರ್ನೀವೀ | ರಸೆಗೊಡೆಯನ ತೋರಿ || 1 || 314 ||

**ಆರ್ಯಸವಾಯಿ - ಏಕ**
ಗುರುವರನೊರೆದಿಹ | ತೆರದೊಳಗಾತ್ಮನ |
ಪರಮಚರಮಪದಕೇರಿಪೆವು ||
ದೊರೆ ವೃಷಪರ್ವನು | ಕುರುಜಾಂಗಲ ಪತಿ |
ದರುಶನಭಾಗ್ಯವು ದುರ್ಲಭವು || 1 ||
ಮಂತ್ರಕೆ ಮಾವಿನ ಕಾಯನ್ನುದುರಿಪ |
ತಂತ್ರವ ಬೋಧಿಪನೇಂ ಗುರುವು ||
ಎಂತಿರ್ಪನೊ ದೊರೆ ಕಾಣುವೆ ತೋರಿ ಸ್ವ |
ತಂತ್ರನೊ ನಿಮ್ಮಂತಿರುವವನೊ || 2 || 316 ||

(ನಿರ್ಗಮನ-ವೃಷಪರ್ವನಲ್ಲಿಗೆ)

***ವೃಷಪರ್ವನ ಓಲಗ :***

**ಕಾಂಬೋಧಿ - ಝಂಪೆ**
ಅನಿಮಿಷಾರಿಗಳೆರೆಯ ಮುನಿ ಕಶ್ಯಪನ ತರಳ |
ದನುಕುಮಾರಕನು ವೃಷಪರ್ವ ||
ಅನುಜರಾತಗೆ ಕೇತುಮಂತ ಸ್ವರ್ಭಾನು ಶರ |
ಭನು ಶಲಭ ದುರ್ಜಯ ನಿಕುಂಭ || 1 ||
ಕುರುಜಾಂಗಲವನಾಳಿ ದನುಜಯುವಕರ ಠೋಳಿ |
ವೆರಸಿ ಸಂಭ್ರಮದಿಂದ ಮೆರೆಯೆ ||
ಗುರು ಶುಕ್ರರಾಗಮನವಂ ಕಾಯ್ದು ನಿಯಮವ |
ನ್ನರೆ ಮನರು ಪಾಲಿಸುತಲಿಹರು || 2 || 318 ||

(ಮಾಯಾಮೋಹನನ ಆಗಮನ)

**ಕೇದಾರಗೌಳ - ಅಷ್ಟ**
ನೋಡಿದನಿವನ ಸ | ಮ್ಮೂಢನಾದನು ದೈತ್ಯ |
ಗರ್ಗಾಡಿ ಸ್ವಾಗತಿಸಿದನು ||
ರೂಢಿಯೊಳ್ ಕಾಣದ | ತೇಜೋರೂಪನ ದಿವ್ಯ |
ಗಾಡಿಗೆ ಬೆರಗಾದನು || 1 ||
ಕಮನೀಯರೂಪ ನೀ | ನೆಮಗತಿಥಿಯು ನಿನ್ನಾ |
ಗಮನದಿಂ ಧನ್ಯರಾವು ||
ಸಮನಿಸಿತೇಂ ಕಾರ್ಯ | ವೆಮಗೇಂ ಕರ್ತವ್ಯವು |
ಗಮನವಾವೆಡೆಗೆಂದನು || 2 || 320 ||

**ಆರಭಿ - ರೂಪಕ**
ದೈತ್ಯಮೌಳಿ ಕೇಳಿಬಂದೆ ನಿಮ್ಮ ವಾರ್ತೆಯ | ತಮ್ಮ |
ಧೂರ್ತತನವ ಬಿತ್ತಿ ಬೆಳೆಸಿ ಕೆಡಿಸಿ ಸ್ವಾರ್ಥವ |
ಪೂರ್ತಿಗೊಳಿಸಿಕೊಂಬರಿಂಗೆ ದನುಜಸಂಕುಲ | ಬುದ್ಧಿ |
ಯೊತ್ತೆಯಿಟ್ಟ ರೀತಿಗಾಯಿತೆನಗೆ ವ್ಯಾಕುಲ || ದೈತ್ಯ ಮೌಳಿ || 1 ||
ಮಕುಟ ಧರಿಸಿ ಮೆರೆವ ಶಿರಕೆ ಜಟೆಯು ಶೋಭೆಯೆ | ಸತ್ವ |
ಪ್ರಕಟಗೊಳುವ ಕೈದುಗೈಗೆ ಜಪದ ಮಾಲೆಯೆ ||
ಸುಖಸುರಾಗಭೋಗಕೇಂ ವಿರಾಗಯೋಗವೆ | ಕೆಟ್ಟ |
ರಕಟ ಪುರುಷವ್ಯಾಘ್ರರಿಂಗೆ ಯಾಚಕತ್ವವೆ || ದೈತ್ಯ ಮೌಳಿ || 2 || 322 ||

**ಶಂಕರಾಭರಣ - ಆದಿ**
ಹಾದಿಯಾಗೆ ವೇದ ಮೋಕ್ಷ |
ಸಾಧಕಂಗೆ ಸಫಲವೆಂದಾ |
ರಾಧಿಸುವೆವು ನಿತ್ಯ ಸತ್ಯ | ದಾದಿ ಮೂರ್ತಿಯ || 1 || 323 ||

**ಕೇದಾರಗೌಳ - ಝಂಪೆ**
ವೇದವನು ಗಿಳಿಪಾಠವ | ಪೇಳುವಾ |
ಭೂದಿವಿಜರುಗಳಾಟವ ||
ಸಾಧನೆಯದೆಂಬ ಗುಲ್ಲು | ವ್ಯರ್ಥವಾ |
ಆದಿ ಮೂರುತಿಯೆ ಸುಳ್ಳು || 1 || 324 ||

**ಶಂಕರಾಭರಣ - ಆದಿ**
ದೇವನೊಲುಮೆಗಾಗಿ ತಪವು |
ಭಾವಶುದ್ಧ ಭಕುತಿಪಥವು |
ಜೀವ ಮುಕುತಿ ಪಡೆವ ಸ್ಥಿತಿಯು | ಆವುದೆಂಬಿರಿ || 1 || 325 ||

**ಕೇದಾರಗೌಳ - ಝಂಪೆ**
ಆತ್ಮ ಬೇರಿಲ್ಲ ನೋಡಿ | ಜಲತೇಜ |
ಮೃತ್ತಿಕೆಯು ಗಾಳಿಗೂಡಿ ||
ಮೂರ್ತಗೊಂಡುದು ದೇಹವು | ಬದುಕೊಂದೆ |
ಸತ್ಯವದರಾಚೆ ಭ್ರಮೆಯು || 1 ||
ಸುಟ್ಟ ದೇಹವು ಹುಟ್ಟುದು | ಬಹು ಕಷ್ಟ |
ಪಟ್ಟು ದಂಡಿಸೆ ಕೆಟ್ಟುದು ||
ಅಟ್ಟುಣ್ಣೆ ಸಾಲದನ್ನ | ತುಪ್ಪದೊಳು |
ಕೆಟ್ಟ ಮೇಲೇನು ಚೆನ್ನ || 2 || 327 ||

**ಭಾಮಿನಿ**
ಪಂಡಿತರ ಮಂಡಲಿಯು ಮೋಕ್ಷವ |
ಗೊಂಡರೆಂಬರ ಕಥೆಯ ಕಟ್ಟಿತು |
ಪಿಂಡವಿಕ್ಕುವರಿವರು ಸದ್ಗತಿಗೊಂಡ ಪಿತೃಗಳಿಗೆ ||
ಕಂಡರಾರೆಮ್ಮಳತೆ ಮೀರಿದ |
ಪಿಂಡುದೈವವ ಸಾಕು ಲೋಕದೊ |
ಳುಂಡು ಭೋಗದಿ ಮೆರೆಯಲದುವೇ ಸ್ವರ್ಗಸುಖವೆಂದ || 1 || 328 ||

**ಸೌರಾಷ್ಟ್ರ - ತ್ರಿವುಡೆ**
ಧರೆಯ ಸಾಧನ ಪರಕೆ ಕಾರಣ |
ತುರಗಮೇಧಾದಿಗಳ ರಚಿಸಲು |
ಪುರುಷತನಕೇಂ ಕುಂದು ಪೇಳೆಂ | ದೊರೆದ ಶರಭ || 1 ||
ಪ್ರಾಣಿವಧೆಯಂ ಗೈದು ಗಳಿಸುವ |
ತಾಣವಿಲ್ಲದ ಕರಿಯ ಬೆಕ್ಕನು |
ಕಾಣದರಸುವ ಪರಿಯು ಕತ್ತಲ | ಕೋಣೆಯೊಳಗೆ || 2 || 330 ||

**ಭೈರವಿ - ಝಂಪೆ**
ಕಾಮಿನಿಯ ಕಾಂಚನವ ಕಾಮನೆಯ ಕೈಬಿಟ್ಟು |
ರಾಮಣೀಯಕದಿಳೆಯ ಭೋಗಮಂ ಬಿಟ್ಟು ||
ಹೋಮಿಸಿದೆವೈ ವ್ಯರ್ಥವಾಯುಷ್ಯ ಸ್ವರ್ಗವನು |
ಭೂಮಿಯೊಳು ಪಡೆವ ಬಗೆ ತೋರೆಂದನರಸ || 1 || 331 ||

**ಕೇದಾರಗೌಳ - ಅಷ್ಟ - ಝಂಪೆ (ಸಮಾನ ಛಂದಸ್ಸು)**
ಬರಿದೇಕೆ ಚಿಂತಿಸುವಿರಿ | ಮದ್ಯದೊಳು |
ಸುರ | ಸಿರಿಯ ಸುಖವನುಣಿರಿ ||
ಪರಮಾತ್ಮನನ್ನುದರದಿ | ಸೇರಿಸುತ |
ಪರ | ತರದ ಸವಿಯ ಜಗದಿ || 1 || 332 ||

**ಸಾಂಗತ್ಯ - ರೂಪಕ || ಕಂದ (ಸಮಾನ ಛಂದಸ್ಸು)**
ಚದುರನು ಮೋಹವ ಬಿತ್ತಿದ | ನದು ಸಂದೋ |
ಹದೊಳು ಮಿಂ | ಚಿದುದು ಮೆಯ್ಮರೆಸಲ್ ||
ವಿಧ ವಿಧದೊರಸೆಯೊಳೊರೆಸಿದ | ಮೆದುಳಂ ಲೋ |
ಕದಲಿ ಭೋಗವೆ ಸುಖೋದ್ದೀಪಂ || 1 || 333 ||

**ವಾರ್ಧಕ**
ಮಾರಮಣನಿಂತು ಮೋಡಿಯ ಬೀಸಿ ಬೀಳ್ಕೊಳೆ ಸ |
ಮಾರಂಭಮೇರ್ಪಟ್ಟುದಲ್ಲಲ್ಲಿ ರಾಕ್ಷಸಕು |
ಮಾರರುಗಳಿಂ ಪಾನಗಾನಗೋಷ್ಠಿಗಳಾದುದತಿರೇಕ ಕುಣಿತ ಸಹಿತ ||
ಮಾರಣವ ಗೈದು ಸತ್ಕಾರ್ಯ ಸತ್ಕಲೆಗಳಂ |
ಮಾರಕರು ದೇವನಿಂದಕರಾದರಾ ಬಳಿಕ |
ಮಾರಮಾತಂ ಕೇಳರಿವರು ನಿರ್ದಂಡಿಗಳು ಲೋಕಕಂಟಕರಾದರು || 1 || 334 ||

**ಜಂಜೂಟಿ - ಅಷ್ಟ**
ಇಂದ್ರನಂದನೆಯ ಮೇಳದಲಿ | ಭೃಗು |
ನಂದನ ಸುಖದ ಕೇಳಿಯಲಿ ||
ಸಂದುದನರಿಯನು ವರ್ಷವು ದಿನವಾಗೆ |
ಕುಂದದೀಂಟುತ ಸುರತರಸ ಮಕ |
ರಂದವನು ಶೃಂಗಾರಚೈತ್ರದಿ || 1 ||
ಸೊಗದ ಸಾರದ ಸಗ್ಗವರಳೆ | ಪುಟ್ಟೆ |
ಜಗವ ರಂಜಿಪ ಮುದ್ದು ತರಳೆ ||
ಬಗೆಯ ಕಪ್ಪನು ತಿದ್ದಿ ಮುಗುಳುನಗೆಯೊಳದ್ದಿ |
ಮಗುವಿಗಿಟ್ಟರು ದೇವಯಾನಿಯು |
ಸೊಗಸಿನಿಂ ರಂಜಿಸುವ ನಾಮವ || 2 || 336 ||

**ಭಾಮಿನಿ**
ಮಗಳ ಮುದ್ದಿನ ಮೊಗ ಜಯಂತಿಯ |
ಸೊಗಸಿನುಪಚಾರಗಳ ಬಂಧನ |
ಬಿಗಿವ ಮೊದಲೇ ವ್ರತಿಪನೆಚ್ಚರಗೊಂಡು ಚಿಂತಿಸಿದ ||
ವಿಗಡಳೀ ಸುರಬಾಲೆ ಸುಖಮಂ |
ಮೊಗೆಮೊಗೆದು ನೀಡುತ ದಿವೌಕಸ |
ರುಗಳ ಮೇಲಿನ ರೋಷ ಶಮಿಸುವ ತೆರನ ಗೈದಿಹಳು || 1 || 337 ||

**ಮಾರವಿ - ಅಷ್ಟ (ಅಂಶ+ಮಾತ್ರಾಗಣ)**
ಮಾನಿನೀಮಣಿ ಕೇಳೆ ಜಯಂತಿ ||
ದಾನವರ ನಾ ಕಾಣಬೇಕಿ |
ನ್ನೇನಗೈದರೊ ಪೋಗುವೆನೆ ಸತಿ || ಪ ||
ನಿಂದು ನಿಯಮದೊಳೊಂದೇ ಮಾನಸರು |
ಹೊಂದಿ ಮಂತ್ರವನೆಂದಿಗೆ ಗುರುವು |
ಬಂದು ಸೇರುವನೆಂದು ಕಾದಿಹರು ||
ಸಂದು ಪೋದುದು ವತ್ಸರಗಳಾ |
ಕಂದರನು ನಾ ಕಾಣದುಳಿದೆನು || 1 ||
ಭಾವ ಸಂವೃತ ನಿನ್ನ ನಾ ತಡೆಯೆ |
ದೇವಪುತ್ರಿಯು ರಕ್ಕಸರರಿಯೆ |
ಆವ ಪರಿಭವ ಬರುವುದೊ ತಿಳಿಯೆ ||
ದೇವಯಾನಿಯ ಸುಖದ ಬೆಳವಿಗೆ |
ಹೇವತನವಂ ಗೈವರವದಿರು || 2 || 339 ||

**ಜಂಜೂಟಿ - ಏಕ (ಅಂಶ+ಮಾತ್ರಾಗಣ)**
ದನುಜರಿಗಾಗಿ ನಾ ತಪದಿ | ಸಾಧಿಸಿಕೊಂಡೆ |
ಘನಮಂತ್ರವನು ಗೆಲ್ವ ಮನದಿ ||
ಮನೆ ಮಡದಿಯ ಬಂ | ಧನವನು ಮೀರಿದ |
ವನು ನಾ ರಾಕ್ಷಸ ಕುಲಗುರುವಾಗಿಹೆ || 1 ||
ಬೆದರಿಕೊಂಡರೆ ರಾಕ್ಷಸರಿಗೆ | ಪೋಗುವುದು ನೀ |
ತ್ರಿದಶರೊಡೆಯನಾಳ್ವ ಪುರಿಗೆ ||
ವಿಧಿಸಂಬಂಧವ ವಿಧಿಸಿದುದೀ ತೆರ |
ಹದನವನರಿತಿಹ ತವಪಿತ ಬಲ್ಲನು || 2 || 341 ||

**ಭಾಮಿನಿ**
ಮುನಿಯ ಮಾತಿನ ಮೊನೆಯು ನಾಟಲು |
ಮನದೊಳರಿತಳು ಮಾನಿನೀಮಣಿ |
ತನಯೆ ಪತಿಯಂ ತೊರೆವ ದಿನ ತನಗೊದಗಿ ಬಂದಿಹುದು ||
ಮಣಿದು ಬೇಡಿದಳೆರೆಯ ಶಿಷ್ಯರೊ |
ಳೆನಗೆ ದ್ವೇಷವೆ? ಮೂರ್ಖರವದಿರು |
ಮುನಿಯಬೇಡೈ ಮಾನನೀಯನೆ ತೊರೆಯಬೇಡೆನ್ನ || 1 || 342 ||

**ತೋಡಿ - ಏಕ (ಬ್ರಹ್ಮಗಣ ಪ್ರಧಾನ ಛಂದಸ್ಸು)**
ನಾರಿ ನಿನ್ನನರಿಯಬಾರದಿವರು ಪೋಗು ದಿವಿಗೆ |
ನೀರೆ ನೀನು ಬೀಳಬೇಡ ವಂಶವೈರದುರಿಗೆ ||
ಕ್ರೂರತನವ ತಿದ್ದುವೆನ್ನ ಮೇಲೆ ಸಂಶಯದಲಿ |
ಓರೆಗಣ್ಣ ಬೀಳ್ಗು ಪೋಗು ಸುತೆಯ ಕೂಡಿ ಮರಳಿ || 1 ||
ನಾಕಲೋಕಕೆಂದೂ ಸೇರ್ವಳಲ್ಲ ಭೂಮಿಬಂಧ |
ಈಕೆಗಿಹುದು ತೊರೆಯಲೆಂತೇನರಿಯದಿರುವ ಕಂದ ||
ಸಾಕಬೇಕು ನೀನೇ ಸ್ವಾಮಿ ಸುತೆಯನೆಂದು ನಮಿಸಿ |
ವ್ಯಾಕುಲವನು ತಾಳ್ವಳಬಲೆ ತನ್ನ ತಾನೇ ಶಮಿಸಿ || 2 || 344 ||

**ಕೇದಾರಗೌಳ - ಝಂಪೆ || ಕೇದಾರಗೌಳ - ಅಷ್ಟ**
*(ಒಂದರೊಡನೊಂದು ಸಮೀಕೃತ)*
ಅರಿತೆನಾ ಕರುಳ ಕರೆಯ | ಕಾಂತೆ ಹೊಣೆ |
ಗುರು | ತರವು ಮುಗುದೆ ಸುತೆಯ ||
ಪೊರೆವೆನೌ ತೆರಳು ದಿವಿಗೆ | ಚಿಂತೆ ಬಿಡು |
ಸುರ | ಸಿರಿಯ ನೆನಪಿದೆನಗೆ || 1 ||
ಮಘವನಾತ್ಮಜೆ ನಮಿಸುತ | ಬಾಲಕಿಯ |
ಬಗೆ | ಬಗೆಯ ಸೊಗಸಿಗಳುತ ||
ನೆಗೆದಳಂಬರದ ಪಥದಿ | ಮೌನಿ ವರ |
ದುಗು | ಡಗಳ ತೊರೆದು ಮನದಿ || 2 || 346 ||

**ಕಂದ (ಪದ್ಯದೊಳಗೆ) || ಕೇದಾರಗೌಳ - ಅಷ್ಟ**
ನಾನಾ ರೂಪಾಂತ್ಯೆತಂ | ದೇನನು ಗೈದೀಗ |
ಕೇಣಿಸುತ್ತಿದೆ ವಿಧಿಯಾಂ ||
ಜಾಣಿಂ ಗೆಲ್ವಂ ದೇವಾ | ಧೀನನು ನಾನಾದೆ |
ನೇನಗೈದರೊ ದನುಜರ್ || 1 || 347 ||

**ಸಾಂಗತ್ಯ - ರೂಪಕ**
ನಂದನೆಸಹಿತ ಮುನೀಂದ್ರು ರಹಸ್ಯದ |
ಮಂದಿರವನು ತೊರೆಯುತ್ತ ||
ಬಂದನು ದಾನವವೃಂದದುದ್ಧಾರ ಗೈ |
ವಂದದ ಕನಸ ಕಾಣುತ್ತ || 1 ||
ಸುರೆಯ ಹೀರುತ ಲೋಕ ಮರೆತೊಲೆದಾಡುತ |
ತರುಣಿಯತರ್ೋಳ ತೆಕ್ಕೆಯಲಿ ||
ಒರಗಿಹ ವೃಷಪರ್ವನನು ಕಂಡು ಬೆರಗಾಗಿ |
ದೊರೆಯೆ ನೀನೆಂದು ಕೇಳಿದನು || 2 ||
ದೊರೆಯು ನಾನಾರಿಗು ಸುರೆಗು ಸರ್ವಸ್ವಕಿ |
ಲ್ಲೊರಗಿಹ ಸರ್ವದೈತ್ಯರಿಗು ||
ಗೊರವ ನೀನಾರಪ್ಪಣೆಯ ಕೇಳದೈತಂದೆ |
ಬರುವುದು ನಾಳೆ ಪೋಗೀಗ || 3 || 350 ||

**ದ್ವಿಜಾವಂತಿ - ಝಂಪೆ**
ಏನೆಲಾ ವೃಷಪರ್ವ ಹೀನ ನಡತೆಗಳು |
ಪಾನದುನ್ಮತ್ತರಿದನಾರು ಕಲಿಸಿದರು || ಏನೆ ||
ಸ್ನಾನ ಜಪ ತಪ ನಿಯಮವೇನಿಲ್ಲ ಮದವೇರಿ |
ಪ್ರಾಣಿಗಳ ಸ್ವಚ್ಛಂದಭೋಗದೊಳು ಮುಳುಗಿ ||
ಮಾನಾಪಮಾನಗಳ ಗೊಡವೆಯಂ ತೊರೆದಿಹಿರಿ |
ಸ್ಥಾಣುವಂ ನಿಮಗಾಗಿಯೊಲಿಸಿ ಬಂದಿಹೆನು || 1 ||
ಗುರುತು ಹತ್ತಿತೆ ನಿಮಗೆ ಗುರುಭಾರ್ಗವಂ ನಾನು |
ಸುರೆಯ ನಿಶೆ ತೊರೆದೊಮ್ಮೆ ಬರುತೀಚೆ ನೋಡಿ ||
ಹರಹರಾ ಬುದ್ಧಿಹೀನರನೆಂತು ತಿದ್ದುವುದು |
ಕರೆದೆಬ್ಬಿಸುತಲವರ ಪಿಡಿದು ನಿಲಿಸಿದನು || 2 ||
ನೀನು ಗುರು ನಾನು ಲಘು ತೇಲುವೀ ಸುಖದರಿವು |
ಜಾಣರಿಗೆ ತಿಳಿಯುವುದು ಕುಡಿ ಸ್ವಲ್ಪ ಕೊಡುವೆ ||
ಪಾನೀಯವಿದು ಜಗವ ಪಿಡಿದು ಗರಗರ ಸುತ್ತು |
ವಾನಂದ ಸವಿಯೆಂದ ವಾಲುತ ಬೃಶುಂಡಿ || 3 || 353 ||

**ಮಾರವಿ - ಏಕ || ಕೇದಾರಗೌಳ - ಅಷ್ಟ (ಸಮೀಕೃತ ಬಂಧ)**
ದಾನವವೀರರೆ ಮಾನವೆ ಕುಡಿತವು |
ಕ್ಷೀಣಿಸಿ ಕಾಯುವನು |
ಮಾನಸಲೋಕವ ತಾನುರಿಸುತ್ತಲಿ |
ಪ್ರಾಣವ ಸೆಳೆಯುವುದು || 1 || 354 ||

**ಸಾಂಗತ್ಯ - ರೂಪಕ || ಆರ್ಯಸವಾಯಿ - ಏಕ (ಸಮೀಕೃತ ಬಂಧ)**
ಮುಂದರಿದಿಹುದು ವಸುಂಧರೆ ಗುರುಗಳೆ |
ಹಿಂದಕ್ಕೇಕೆಳೆವಿರಿ ಸೆಳೆದು ||
ಎಂದಿಗು ಕಾಣದುದಂದಿಗೆ ಬಿಟ್ಟೆವು |
ಇಂದೀ ಬಾಳಲಿ ಸುಖವಿಹುದು || 1 || 355 ||

**ಮಾರವಿ - ಏಕ || ಕೇದಾರಗೌಳ - ಅಷ್ಟ (ಸಮೀಕೃತ ಬಂಧ)**
ಬುದ್ಧಿಯ ಬಲದೊಳು ಸಿದ್ಧಿಯ ಸಾಧಿಸಿ |
ತಿದ್ದುವೆನೆನ್ನುತಲಿ ||
ಹೊದ್ದಿದೆ ತಪದೊಳಗಿದ್ದು ಮಹೇಶನ |
ಬಿದ್ದಿರಿ ಭೋಗದಲಿ || 1 ||
ಎನ್ನನು ಮೀರುತ ಸ್ವೇಚ್ಛೆಯೊಳಿಹ ನಿಮ |
ಗಿನ್ನು ಜಗತ್ರಯದಿ ||
ಮನ್ನಣೆ ನಿಲ್ಲಲಿ ಸಂಪದವಳಿಯಲಿ |
ಪನ್ನತಿಕೆಯು ಕೆಡಲಿ || 2 || 357 ||

**ಸೌರಾಷ್ಟ್ರ - ತ್ರಿವುಡೆ**
ವೃತಿಪ ಶಪಿಸುತ ಪೊರಟು ಬಂದನು |
ಸುತೆ ಸಹಿತಲಾಶ್ರಮಕೆ ಮೂರ್ಖರೊ |
ಳತಿ ನಿರೀಕ್ಷೆಯನಿರಿಸಿ ಸೋತೆನೆ | ನುತಲಿ ವ್ಯಥಿಸಿ || 1 ||
ಏನ ಮಾಡಿದರೇನು ದುರ್ಬಲ |
ಮಾನಸರನುದ್ಧಾರಗೈವುದು |
ಶ್ವಾನಗಳ ಸಾಗರವ ದಾಂಟಿಪ | ಕೇಣವಾಯ್ತು || 2 ||
ಆವ ತೆರದಿಂ ಕೊರತೆ ಬರದೋಲ್ |
ದೇವಯಾನಿಯ ಪೊರೆಯುತಿರ್ದನು |
ದೇವರಾಜನ ಸುತೆಯ ನೆನಪನು | ಕೇವಣಿಸಲು || 3 || 360 ||

**ಭಾಮಿನಿ**
ಕೇಳಿದನು ಪ್ರಹ್ಲಾದ ರಕ್ಕಸ |
ತೋಳಿಗೈದವಮಾನದಿಂ ಗುರು |
ಮೇಲೆ ಶಾಪವನಿತ್ತುದರಿದೈತಂದು ಛೀಗುಟ್ಟಿ ||
ಖೂಳರೇ ಹಾಳೆಸಗಿದಿರಿ ಶಶಿ |
ಮೌಳಿ ಮಂತ್ರದ ಸಿದ್ಧ ಗುರುವನು |
ಕೂಲನಾಗದೆ ನಾಶವಪ್ಪಿರಿ ಬನ್ನಿರೆನ್ನೊಡನೆ || 1 || 361 ||

**ತುಜಾವಂತು - ಝಂಪೆ (2ನೇ ಬಗೆ - ಚೌಪದಿ ನಡೆ)**
ವಂದಿಸುತ ವೃಷಪರ್ವನನ್ನು ರಾಕ್ಷಸರ |
ವೃಂದ ಸಹ ಪಾದದಲಿ ಕೆಡಹಿ ಕೈಮುಗಿದ ||
ತಂದೆ ರಕ್ಷಿಸಿ ನಿಮ್ಮ ಕಂದರನು ಕ್ಷಮಿಸಿ |
ಮಂದಮತಿಗಳ ಕೃತ್ಯವೆಂದರಿತು ಹರಸಿ || 1 ||
ಏಕಿವರನಿಲ್ಲಿ ಕರೆತಂದೆ ಪ್ರಹ್ಲಾದ |
ಲೋಕ ಮುಂದರಿಯುತಿದೆ ನಮಿಪುದಪರಾಧ ||
ಆಕೆವಾಳರನು ರಕ್ಷಿಸಲಿಕಾನಾರು |
ಮೂಕನಾಗದಿರು ನಾ ಪೇಳ್ವುದೇನುಸಿರು || 2 || 363 ||

**ಕಾಂಬೋಧಿ - ತ್ರಿವುಡೆ**
ಗುರುವೆ ಕ್ಷಮಿಸು ರಕ್ಷಿಸು | ಗಾವಿಲರನ್ನು |
ಪೊರೆದೆಮ್ಮನುದ್ಧರಿಸು || ಪ ||
ಹರಿಯ ಧ್ಯಾನದಿ | ನಿರತನಾಗಿರ |
ಲರಿಯದಾದೆನು | ಧರೆಯ ಗೊಡವೆಯ || ಅ.ಪ ||
ಹಾದಿ ತಪ್ಪಿದರಿವರು | ತಾಪಸಧರ್ಮ |
ಸಾಧಿಸಲರಿಯದರು ||
ಸಾಧಕರು ನೀವಿಲ್ಲದಿರೆ ದು |
ರ್ಬೋಧೆಗಿತ್ತರು ಕಿವಿಯ ಜಗದಾ |
ಮೋದ ಮಾನಿನಿ ಮದ್ಯವ್ಯಸನದೊ |
ಳೈದಿದರು ದುರ್ಬಲರು ಪತನವ || 1 ||
ದಾನವ ಕುಲಗುರುವೆ | ನೀ ಮುನಿದರಿ |
ನ್ನೇನಗೈವರು ವಿಭುವೆ ||
ಜ್ಞಾನಿ ನೀ ಪತಿಕರಿಸುತೀ ಮತಿ |
ಹೀನರನ್ನುದ್ಧರಿಸದಿರಲವ |
ಸಾನ ಹೊಂದುವರೈಸೆ ಸುರರಿಂ |
ಮಾನ ಪ್ರಾಣಗಳೆಲ್ಲ ನಿಮ್ಮದು || 2 || 365 ||

**ವಾರ್ಧಕ**
ಆಗಲೇಳೆಂದಸುರಮೌಳಿಯಂ ಸಂತೈಸೆ |
ಬಾಗಿ ಬೇಡುವ ರಾಕ್ಷಸೇಂದ್ರನಂ ಮನ್ನಿಸುತ |
ಲೀ ಗುಣವನುಳಿಸಿಕೊಳದಿರೆ ಪತನಗೊಳ್ಳುವಿರಿ ಪೋಗಿ ನಾ ಬಹೆನೆಂದನು ||
ಮೇಗಣ ಸುರಾಸುರರ ಯುದ್ಧದೊಳು ಶಿಷ್ಯರ |
ನ್ನೇಗೆಯ್ಯದಂತೆ ಮೃತಸಂಜೀವಿನೀಬಲದೊ |
ಳಾ ಗರುವ ನಮುಚಿ ಮೊದಲಾದವರ ರಕ್ಷಿಸಲು ಸುರರು ಚಿಂತಿತರಾದರು || 1 || 366 ||

### *ಸಂಧಿ 6 : ಮೃತಸಂಜೀವಿನೀ*

**ಕುಸುಮಷಟ್ಪದಿ**
ಹರನ ಮಂತ್ರದ ಬಲದಿ |
ದುರುಳರನು ರಕ್ಷಿಸುವ |
ಗುರುವನೊಲಿಸುತ್ತಲದ ಪಡೆದು ಬಾರೊ ||
ತರಳ ಪೋಗೆಂದರುಹೆ |
ಹರಕೆಯಂಗೊಂಡು ಕಚ |
ಪೊರವಂಟು ನಡೆತಂದನುತ್ಸಾಹದಿ || 1 || 367 ||

**ಮಧುಮಾಧವಿ - ತ್ರಿವುಡೆ**
ದೇವವೃಂದವ ಬೀಳುಗೊಂಡನು |
ಕೋವಿದನು ಭುವಿಗಿಳಿದು ಬಂದನು |
ಭಾವದಲಿ ಗುರುಮೂರ್ತಿ ತುಂಬಿರೆ |
ತಾವನರಸುತಲುಶನನ || 1 ||
ಮಗಳ ಮಮತೆಯ ಸರಸಸೂಳ್ನುಡಿ |
ಜಗವ ಮರೆಸಿರೆ ಸಮಯ ಸಾಧಿಸಿ |
ಮುಗಿದು ಕೈ ಕಚನೆರಗುತುಸುರಿದ |
ಭೃಗುಕುಮಾರನ ಚರಣದಿ || 2 || 369 ||

**ಕಂದ**
ಪೌತ್ರನುಮಂಗಿರಸಾಖ್ಯಗೆ |
ಪುತ್ರಂ ದೇವಗುರು ಧೀಷ್ಪತಿಗೆ ನಾಮ ಕಚಂ ||
ಗೋತ್ರೋಚ್ಚಾರಪುರಸ್ಸರ |
ಛಾತ್ರನಹೆ ತಮಗಭಿವಾದಿಸುವೆ ಪತಿಕರಿಸಿಂ || 1 || 370 ||

**ಕೇದಾರಗೌಳ - ಝಂಪೆ**
ಕಂದ ಶುಭವಾಗಲೇಳು | ವಿಸ್ತರಿಸಿ |
ಬಂದ ಕಾರಣವ ಪೇಳು ||
ತಂದೆ ತೋಷದೊಳಿರುವನೆ | ಸುರಪತಿಯ |
ಮಂದಿರದಿ ಸುಖವೆ ಮಗನೆ || 1 ||
ಕುಶಲವಾಗಿಹರೆಲ್ಲರು | ವಿದ್ಯೆಯನು |
ವಿಶದವಾಗರಿತು ಬರಲು ||
ಬೆಸಸಿ ಕಳುಹಿದನು ಜನಕ | ರಕ್ಷಿಸೆಂ |
ದುಶನಗೆರಗಿದ ಬಾಲಕ || 2 ||
ಋಷಿದೇವ ವಿಸರದೊಳಗೆ | ನಿನ್ನ ಪಿತ |
ನಸಮಶಕ್ತನು ವಿದ್ಯೆಗೆ ||
ಪೆಸರಿನಿಂದನ್ವರ್ಥದ | ಗುರುವಾತ |
ಧಿಷಣನೇತಕೆ ಕಳುಹಿದ || 3 || 373 ||

**ಸುರುಟಿ - ಏಕ**
ತನ್ನಿಂ ಭಾರ್ಗವನು | ಮೇಲಿಹ |
ನೆನ್ನುತ ಕಳುಹಿದನು ||
ಉನ್ನತವಿದ್ಯಾ | ಪನ್ನರೆ ತವಪದ |
ವನ್ನಾರಾಧಿಪೆ | ನೆನ್ನನು ಪರಸಿರಿ || 1 ||
ಬಾರ್ಹಸ್ಪತಿ ನೀನು | ಅಧ್ಯಯ |
ನಾರ್ಹನು ಮೆಚ್ಚಿದೆನು ||
ಕೂರ್ಮೆಯೊಳಾಶ್ರಮ | ಧರ್ಮವ ಮೀರದೆ |
ಧೈರ್ಯದಿ ಸಾಧಿಸೆ | ಸರ್ವವ ಪಡೆಯುವೆ || 2 ||
ಬಾಲೆ ದೇವಯಾನಿ | ಆಶ್ರಮ |
ಬಾಲರ ಯಜಮಾನಿ ||
ಬಾಲಿಕೆಯಳ ನುಡಿ | ಪಾಲಿಸಿ ಸಖ್ಯದಿ |
ಲೀಲೆಯೊಳಿರ್ಪುದು | ಕಾಲವ ಮೀರದೆ || 3 || 376 ||

**ಭಾಮಿನಿ**
ದಾನವರ ಗುರುವಾಗಿ ವಿದ್ಯಾ |
ದಾನವಂ ನಾ ಗೈವೆನೆಂದರೆ |
ಜಾಣನಹ ಸತ್ಪಾತ್ರನೋರ್ವನು ದೊರಕಲಿಲ್ಲನೆಗಂ ||
ಗ್ಲಾನಿಗುತ್ತರ ಗುರುಗೆ ಪೌತ್ರನು |
ತಾನೆ ಬಂದನು ಸಮಯ ಸಾಧಿಸು |
ತಾನು ಧಿಷಣಜಗೀವೆನರಿತುದನೆಂದು ಹರ್ಷಿಸಿದ || 1 || 377 ||

**ಆರ್ಯಸವಾಯಿ - ಏಕ**
ಪಿತನಾಶ್ರಮದೊಳು | ಜೊತೆಗಾಣದೆ ಗುರು |
ಸುತೆ ನೊಂದಿರೆ ಕಚ ಬರೆ ಕಂಡು ||
ಹಿತನಿವ ತನಗೆ | ನ್ನುತ ನಲಿದಳು ಸ್ನೇ |
ಹಿತ ಬಾರೆಂದುಪಚರಿಸಿದಳು || 1 || 378 ||

**ಕಲ್ಯಾಣಿ - ರೂಪಕ**
ಧನ್ಯಳಾದೆ ದೇವಪುರುಷನೆ | ಮಹಾತ್ಮ ಗುರುವ |
ರೇಣ್ಯತರಳ ಕಚಕುಮಾರನೆ ||
ಪುಣ್ಯವಶದಿ ದೊರೆತೆ ಗೆಳೆಯ |
ಶೂನ್ಯವಾದ ಬದುಕಿನಿಳೆಯ ||
ಮಾನ್ಯ ನೀನು ಹಸನುಗೊಳಿಸು |
ತೆನ್ನ ಪಿತನ ವಿದ್ಯೆ ಗಳಿಸು || ಧನ್ಯಳಾದೆ || 1 ||
ದೇವಯಾನಿ ಗುರುವಿನಾಜ್ಞೆಯು | ಕುಮಾರಿ ಪೇಳ್ದ |
ಸೇವೆಯನ್ನು ಮಾಳ್ಪುದೆಂಬುದು ||
ಭಾವದುಂಬಿ ಗೆಳೆಯನೆಂದ |
ದೇವಿಗಾವ ಕಾರ್ಯ ಚಂದ ||
ಹೂವ ಕೊಯ್ದು ನೇಯ್ದು ತರಲೆ |
ಕೂವಕಿಳಿದು ನೀರ ತರಲೆ || ದೇವಯಾನಿ || 2 ||
ನಾನು ಬೆಳೆದ ಬಳ್ಳಿ ಮಲ್ಲಿಗೆ | ಕುಚೋದ್ಯಗೈದು |
ತಾನು ಹಬ್ಬಿ ಮರದ ಗೆಲ್ಲಿಗೆ ||
ಬಾನು ಚುಕ್ಕಿ ಮೊಗ್ಗ ಬಿಟ್ಟು |
ಏನೊ ಹೇಳುತಿಹುದು ಗುಟ್ಟು ||
ಜಾಣ ಕೊಯ್ದು ಕೊಡುವಿಯೇನು |
ಮ್ಲಾನಗೊಳ್ಳದಂತೆ ನೀನು || ಧನ್ಯಳಾದೆ || 3 || 381 ||

**ದ್ವಿಪದಿ**
ತರುಣಿಯಾಡಿದ ನುಡಿಯು ಗುರುವಾಕ್ಯವೆಂದು |
ಮರವೇರಿ ಹೂ ಕೊಯ್ದು ಕೊಡೆ ಪುಳಕಗೊಂಡು || 1 || 382 ||

**ಜಂಜೂಟಿ - ಏಕ | (ಮತ್ತೊಂದು ಬಗೆ)**
*(ಹಾ ಹಾ ಎನುತಲಿ ರುದ್ರನ ಕಂಡಳು - ಧಾಟಿ)*
ಬಾ ಬಾ ಕೆಳೆಯನೆ ವನದೊಳಗಾಡುವ |
ಬಾ ಭೂಸಗ್ಗದ ಸೊಗ ಸವಿವs ||
ಗಿರಿ | ಏರಿಳಿವ || ನದಿ |
ನೀರ್ಗಿಳಿವ || ಬಾ ಬಾ ಕೆಳೆಯನೆ || 1 || 383 ||

**ದ್ವಿಪದಿ**
ಆಟದಲಿ ಸುಖವಿಲ್ಲ ನೋಟದಲಿ ಸೊಗಸು |
ನಾಟದೆನ್ನೆದೆಯನಧ್ಯಯನಕೇ ಮನಸು || 1 || 384 ||

**ಜಂಜೂಟಿ - ಏಕ**
ಏಕಾಂಗಿಯು ನಾ ಬೇಸರ ತಡೆಯೆನು |
ನೂಕಾಟೆಗೆ ವ್ಯಾಸಂಗವನು || ಬಿಡು |
ತತ್ತ್ವವನು || ತಿಳಿ | ಸತ್ಯವನು ||
ಬಾ ಬಾ ಕೆಳೆಯನೆ || 1 || 385 ||

**ಕಂದ**
ಗುರುಪುತ್ರಿಯ ಮನಮಂ ಕಚ |
ನರಿಯಂ ನಿರ್ಮೋಹ ಸೇವಕನ ರೀತಿಯೊಳುಂ ||
ಪರಿಚರ್ಯೆಯ ದಿನ ದಿನಗೈ |
ದಿರಲೊಂದಿನ ಕುಶವನರಸುತ್ತೈತರುತಿರ್ದಂ || 1 || 386 ||

**ಸೌರಾಷ್ಟ್ರ - ತ್ರಿವುಡೆ**
ಕಂಡ ಬೇಟೆಯನಾಡಿ ಬರುವ ಬ್ರ |
ಶುಂಡಿ ತೇಜೋಮಯನನಚ್ಚರಿ |
ಗೊಂಡನಾರೀ ತರಳ ಪೂರ್ವದಿ | ಕಂಡುದಿಲ್ಲ || 1 ||
ಆರೆಲಾ ನಿರ್ಭಯದಿ ನಮ್ಮವ |
ರೂರ ಪೊಕ್ಕಿಹೆ ದಾರಿ ತಪ್ಪಿತೆ |
ಘೋರ ಕಾರಣವರುಹು ಕ್ಷಮಿಪೆನು | ದಾರಿ ನಾನು || 2 || 388 ||

**ಕಾಪಿ - ಅಷ್ಟ**
ಬೆದರಿಪುದೇಕೆ ನೀನೆನ್ನ | ಸುತ |
ತ್ರಿದಶಗುರುಗೆ ಕಚನೆಂಬುವರೆನ್ನ ||
ಸದಮಲ ವಿದ್ಯಾರ್ಜನೆಯನು | ಶಾಸ್ತ್ರ |
ವಿದ ಶುಕ್ರಾಚಾರ್ಯರೊಳ್ ಗೈಯುತ್ತಲಿಹೆನು || 1 || 389 ||

**ಭೈರವಿ - ಏಕ**
ಆರಾರಾರೆಲೊ ಬಡವ | ನೀ |
ನಾರಪ್ಪಣೆಯಿಂ ಗುರುವ ||
ಸೇರಿದೆ ಪೇಳ್ದಿಯ ಸತ್ಯ | ತಲೆ |
ಹಾರಿಪೆ ನುಡಿದರೆ ಮಿಥ್ಯ || 1 || 390 ||

**ಕಾಪಿ - ಅಷ್ಟ**
ಕದ್ದು ಕಲಿಯಬಂದುದಲ್ಲ | ಸತ್ಯ |
ವಿದ್ದ ಹೊರತು ವಿದ್ಯೆ ಹೊದ್ದುವುದಿಲ್ಲ ||
ಸಿದ್ಧಭಾರ್ಗವ ಲೋಕ ಗುರುವು | ವಿದ್ಯೆ |
ಬುದ್ಧಿ ಬೋಧಿಸೆ ಬೇಕಾರಪ್ಪಣೆ ತೃಣವು || 1 || 391 ||

**ಭೈರವಿ - ಏಕ**
ಬೇಡವೆ ನಿನಗಪ್ಪಣೆಯು | ಕೇ |
ಡಾಡಿಯೆ ಗುರುವಿಗೆ ನೀನು ||
ಮಾಡಿದ ಮೋಡಿಯನರಿವೆ | ಈ |
ನಾಡಿನೊಡೆಯಗಿದನೊರೆವೆ || 1 ||
ಕೆಂಗಣ್ಣುರಿಸುತ ಖಳನು | ನಡೆ |
ದಂಗವ ಕಂಡಾ ಕಚನು ||
ಹಿಂಗದು ದುರ್ಗುಣವಕಟ | ಇರೆ |
ತುಂಗಮುನೀಶ್ವರ ನಿಕಟ || 2 || 393 ||

**ವಾರ್ಧಕ**
ಉಶನಾಶ್ರಮದಿ ಕಚಂ ಸೇರ್ದ ಮೇಲ್ ಮುನಿ ದೈತ್ಯ |
ವಿಸರದಭ್ಯುದಯಚಿಂತಕನಾಗಿ ಕಾಲಮಂ |
ವೃಷಪರ್ವಭವನದೊಳು ಕಳೆಯುತಿರೆ ಸಂಸರ್ಗದೋಷದಿಂದಾಯ್ತು ಸುರೆಯ ||
ವ್ಯಸನವೇನೆಂಬೆ ನೀಚರ ಸಂಗ ಕುಡಿನೋಟ |
ದೆಸಕದಿಂ ಜಗವ ಧಗಧಗಿಪ ಮಹಿಮಾನ್ವಿತನ |
ಬಸವಳಿಸಿತೆನೆ ಮದ್ಯ ವಿಷಯಲಾಲಸಿಗಳಂ ಕುಸುರಿದರಿಯದೆ ಶಿವ ಶಿವ || 1 || 394 ||

**ಕೇದಾರಗೌಳ - ಝಂಪೆ**
ಕಂಡನೆಚ್ಚರಿಸೆ ದೊರೆಯ | ಭೃತ್ಯನು ಬ್ರ |
ಶುಂಡಿ ಕಚ್ಚಿದನು ಕಿವಿಯ ||
ಕಂಡೆ ದಾರಿಯಲೋರ್ವನ | ಗುರುವಿದ್ಯೆ |
ಕೊಂಡು ಪೋಗುವ ಪೋರನ || 1 ||

ದೇವಗುರುತನುಜ ಕಚನು | ಗುರುಶುಕ್ರ |
ರಾವಾಸದೊಳಗಿರ್ಪನು ||
ಆವ ತಂತ್ರವೊ ತಿಳಿಯದು | ಪ್ರತಿತಂತ್ರ |
ನಾವು ಹೂಡುವುದುಚಿತವು || 2 || 396 ||

**ಘಂಟಾರವ - ಅಷ್ಟ**
ಏನಿದಚ್ಚರಿ ಗುರುವು ಬೃಹಸ್ಪತಿ ||
ಸೂನುವನು ಸಂ | ಮಾನಿಸುತ್ತಿಹ |
ದಾನವರಿಗಪಚಾರವು || 1 ||
ಕಂಡರಾತನ ಕೊಚ್ಚಿ ಕೊಲ್ಲಲವೊ ಬೃ ||
ಶುಂಡಿ ಭಾರ್ಗವನರಿಯದೋಲವ |
ನಂಡೆಲೆಯುತಿಹ ಸಮಯದಿ || 2 || 398 ||

**ಪಹಡಿ - ಅಷ್ಟ**
ತುರು ಮಂದೆಯನು ಕಾಯ್ದು ಕಚನು | ಬಂದು |
ಮರದೆಡೆಯೊಳು ವಿಶ್ರಾಂತಿಯನು | ಗೈದು |
ಸರಸಿಯೊಳ್ ನೀರ್ಗುಡಿಸಿದನು || ಮೆಯ್ಯ |
ಮರೆತ ಸಂತೋಷದಿ | ಗಿರಿಯುತ್ತುಂಗಕೆ, ಕುಣಿ |
ವೆರಳೆಗೆ ನಭವೇರಿ | ನಲಿವ ಬಾನಾಡಿಗೆ || 1 ||
ಅಂಬರದಿಂದ ಧುಮ್ಮಿಕ್ಕಿ | ಮೀನ |
ತುಂಬಿ ಬಾಯೊಳಗೆ ಬೆಳ್ಳಕ್ಕಿ | ರೆಕ್ಕೆ |
ಯಂ ಬೀಸಿ ನೆಗೆಯಿತು ಸೊಕ್ಕಿ || ಬಾನ |
ಚುಂಬಿಸಿ ಮೆರೆವ ಕ | ದಂಬಾದಿ ವೃಕ್ಷಗ |
ಳಿಂಬಿಲ್ಲದಂತಿರೆ | ಸಂಭ್ರಮಿಸಿದ ಕಚ || 2 ||
ದೂರದಿಂ ಕಂಡಡಗುತ್ತ | ಬಂದ |
ಕ್ರೂರಕರ್ಮನು ಕಚನತ್ತ | ಹತ್ತೆ |
ಸಾರಿ ಪಿಡಿದು ಬೊಬ್ಬಿಡುತ್ತ || ಕೈಯ |
ಕೂರಸಿಯನು ನೆಗ | ಹುತ್ತ ಪೋರನೆ ವಿದ್ಯಾ |
ಚೋರನೆ ನಿನ್ನ ನೀ | ಗಾರು ರಕ್ಷಿಸುವರು || 3 || 401 ||

**ತುಜಾವಂತು - ಝಂಪೆ**
ವಾಸಿ ನಿಮ್ಮೊಡನಿಲ್ಲ ದೋಷಗೈದಿಲ್ಲ |
ಮೋಸ ವಂಚನೆ ಕಪಟ ದ್ವೇಷದರಿವಿಲ್ಲ ||
ಭೂಸುರಾತ್ಮಜನೆನ್ನ ಕೊಲ್ಲುವುದು ಹೊಲ್ಲ |
ಆಸುರೀಗುಣವು ಕೊಲೆ ಧೀರನಿಗೆ ಸಲ್ಲ || 1 || 402 ||

**ಸೌರಾಷ್ಟ್ರ - ತ್ರಿವುಡೆ**
ಎತ್ತಿರುವ ಕತ್ತಿಯಲಿ ಮೃತ್ಯುವು |
ನರ್ತಿಸುತ್ತಿದೆ ಪೇಳು ಯಮನಿಗೆ |
ತತ್ವಗಳನೆನ್ನುತ್ತ ಕತ್ತನು | ಕತ್ತರಿಸಿದ || 1 ||
ಕಡಿ ಕಡಿಯುತಡವಿಯ ಮೃಗಂಗಳ |
ಗಡಣ ತಿನಲೆಂದೆಸೆದು ಹುಡುಗನ |
ಗೊಡವೆ ತೀರಿತೆನುತ್ತ ನಡೆದನು | ಒಡೆಯಗರುಹೆ || 2 || 404 ||

**ಸೌರಾಷ್ಟ್ರ - ಅಷ್ಟ**
ಹೊತ್ತು ಕಂತುತಲಿದೆ | ಮಿತ್ರನೈತರಲಿಲ್ಲ | ತಂದೆ ಕೇಳು || ಪೂರ್ಣ |
ಕತ್ತಲಾವರಿಸಿತು ಹಸುಗಳೈತಂದವು | ತಂದೆ ಕೇಳು || 1 ||
ದುಷ್ಟ ದಾನವರೇನ | ಗೈದರೊ ಕಚನನ್ನು | ತಂದೆ ಕೇಳು || ಸಂಧ್ಯಾ |
ನುಷ್ಠಾನ ಸಮಯವನೆಂದೂ ಮೀರಿದನಲ್ಲ | ತಂದೆ ಕೇಳು || 2 ||
ಬರುವ ಸೈರಿಸೆ ಬಾಲೆ | ಬರಿದೇತಕಾತಂಕ | ದೇವಯಾನಿ || ದೇವ |
ಗುರುವಿನ ಸುತನವ ಧೈರ್ಯಗುಂದದಿರಮ್ಮ | ದೇವಯಾನಿ || 3 ||
ಒಮ್ಮೆ ನೀವ್ ಕರೆಯಿರಿ | ಸುಮ್ಮಗೇಕಿರುವಿರಿ | ತಂದೆಯೀಗ || ಎನ್ನ |
ನೆಮ್ಮದಿ ಕೆಡುತಿದೆ ದಮ್ಮಯ್ಯ ಹುಡುಕಿರಿ | ತಂದೆಯೀಗ || 4 || 408 ||

**ಕೇದಾರಗೌಳ - ಅಷ್ಟ || ಕಂದ (ಸಮೀಕೃತ ಬಂಧ)**
ದೈತ್ಯಾಚಾರ್ಯಂ ಬಂದಾ | ಪತ್ರನುಮಾರೈದು |
ಧೂರ್ತರಿಂದಳಿದುದನುಂ ||
ಸತ್ಯಾತ್ಮಂ ಶಿಷ್ಯಂ ತಾ | ಸ್ವಾರ್ಥದ ಸಂಚಿಂಗೆ |
ಮೃತ್ಯುಲೋಕಕೆ ಸರಿದಂ || 1 || 409 ||

**ಕೇದಾರಗೌಳ - ಅಷ್ಟ**
ಮುಗುದೆ ಕೇಳ್ ಕಚನನ್ನು ಕೊಂದಿರ್ಪರೀ ದಿನ |
ಹಗಲೊಳೆಂದರಿವಾಯಿತು ||
ಸುಗುಣ ಬಾರನು ಬಾಲೆ ಬಗೆಗಾದುದಾತಂಕ |
ಮಗನಾಗಿದ್ದನು ಮಗಳೆ || 1 ||
ಅಯ್ಯೋಽ ಕೊಂದರೆ ಮುದ್ದು ಮೆಯ್ಯ ತರುಣನನ್ನು |
ಕೈಯೆಂತು ಬಂತವರ್ಗೆ ||
ಹುಯ್ಯಲಿಟ್ಟಳುತ ರಕ್ಷಿಸು ಕಚ ಬಾರದೆ |
ನ್ನಯ್ಯ ಬದುಕೆನೆಂದಳು || 2 ||
ಧೈರ್ಯಗುಂದದಿರೆಂದು ಪರಿಶುದ್ಧನಾಗಿ ಶು |
ಕ್ರಾರ್ಯ ಸಂಜೀವಿನಿಯ ||
ಕಾರ್ಯೋನ್ಮುಖಂಗೈದು ಕರೆದ 'ಬಾ ಕಚ' ನೆಂದಾ |
ಚಾರ್ಯನ ನುಡಿ ಮೊಳಗೆ || 3 || 412 ||

**ಸುರುಟಿ - ಏಕ**
ಕೂಡಿದ ದೇಹದಲಿ | ಜೀವವು |
ಆಡಿತು ಮಂತ್ರದಲಿ ||
ಓಡಿ ಬರುತ ಕೈ | ಜೋಡಿಸಿ ಮಣಿದನು |
ನೋಡಿ ಕುಣಿದು ಮಾ | ತಾಡುತ ನಲಿದಳು || 1 ||
ನಡೆದುದ ಪೇಳೆಂದು | ಸುತೆಪಿತ |
ರೊಡನೆ ಕೇಳಲಂದು ||
ದಡಿಗ ಖಳನು ಕೈ | ಕಡುಗದಿ ಬೆದರಿಸಿ |
ಕಡಿದಾನಂತರ | ನಡೆದುದನರಿಯೆನು || 2 ||
ಖುಲ್ಲರು ದಾನವರು | ನೀನಿ |
ನ್ನೆಲ್ಲಿಗು ಪೋಗದಿರು ||
ಬಲ್ಲಿದ ಪಿತನಿಂ | ದಲ್ಲವೆ ಬಾಳಿದು |
ನಿಲ್ಲದಸುವು ನೀ | ನಿಲ್ಲದೆ ಸಖ ಬಾ || 3 || 415 ||

**ಭಾಮಿನಿ**
ಬಂದೆಡರನರಿತೆಚ್ಚರದ ಗುರು |
ನಂದನೆಯ ಕಣ್ಗಾಪಿನಲಿ ದಿನ |
ಸಂದುದರಿಯದು ಕಚನು ಬದುಕಿದ ರೀತಿ ದುರುಳರಿಗೆ ||
ಬಂದನೊಂದಿನ ಗುರುವಿನಾಶ್ರಮ |
ಕೆಂದಸುರಪತಿ ನೋಡಿದನು ತಾ |
ಕೊಂದೆನೆಂದರಿತಿರ್ದ ತರುಣನು ಬದುಕಿರುವ ಬೆರಗ || 1 || 416 ||

**ಕೇದಾರಗೌಳ - ಝಂಪೆ**
ಮರಳಿ ಮನೆಗೈದಿ ಕರೆದ | ಭೃತ್ಯನನು |
ಗುರುಸುತನ ಕೊಂದು ಕಳೆದ ||
ವರದಿ ಸಟೆಯಹುದೊ ದಿಟವೊ? | ಗುರು ಮನೆಯೊ |
ಳಿರುವುದಾತನ ಪ್ರೇತವೊ || 1 ||
ತಿಂದ ಮನೆಗೆರಡೆಣಿಸುವ | ದುರ್ಬುದ್ಧಿ |
ಪೊಂದಿರುವರನು ನಂಬುವ ||
ಮಂದಮತಿ ನಾನಾದೆನು | ಕಚನ ಕೊ |
ಲ್ಲೆಂದರೇಂಗೈದೆ ನೀನು || 2 ||
ಕಡಿದೊಗೆದೆ ನಿಮ್ಮಾಜ್ಞೆಯೊಳ್ | ಬಾಲಕನ |
ಅಡಗ ಚೆಲ್ಲಿದೆನಡವಿಯೊಳ್ ||
ಒಡೆಯ ಸಂಶಯ ಜೀವವ | ನೀಡನೇಂ |
ಮೃಡಮಂತ್ರದಿಂ ಭಾರ್ಗವ || 3 || 419 ||

**ಭೈರವಿ - ಅಷ್ಟ**
ಗುರುವಿಂತು ವರ್ತಿಸಲು | ಯೋಚಿಸಿ ನಾವೆ |
ಚ್ಚರದಿಂದ ಬದುಕಿಸಲು ||
ಬರದ ತಂತ್ರವಗೈದು | ಸುರಲೋಕಕಾ ಕಚ |
ತೆರಳದಂದದಿ ಮಾಳ್ಪುದು || 1 ||
ಚಿಂತಿಸಿ ತಂತ್ರಗಳ | ಕೈಗೂಡದ |
ತ್ಯಂತ ಷಡ್ಯಂತ್ರಗಳ ||
ಭ್ರಾಂತಮನನು ಸುರೆ | ಯೊಳು ಗುರುವಿಗೆ ತಿರು |
ಮಂತ್ರವ ಕಂಡಿರುಳು || 2 || 421 ||

**ಸೌರಾಷ್ಟ್ರ - ತ್ರಿವುಡೆ**
ದೇವತಾರ್ಚನೆಗಾಗಿ ಬೆಳಗಿನ |
ಜಾವದಲಿ ಸದ್ಭಾವದಲಿ ಕಚ |
ಹೂವ ಕೊಯ್ಯುತ ಬರಲು ಕಂಡಾ | ದೇವವೈರಿ || 1 ||
ತಡೆದು ಬಾಯನು ಕಟ್ಟಿ ಸೆಳೆದಾ |
ದಡಿಗ ದೂರಕ್ಕೊಯ್ಯುತಾಪ್ತರ |
ಗಡಣ ಮಧ್ಯದಿ ಕೊಂದು ಶವವನು | ಸುಡುತ ಬಳಿಕ || 2 ||
ಕದಡಿ ಮದ್ಯದಿ ಕಚನ ಭಸ್ಮವ |
ಹದಗೊಳಿಸಿ ತುಂಬಿಸುತ ಪಾತ್ರೆಯ |
ಮಧುವನೀಯಲು ಗುರುವಿಗೈದ ವಿ | ಬುಧ ವಿರೋಧಿ || 3 || 424 ||

**ಮಧ್ಯಮಾವತಿ - ಆದಿ**
ದೈನ್ಯವೆ ಮೆಯ್ವೆತ್ತು ದೈತ್ಯನೈತರುತ |
ಮಾನ್ಯ ಮುನೀಂದ್ರನೆ ಪರಸುವುದೆನುತ ||
ಧನ್ಯನಾಗುವೆ ಪುಣ್ಯಾತ್ಮನೆ ಸೇವೆಗೊಳುತ |
ಎನ್ನನ್ನುದ್ಧರಿಸೆಂದ ಪದಕೆ ನಮಿಸುತ || 1 ||
ಅಸುರೇಶ ಶುಭವಾಗಲೇಳೇನು ಬಂದೆ |
ವೃಷಪರ್ವ ಪಾನಪಾತ್ರೆಯೊಳೇನು ತಂದೆ ||
ಬೆಸಸೇನು ಕಾರ್ಯವಾಗಲು ಬೇಕೆನ್ನಿಂದೆ |
ವ್ಯಸನವೇಂ ದೈನ್ಯ ನೋಡುವೆ ಹಿಂದೆ ಮುಂದೆ || 2 ||
ಗುರುವರ್ಯ ತವಪಾದಸೇವೆಗೀ ದಿನದ |
ಸುರೆಯ ತಂದಿರುವೆ ಸೇವಿಸಲದೇ ಬಿನದ ||
ಪರಿಮಳಿಸುವ ಮಧುವೀಂಟಿ ತೋಷಿಪುದ |
ಪರಿಕಿಸಲ್ಕೆತಂದೆನೆನುತಲೊಪ್ಪಿಸಿದ || 3 || 427 ||

**ಶಂಕರಾಭರಣ - ಆದಿ**
ಏಳು ಭಕ್ತಿಯಿಂದ ದಾನ | ವಾಳಿಮೌಳಿ ತರಲು ಸಾನು |
ಕೂಲವಾಯ್ತು ಕುಡಿವೆ ಸುರೆಯ | ಹಾಳಿದಲ್ಲವು || 1 ||
ಎತ್ತಿ ಬಿಂದಿಗೆಯನು ಕುಡಿವ | ಕೃತ್ಯ ಕಾಣುತಸುರನುಬ್ಬಿ |
ಸತ್ತನಿಂದು ಪೂರ್ತಿ ಕಚನೆ | ನುತ್ತ ನಡೆದನು || 2 || 429 ||

**ಸಾಂಗತ್ಯ - ರೂಪಕ**
ಬಂದಾನು ಕಚನೆಂದು ದೇವಯಾನಿಯು ಕಾಯ್ದು |
ಸಂಧ್ಯಾಸಮಯವಾಗೆ ಕರೆದು ||
ಬಂದುದೇನಾಪತ್ತೆಂದಾತಂಕಗೊಳ್ಳುತ್ತ |
ತಂದೆಗೆಂದಳು ಕಚನಿಲ್ಲ || 1 ||
ಮತ್ತೇನಾದುದೊ ನಿಮ್ಮ ಧೂರ್ತಶಿಷ್ಯರ ಕಾಟ |
ಮತ್ತದೇ ರಗಳೆಯಾಯ್ತಪ್ಪ ||
ಎತ್ತ ಪೋದನೊ ಕಾಣೆ ನೋಡಿರಪ್ಪಯ್ಯ ನಿ |
ಮ್ಮುತ್ತಮ ಶಿಷ್ಯನನೊಮ್ಮೆ || 2 ||
ನೋಡಿ ದಿವ್ಯಜ್ಞಾನದಿಂ ಮತ್ತೆ ಕೊಂದರೀ |
ಕೇಡಿಗರೆಂದು ಸುಯ್ಯುತ್ತ ||
ಮಾಡಲೇನೆನೆ ಮತ್ತೆ ಬದುಕಿಸಿರೆನೆ ತೊಳ |
ಲಾಡಿದ ಮಂತ್ರಾಪವ್ಯಯಕೆ || 3 || 432 ||

**ಶಂಕರಾಭರಣ - ತ್ರಿವುಡೆ (ಪ್ರಭೇದ)**
ಆಟವಾಯ್ತೇನೆಂಬೆ ಗಂಗಾ |
ಜೂಟ ತಪಕೊಲಿದಿತ್ತ ಮೃತ್ಯು ವಿ |
ನಾಟಗೆಲ್ಲುವ ಮಂತ್ರ ದೈತ್ಯರ |
ಹೂಟವಳಿಸಲು ಬಳಸಿದೆ || ಮಗಳಿಗಾಗಿ || 1 ||
ಶುದ್ಧಮನನಾಚಮನಗೈಯುತ |
ಲೆದ್ದು ಬಾ ಕಚನೆಂದು ಮಂತ್ರದಿ |
ಸಿದ್ಧಮುನಿ ಕರೆಯಲ್ಕೆ ದೇಹದೊಳು |
ದ್ಧರಿಸು ಗುರುವೆನ್ನುವ || ದನಿಯ ಕೇಳಿ || 2 || 434 ||

**ಘಂಟಾರವ - ಅಷ್ಟ**
ಅರಿತನಾಕ್ಷಣ ಸುರೆಯೊಳು ಭಸ್ಮವ ||
ಕರಡಿ ಕುಡಿಸಿದ ದುರುಳನೆನಗೆಂ |
ದುರಿದು ಶಾಪವನಿತ್ತನು || 1 ||
ಬಾಲನೀತ ನಿರ್ದೋಷಿಯಾಗಿರೆ ಕೊಂದ ||
ಖೂಳರಿರ ಸುರರಿಂದ ಸೋಲನು |
ಗಾಲ ಪಡೆಯುತ ಕೆಡುವಿರಿ || 2 ||
ಸುರೆಯ ಪಾನವು ಬ್ರಹ್ಮಹತ್ಯಕೆ ಸಮ ||
ಧರಣಿವಿಬುಧಗೆ ಮುಂದೆ ಬುದ್ಧಿಯ |
ಮರೆಪ ಮದ್ಯ ನಿಷಿದ್ಧವು || 3 || 437 ||

**ವಾರ್ಧಕ**
ಉದರದುರಿಯಲಿ ಸಿಕ್ಕಿ ಬೇಯುತಿಹೆ ರಕ್ಷಿಸೆಂ |
ದೊದರಿ ಮೊರೆಯಿಡುವ ಕಚನಂ ಹೊರಗೆ ಕರೆಯಲಿ |
ಕ್ಕಿದೆ ಮಾರ್ಗ ಪೊಡೆಯೊಡೆದು ಬಪ್ಪುದಾಗಾನಳಿವೆನಲ್ಲದಿರಲವನುಳಿಯನು ||
ಹದನೇನು ಪೇಳೆನಲ್ಕುಭಯರೊಳಗೋರ್ವನಿ |
ಲ್ಲದಡೆ ನಿಲ್ಲದು ಜೀವ ತಂದೆ ನಾವೆಲ್ಲರಿಂ |
ಬದುಕಬೇಕೀ ಜಗದ ಶ್ರೇಷ್ಠ ಸಾಧಕ ಮುನಿಪಗೆಡರೆ ಬಂದೀ ಕಷ್ಟವು || 1 || 438 ||

**ಮೋಹನ - ಅಷ್ಟ**
ಚೆನ್ನಾಯ್ತು ಸುಕುಮಾರಕ | ವಿದ್ಯಾರ್ಹ ಸಂ |
ಪನ್ನನಾಗಿಹೆ ಸಾಧಕ ||
ಎನ್ನುದರವ ಪೊಕ್ಕು | ಜೀರ್ಣಗೊಳ್ಳದ ನೀನ |
ತ್ಯುನ್ನತನೆಂಬುದ |
ಕಿನ್ನಿಲ್ಲ ಸಂಶಯ || ಚೆನ್ನಾಯ್ತು || 1 ||
ಭೋಗಿಭೂಷಣನಿತ್ತಿಹ | ಮಂತ್ರವ ನಿನ |
ಗಾಗಿ ನೀಡುವೆ ನಿಸ್ಪೃಹ||
ಸಾಗಿಬಾ ಪೊಡೆಯೊಡೆದಣುಗ ನೀ ಕರ್ತವ್ಯ |
ವೇಗೈವುದೆನ್ನುತಲರಿತುದ್ಧಾರಕನಾಗು || ಚೆನ್ನಾಯ್ತು || 2 || 440 ||

**ಕಂದ**
ಯೋಗದೊಳೊಳಮೊಗನಾಗುತ |
ಯೋಗೇಶ್ವರನಿತ್ತ ಮಂತ್ರವಂದುಪದೇಶಂ ||
ತಾ ಗೈಯ್ಯಲ್ ಸಿದ್ಧಿಸಿಕೊಂ |
ಡಾಗಲೆ ಪೊರಮಟ್ಟು ಕಂಡು ಮೃತಗುರುವರನಂ || 1 || 441 ||

**ಮಧುಮಾಧವಿ - ತ್ರಿವುಡೆ**
ಮಂತ್ರಮಂ ಪಠಿಸಲ್ಕೆ ಗುರುವ |
ತ್ಯಂತ ಹರುಷಿತನಾಗುತೆದ್ದನು |
ಸಂತಸದಿ ಶುಕ್ರಜೆಯು ನೆಮ್ಮದಿ |
ಯಾಂತಳೀರ್ವರ ಬದುಕಿಗೆ || 1 ||
ಇರುಳು ಕಳೆಯಲು ನಿತ್ಯಕರ್ಮವ |
ವಿರಚಿಸುತ ಗುರುಸುತನ ಕರೆದನು |
ತರಳ ಸಾಧನೆಯಿಂದ ವಿದ್ಯಾ |
ಭರಿತನಾದೈ ತೆರಳು ನೀ || 2 ||

ಬದುಕು ಸದ್ಧರ್ಮದಲಿ ಗುರುವಿಂ |
ದಧಿಕನೆನಿಸೈ ಶಿಷ್ಯ ನಿನ್ನ |
ಭ್ಯುದಯವೆನ್ನೇಳಿಗೆಯು ತೆರಳೆನೆ |
ಪದಕೆ ನಮಿಸಲು ಹರಸಿದ || 3 ||
ಉಳಿಸಿ ಕಾಯವ ಜೀವವೀಯುತ |
ಬೆಳೆಸಿದಿರಿ ಬುದ್ಧಿಯನು ತಿದ್ದುತ |
ಕಳಿಸಿಕೊಡಿರೆಂದೆರಗಿದನ ಸಂ |
ಚಲಿತ ಮನ ಬೀಳ್ಕೊಂಡನು || 4 || 445 ||

**ಜಂಜೂಟಿ - ಅಷ್ಟ**
ದೇವಿ ಬೀಳ್ಕೊಡು ದೇವಪುರಕೆ | ಗುರು |
ದೇವ ನಪ್ಪಣೆಯಾಂತು ಗೃಹಕೆ ||
ಪಾವನನಾದೆ ಸದ್ಭಾವೋಪಚಾರದಿಂ ||
ದೀ ವಸುಂಧರೆ ಸ್ವರ್ಗವಾಯಿತು |
ದೇವಯಾನಿಯೆ ಪೋಗಿ ಬರುವೆನೆ || ದೇವಿ || 1 || 446 ||

**ಬೇಹಾಗ್ - ರೂಪಕ**
ಮಾರಸದೃಶ ರೂಪದರಸ |
ನೀರ ಗುಟ್ಟ ಪೇಳ್ವೆ ನಾ ||
ನೀರೆಯಾಗಿ ಬೆರೆವ ಮನಸು |
ಚಾರು ಸುಂದರಾಂಗನಾ || ಪ ||
ಕಣ್ಣನೋಟ ಮೊದಲ ಬೇಟ |
ಕೆನ್ನ ಕರೆದುದೋಪನೆ ||
ನಿನ್ನ ವಿದ್ಯೆ ಪೂರ್ಣಶ್ರುದ್ಧೆ |
ಗೆನ್ನ ಕಾಲಯಾಪನೆ || 1 || 447 ||

**ಕೇದಾರಗೌಳ - ಅಷ್ಟ**
ಹರಾ ಹರಾ ಗುರುಜಾತೆ ಸಹಭವೆಗೆಣೆ ನೀನಿಂ |
ತೊರೆವೆ ದುರ್ಭಾಷೆಯನು ||
ಕರಣತ್ರಯದಿ ಸಹೋದರಿಯೆಂದಾಚರಿಸಿದೆ |
ಹರಸು ನೀನಕ್ಕರೆಯಿಂ || 1 ||
ಒಲಿದು ಮೆಚ್ಚಿದೆ ನಲ್ಲ ಹೃದಯಕಮಲದಲ್ಲಿ |
ನೆಲೆಗೊಳಿಸಿದೆ ನಿನ್ನನು ||
ನಳಿದೋಳ್ಗಳಿಂದಪ್ಪಿಯೊಪ್ಪಿಸಿಕೊಂಬೆ ಕಾ |
ದಲ ಬಾ ಕಾದಿರುವೆ ನಾನು || 2 || 449 ||

**ಸಾಂಗತ್ಯ - ರೂಪಕ**
ಕಯ್ಯ ಮುಗಿವೆ ದೇವಿ ಮೆಯ್ಯ ಪಡೆದೆ ನಾ ನಿ |
ನ್ನಯ್ಯನ ದೇಹದಿಂ ಮರಳಿ ||
ನೆಯ್ಯಲೇಕಲ್ಲದ ಸೊಲ್ಲ ತಮ್ಮನೊಳು ದ |
ಮ್ಮಯ್ಯ ಸರ್ವವ ಬಲ್ಲೆ ನೀನು || 1 ||
ನಂಬಿ ನೀ ಪತಿಯೆಂದು ಬೇಡಿ ತಾತನ ಜೀವ |
ದುಂಬಿದೆ ನಿನಗೆ ನಾ ನೀರ ||
ಸಂಭ್ರಮದಿಂ ಪ್ರಾಯ ದುಂಬಿ ಹೀರುವ ಸುಖ |
ವೆಂಬುವ ಸಂಸಾರಸಾರ || 2 || 451 ||

**ಕೇದಾರಗೌಳ - ಝಂಪೆ**
ಏತಕೀ ಪರಿಯ ಮಾತು | ಸರ್ವಥಾ |
ಪಾತಕಕ್ಕಿಹುದು ಹೇತು ||
ನೀತಿಯಂ ಮೀರೆನೆನುತ | ಪೊರಡೆ ಕಂ |
ಡಾತಗೆಂದಳು ತಡೆಯುತ || 1 ||
ಉದರದಿಂ ಪೊರಟು ಬಂದು | ಕಲ್ಪಿಸಿದೆ |
ಉದಿಸಿ ಬಂದಿರ್ಪೆನೆಂದು ||
ಮಧುರಸಸ್ವಪ್ನದ ಸೌಧವ | ಕಟ್ಟಿದೆನು |
ಸದೆಯಬೇಡದರ ಸೊಗವ || 2 ||

ಗುರುಪುತ್ರಿ ನೀ ಪೂಜ್ಯಳು | ಶಾಸ್ತ್ರಾರ್ಥ |
ವರಿತವಳು ಸರ್ವಜ್ಞಳು ||
ಸುರದಾನವಾಚಾರ್ಯರ | ಮಕ್ಕಳಾ |
ವರಿತು ನಡೆದರೆ ಶುಭಕರ || 3 ||
ಬಿಡಬೇಡ ಬಾರೊ ಕಚ ನೀ | ಎನ್ನುತಲಿ |
ಪಿಡಿದೆಳೆಯೆ ದೇವಯಾನಿ ||
ನಡೆವೆ ನೀ ಮುಟ್ಟಬೇಡ | ಎಂದು ಪೊರ |
ಮಡಲು ಬಯಸಿದಳು ಕೇಡ || 4 || 455 ||

**ಕಾಂಬೋಧಿ - ಮಟ್ಟೆ**
ಎನ್ನ ತಂದೆಯಿಂದ ಪಡೆದ ಸಾವ ಗೆಲ್ಲುವ | ಮಂತ್ರ |
ವಿನ್ನು ನಿನಗೆ ಫಲಿಸದಿತ್ತ ನಾನು ಶಾಪವ || 1 ||
ಸತ್ಯಮಾರ್ಗವೆಲ್ಲ ವಿದ್ಯೆಗಿಂತಲುನ್ನತ || ಮುಂದೆ |
ಕ್ಷತ್ರಿಯನನು ವರಿಸೆನುತ್ತ ನಡೆದ ಗುರುಸುತ || 2 ||
ಭಗ್ನಪ್ರೇಮದಿಂದ ಲಲನೆ ಖಿನ್ನಳಾದಳು || ಕಚನು |
ಸಗ್ಗವೇರಿ ಪಿತಗೆ ಪೇಳ್ದ ತೋಷಗೊಳ್ಳಲು || 3 || 458 ||

**ವಾರ್ಧಕ**
ದೇವಗುರುವಿಂಗೀ ವಿಚಾರವನ್ನರುಹೆ ಕಚ |
ದೇವತತಿಗಾನಂದ ಸಂದೋಹ ಸಂದಣಿಸೆ |
ಸಾವ ಮೀರುವ ಸಿದ್ಧಿ ಬಯಲಪ್ಪುದೆಂದರಿತು ಭಾವನಿರ್ಭರರಾದರು ||
ದೇವಯಾನಿಯ ಪರಿಯನರಿತು ಸಾಂತ್ವನಗಯ್ಯು |
ತಾವಾವ ಸಿದ್ಧಿಯಿಂದುದ್ಧರಿಸ ಬಯಸಿದರು |
ತಾವೆ ಸ್ವಾರ್ಥಿಗಳಾಗಿ ದುಡುಕಿ ಕೆಡಿಸಿದರು ಸಂಜೀವಿನೀ ಮಂತ್ರ ಪೋಯ್ತು || 1 || 459 ||

**ಸೌರಾಷ್ಟ್ರ - ತ್ರಿವುಡೆ**
ಕರೆದು ದಾನವರೊಡೆಯಗೆಂದನು |
ದುರುಳ ನಿನ್ನಯ ಸ್ವಾರ್ಥದಿಂದಾ |
ಪರಶಿವನ ವರಮಂತ್ರಸಿದ್ಧಿಯು | ತೊರೆಯಿತೆನ್ನ || 1 ||
ನಾನು ಸಾಧಿಸಿ ಪಡೆದ ಮಂತ್ರವು |
ಹಾನಿಯಾಯಿತು ಕಚನ ಸೇರಿತು |
ಮ್ಲಾನವಾಯ್ತು ೦ೈ ದನುಜಕುಲ ನಾ | ನೇನಗೈವೆ || 2 ||
ಎನ್ನ ಸಾಧನೆ ಮಂತ್ರವಿದು ಪರ |
ರನ್ನು ಹೊಂದಲು ಉಪ್ಪವಾ ಗುರು |
ಚಿಣ್ಣ ಪಡೆದನು ದೇವತೆಗಳಿಂ | ಗಿನ್ನು ಸುಖವು || 3 || 462 ||

**ಕಾಂಬೋಧಿ - ರೂಪಕ**
ಆವ ವಂಚನೆ | ನೇಯ ಬಂದನೊ |
ದೇವ ಬಾಲ ತಾ | ನೆಂಬ ಸಂಶಯ ||
ಭಾವ ಬಲಿಯಲು | ಕೊಂದೆ ಸತ್ಯವು |
ನೋವು ನಿಮಗಿರೆ | ಕ್ಷಮಿಸಿ ಗುರುಗಳೆ || 1 ||
ಇದಿರು ನಿಲದಿರು | ಕಚನ ಭಸ್ಮವ |
ಕದಡಿ ಸುರೆಯೊಳು | ದೀನಭಾವದಿ ||
ಮಧುವಿದೆನ್ನುತ | ಕುಡಿಸಿ ಕೆಡಿಸಿದೆ |
ಸದನಕೈದೆಲೊ | ವದನ ತೋರದೆ || 2 || 464 ||

**ಭಾಮಿನಿ**
ಗುರು ಮುನಿಯೆ ಕೆಲಕಾಲ ಬೇಡಲು ||
ಮರಳಿ ಸಕ್ರಿಯನಾದನಸುರನ |
ತರಳೆಗಾಯ್ತತಿಸ್ನೇಹ ಶುಕ್ರಾತ್ಮಜೆಯೊಳೊಂದಿವಸ ||
ವಿರಸ ಜಲಕೇಳಿಯಲಿ ಮೂಡಲು |
ಪರಿಭವಿಸಿ ನೂಕಿಸಲು ಕೂಪಕೆ |
ಧರಣಿಪಾಲ ಯಯಾತಿ ರಕ್ಷಿಸಿ ವರಿಸಿದನು ಸತಿಯ || 1 ||

ವಿರಚಿಸುತ ಲೋಕಕ್ಕೆ ನೀತಿಯ |
ಪರಮ ದೈತ್ಯಾಚಾರ್ಯನೆನಿಸುತ |
ಸರುವ ಶಾಸ್ತ್ರವಿಶಾರದನು ತಾನೆನಿಸಿ ಮೆರೆದಿರಲು ||
ಸರಸಿಜೋದ್ಭವ ಹರಿಹರಾದ್ಯರು |
ಸುರರು ಗ್ರಹಪಟ್ಟವನು ಕಟ್ಟಲು |
ಮೆರೆವ ತೇಜೋಮಯನು ಪೊರೆಯುತ್ತಿರುವನೀ ಜಗವ || 2 || 466 ||

**ಮಂಗಲ :**
**ಸಾಂಗತ್ಯ - ರೂಪಕ - ಅಷ್ಟ - ಝಂಪೆ - ಏಕ**
ಪ್ರಣವಸ್ವರೂಪಂಗೆ | ಗಣನಾಥತಾತಂಗೆ |
ವನಧಿಜಾತೆಯ ನಾಥ ಹರಿಗೆ ||
ವಿನುತ ವಾಣೀಶಂಗೆ | ಅನಿಮಿಷಾದಿಗಳಿಂಗೆ |
ಮನಕೆ ಮಂಗಲವೀವ ಕಲೆಗೆ || 1 ||
ನಂದಿನೀತಟದಲ್ಲಿ | ನಿಂದು ಲೋಕವ ಕಾಯ |
ಲೆಂದುದ್ಭವಿಸಿದ ಭ್ರಾಮರಿಗೆ ||
ಕೊಂದು ದೈತ್ಯರ ಭಕ್ತ | ವೃಂದೋದ್ಧರಣ ಗೈದು |
ಇಂದು ಕಾಂತಿಯೊಳೊಪ್ಪುವಳಿಗೆ || 2 || 468 ||
|| ಜಯ ಮಂಗಲಂ ನಿತ್ಯ ಶುಭ ಮಂಗಲಂ ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಉಡುಪಿ ಯಕ್ಷಗಾನ ಕೇಂದ್ರ

**ಪ್ರಸಂಗ ಪ್ರತಿ ಆಧಾರ:** ಉಡುಪಿ ಯಕ್ಷಗಾನ ಕೇಂದ್ರ ಪ್ರಕಟಿತ ಯಕ್ಷಗಾನ ಪ್ರಸಂಗ ಮಾಲಿಕಾ

**ಪ್ರಸಂಗ ಪ್ರತಿ ಕೊಟ್ಟವರು:** ಶ್ರೀನಿಧಿ ಡಿ. ಎಸ್.

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಶ್ರೀನಿಧಿ ಡಿ. ಎಸ್.

**ಅಂತರಜಾಲ ಪ್ರತಿ ಬರವಣಿಗೆ:** ಶ್ರೀನಿಧಿ ಡಿ. ಎಸ್.

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ